ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಸಾಹಿತ್ಯಅಧ್ಯಯನ ವಿಭಾಗ
ವಿದ್ಯಾರಣ್ಯ-೫೮೩೨೭೬

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ ೨೦೧೫-೧೬

ವಿಷಯ

# ಲಕ್ಷ್ಮೀಪತಿಕೋಲಾರ : ಪರಂಪರೆ ಮತ್ತು ಸಂಸ್ಕೃತಿನಿಷ್ಠ ನೆಲೆಗಳ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ನಾಗೇಶ್ ಎನ್
ನೋ.ಸಂಖ್ಯೆ: ೧೫೨೦೦೧೦೩೦೦೭೫

ಮಾರ್ಗದರ್ಶಕರು
ಡಾ. ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಎಸ್.ಎಲ್.ಎನ್.ಕಾಲೇಜು, ಬೆಂಗಳೂರು-೫೬೦೦೦೨

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾಕೇಂದ್ರ
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕನ್ನಡ ಸಾಹಿತ್ಯಅಧ್ಯಯನ ವಿಭಾಗ
ವಿದ್ಯಾರಣ್ಯ-೫೮೩೨೭೬

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ ೨೦೧೫-೧೬

ವಿಷಯ

# ಲಕ್ಷ್ಮೀಪತಿಕೋಲಾರ : ಪರಂಪರೆ ಮತ್ತು ಸಂಸ್ಕೃತಿನಿಷ್ಠ ನೆಲೆಗಳ ಅಧ್ಯಯನ

ಸಂಶೋಧನಾ ವಿದ್ಯಾರ್ಥಿ
ನಾಗೇಶ್ಎನ್
ನೋ.ಸಂಖ್ಯೆ: ೧೫೨೦೦೧೦೩೦೦೭೫

ಮಾರ್ಗದರ್ಶಕರು
ಡಾ. ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಎಸ್.ಎಲ್.ಎನ್.ಕಾಲೇಜು, ಬೆಂಗಳೂರು-೫೬೦೦೦೨

ಮಾನ್ಯತಾ ಸಂಸ್ಥೆ
ಕನ್ನಡ ಸಾಹಿತ್ಯ ಪರಿಷತ್ತು
ಕನ್ನಡ ಸಂಶೋಧನಾಕೇಂದ್ರ
ಪಂಪ ಮಹಾಕವಿ ರಸ್ತೆ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮

# ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಸಲ್ಲಿಸುತ್ತಿರುವ **ಲಕ್ಷ್ಮೀಪತಿಕೋಲಾರ : ಪರಂಪರೆ ಮತ್ತು ಸಂಸ್ಕೃತಿನಿಷ್ಠ ನೆಲೆಗಳ ಅಧ್ಯಯನ**ಎಂಬ ಶೀರ್ಷಿಕೆಯ ಈ ಎಂ.ಫಿಲ್. ನಿಬಂಧವನ್ನು **ಡಾ.ವೆಂಕಟಪ್ಪ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಎಲ್.ಎನ್.ಕಾಲೇಜು, ಬೆಂಗಳೂರು-೫೬೦೦೦೨,** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲುಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾಇತರೇ ಉದ್ದೇಶಗಳಿಗಾಗಲೀ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Nagesh.N

ದಿನಾಂಕ: 14-09-2016
ಸ್ಥಳ: ಬೆಂಗಳೂರು

ನಾಗೇಶ್.ಎನ್.
ಸಂಶೋಧನಾ ವಿದ್ಯಾರ್ಥಿ
ನೋ.ಸಂಖ್ಯೆ: ೧೫೨೦೦೧೦೩೦೦೭೫

# ಮಾರ್ಗದರ್ಶಕರದೃಢೀಕರಣ ಪತ್ರ

ನಾಗೇಶ್.ಎನ್.ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ **ಲಕ್ಷ್ಮೀಪತಿಕೋಲಾರ : ಪರಂಪರೆ ಮತ್ತು ಸಂಸ್ಕೃತಿನಿಷ್ಠ ನೆಲೆಗಳ ಅಧ್ಯಯನ**ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 14-09-2016
ಸ್ಥಳ: ಬೆಂಗಳೂರು

ಮಾರ್ಗದರ್ಶಕರು
ಡಾ: ವೆಂಕಟಪ್ಪ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಎಸ್.ಎಲ್.ಎನ್.ಕಾಲೇಜು, ಬೆಂಗಳೂರು-೫೬೦೦೦೨

ಡಾ|| ವೆಂಕಟಪ್ಪ, ಎಂ.ಎ., ಪಿಎಚ್.ಡಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಎಸ್.ಎಲ್.ಎನ್. ಕಾಲೇಜು
ಕೋಟೆ, ಬೆಂಗಳೂರು-560 002.

# ಪರಿವಿಡಿ

# ಅಧ್ಯಾಯ – ೦೧

# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

**ಪೀಠಿಕೆ:**

ಬಸವಣ್ಣ, ಶಿವರಾಮ ಕಾರಂತರು, ಕುವೆಂಪು ರವರಂತೆ ಮೇಲ್ವರ್ಗದಲ್ಲಿ ಹುಟ್ಟಿದರೂ ತಳ ಸಮುದಾಯಗಳ ಬಗೆಗೆ ಕಾಳಜಿ ವಹಿಸುವ ಮತ್ತು ನೆಲ ಸಂಸ್ಕೃತಿಗಳೊಟ್ಟಿಗೆ ಸಂವೇದನೆ ಹೊಂದುವ ಲೇಖಕರು ನಮಗೆ ಬೆರಳೆಣಿಕೆಯಷ್ಟು ಸಿಗಬಹುದು.ಅಂತಹ ನೆಲ ಮೂಲ ಸಂಸ್ಕೃತಿಗೆ ಹತ್ತಿರವಾದವರಲ್ಲಿ ಲಕ್ಷ್ಮೀಪತಿ ಕೋಲಾರ ಅವರು ಒಬ್ಬರಾಗಿದ್ದಾರೆ.

ಕನ್ನಡದ ಸಂವೇದನಾಶೀಲ ಲೇಖಕರಾಗಿ ಗುರುತಿಸಿಕೊಂಡ ಲಕ್ಷ್ಮೀಪತಿ ಕೋಲಾರ ಅವರು ೭೦-೮೦ ರ ದಶಕದಲ್ಲಿ ದಲಿತ ಚಳುವಳಿಯ ಪ್ರಾಮಾಣಿಕ ಮತ್ತು ಬದ್ಧತೆಯ ಹೋರಾಟಗಾರರಾಗಿ ಬೆಳಕಿಗೆ ಬಂದ ಲಕ್ಷ್ಮೀಪತಿ ಕೋಲಾರ ಅವರು ಎಡಪಂಕ್ತಿಯ ದರ್ಶನಗಳ ಚಳುವಳಿಗಾಗಿ ತಮ್ಮ ವಿದ್ಯಾಭ್ಯಾಸವನ್ನೇ ಮೊಟಕುಗೊಳಿಸಿದರಲ್ಲದೆ, ಅನಂತರ ಪತ್ರಕರ್ತರಾಗಿ ಸಂಚಿಕೆ, ಸುದ್ದಿಸಂಗಾತಿ, ಆಂದೋಲನ, ಅನಿಕೇತನ, ಸಂಕುಲ, ಅರಗಿಣಿ, ಲೋಕ ಜಾನಪದ, ಹಾಗೂ ಪುಸ್ತಕ ಲೋಕ ಪತ್ರಿಕೆಗಳಲ್ಲಿ ಸಾಮಾಜಿಕ ಎಚ್ಚರದ ಕಾರಣಕ್ಕಾಗಿಯೇ ದುಡಿದರು. ಕಳೆದ ಎರಡು ದಶಕಗಳಿಂದ ಸಾಕ್ಷ್ಯಚಿತ್ರದ ಚಿತ್ರಕತೆ ಹಾಗೂ ನಿರ್ದೇಶನದಲ್ಲೂ ತೊಡಗಿಸಿ ಕೊಂಡಿರುವ ಲಕ್ಷ್ಮೀಪತಿಯವರು, ಚಲನಚಿತ್ರ ಸಾಹಿತಿಯಾಗಿಯೂ ತಮ್ಮ ಛಾಪು ಮೂಡಿಸಿದ್ದಾರೆ. ಅತ್ಯುತ್ತಮ ಸಂಭಾಷಣೆ ಹಾಗೂ ಗೀತರಚನೆಗಾಗಿ ೩ ಭಾರಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿರುವ ಲಕ್ಷ್ಮೀಪತಿಯವರು ಎರಡು ಭಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಗಳಿಗೂ ಪಾತ್ರರಾಗಿದ್ದಾರೆ. ಸಾಂಸ್ಕೃತಿಕ ಒಳನೋಟ ಹಾಗೂ ಸಂಶೋಧನೆಗಳ ಹಿನ್ನೆಲೆಯಲ್ಲಿ ಅವರ ಬಗೆಗಿನ ಆಸಕ್ತಿ ಮತ್ತು ಬರಹ, ಆ ಅಧ್ಯಯನದ ಬಗ್ಗೆ ಅಪಾರ ಕುತೂಹಲವನ್ನು ಮೂಡಿಸಿದೆ.

‘ಪರಂಪರೆ ಎನ್ನುವುದು ಹತ್ತು ಹಲವು ಹೊಳೆಗಳ ಕೂಡು ಹರಿಯುವಿಕೆ. ಪ್ರತಿಯೊಬ್ಬ ಕವಿಯೂ ತನಗೆ ಬೇಕೆನಿಸಿದ ಹೊಳೆಯ ನೀರನ್ನು ಮೊಗೆದು ಕುಡಿಯುತ್ತಾನೆ. ಎಂದರೆ ತನ್ನ ಅಗತ್ಯಗಳಿಗೆ ಅನುಕೂಲವಾದ ಪರಂಪರೆಯನ್ನು ತಾನೇ ಕಟ್ಟಿಕೊಳ್ಳುತ್ತಾನೆ.” ಲಕ್ಷ್ಮೀಪತಿ ಕೋಲಾರ ಅವರು ಸಾಂಸ್ಕೃತಿಕ ಚಿಂತನೆ, ರೈತ ಮತ್ತು ದಲಿತ ಚಳುವಳಿಗಳ ಎಡಪಂಕ್ತಿಯ ಒಡಲಿನಲ್ಲಿ ಹುಟ್ಟಿದುದರಿಂದಲೇ ಮಾನವೀಯವೂ, ಜಾತ್ಯಾತೀತವೂ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ.

“ಲಕ್ಷ್ಮೀಪತಿಯವರ ಸೃಜನಶೀಲತೆ ಕೇವಲ ಕಾವ್ಯಕ್ಕೆ ಮಾತ್ರ ಸೀಮಿತಗೊಂಡಿದ್ದಲ್ಲ. ಸಂಸ್ಕೃತಿ, ಚರಿತ್ರೆ, ಮಾನವಶಾಸ್ತ್ರ, ಪರಿಸರ, ರಾಜಕಾರಣ, ಧರ್ಮ ಹೀಗೆ ಹತ್ತು ಹಲವು ಜ್ಞಾನ ಶಾಖೆಗಳೊಂದಿಗೆ ಅನುಸಂಧಾನಿಸುವ ಬೌದ್ಧಿಕ ಸಾಮರ್ಥ್ಯವನ್ನು ಅಕಾಡೆಮಿ" ಶಿಸ್ತುಗಳ ನೆರವಿಲ್ಲದೆ ಸ್ವಯಂ ಅಧ್ಯಯನದಿಂದ ಸಂಪಾದಿಸಿಕೊಂಡಿದ್ದು ಮಾತ್ರ ಅಚ್ಚರಿಯ ಸಂಗತಿ” (ಅಲ್ಲಮನ ಬಯಲಾಟ ಪುಟ XIII) ಡಾ.ಕೆ.ವೈ ನಾರಾಯಣಸ್ವಾಮಿಯವರು ಲಕ್ಷ್ಮೀಪತಿಯವರ ಸೃಜನಶೀಲ ಕಾರ್ಯ ಪ್ರವೃತ್ತಿಯ ಬಗ್ಗೆ ಅಭಿಪ್ರಾಯ ಪಟ್ಟಿದ್ದಾರೆ.

## ಅಧ್ಯಯನದ ಉದ್ದೇಶ:

ಲಕ್ಷ್ಮೀಪತಿ ಕೋಲಾರ ಅವರು ೨ ದಶಕಗಳಿಗೂ ಹೆಚ್ಚು ಕಾಲ ದಲಿತ ಚಳುವಳಿಯ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದು ಆ ಮೂಲಕವೇ ಹೊರ ಜಗತ್ತಿಗೆ ಪರಿಚಯವಾದವರು. ಮೂಲತಃ ದೀನ ದಲಿತ ಮತ್ತು ಜನಪರ ಸಂವೇದನಾಶೀಲ ಲೇಖಕರಾದ ಲಕ್ಷ್ಮೀಪತಿ ಕೋಲಾರ ಅವರು 'ನವಿಲು ಕಿನ್ನರಿಯ ಕವಿ'ಯೆಂದೇ ಗುರುತಿಸಲ್ಪಟ್ಟವರು. ಹೋರಾಟದ ನಡುವೆಯೂ ಬರಹವನ್ನೇ ಬದುಕಾಗಿಸಿಕೊಂಡು ಬರಹದಲ್ಲೇ ಬದುಕನ್ನು ಕಟ್ಟಿಕೊಂಡವರು. ಆದಿಮ ಸಂಸ್ಕೃತಿಗಳನ್ನು ಅನಾವರಣಗೊಳಿಸುವ ಹಾದಿಯಲ್ಲಿ ಸಂಶೋಧನೆಗಳನ್ನು ಮಾಡಿದ್ದು, ಒಬ್ಬ ಸಂಸ್ಕೃತಿ ನಿಷ್ಠ ಸಂಶೋಧಕರಾಗಿ ಇಂದಿಗೂ ಕಾರ್ಯನಿರತರಾಗಿದ್ದಾರೆ.ಇದರಿಂದ ಸ್ಥಳೀಯ ಚಿಂತನೆಯು ಜಾಗತೀಕರಣವನ್ನು ಎದುರಾಗುವ ಅಗತ್ಯತೆಯೊಂದಿಗೆ ಅದರ ಕ್ರಮಗಳನ್ನು ಅವರ ಬರಹಗಳಿಂದ ಮನಗಾಣಲು ಸಾಧ್ಯ. ಹೋರಾಟಗಾರ, ಲೇಖಕ, ಪತ್ರಕರ್ತ, ಸಂಘಟನೆ, ರಂಗಭೂಮಿ, ಚಲನಚಿತ್ರ ಹಾಗೂ ಸಾಕ್ಷ್ಯಚಿತ್ರದಂತಹ ಬಹುಮುಖೀ ವಲಯಗಳ ವ್ಯಕ್ತಿತ್ವದ ಲಕ್ಷ್ಮೀಪತಿ ಕೋಲಾರ ಅವರು ತಮ್ಮ ನಂಬಿಕೆಯ ಸೈದ್ಧಾಂತಿಕ ಹಾಗೂ ತಾತ್ವಿಕ ಚಿಂತನೆಯನ್ನು ಸಮಾಜದಲ್ಲಿ ಬಿತ್ತುವಲ್ಲಿ ಸದಾ ಕ್ರಿಯಾಶೀಲರಾಗಿರುವವರು. ಈ ಹಿಂದೆ ಈ ಬಗೆಯ ಹಲವಾರು ವಿಶ್ಲೇಷಣಾತ್ಮಕ ಸಂಶೋಧನೆಗಳು ನಡೆದಿವೆ. 'ಉದಾಹರಣೆ। ಕೆರೂರು ವಾಸುದೇವಾಚಾರ್ಯರು: ಒಂದು ಅಧ್ಯಯನ, ಕಡೆಂಗೋಡ್ಲು ಶಂಕರ ಭಟ್ಟರ ಬದುಕು ಮತ್ತು ಸಾಹಿತ್ಯ.'[2]

ಈ ಹಿನ್ನೆಲೆಯಲ್ಲಿ ಲಕ್ಷ್ಮೀಪತಿ ಕೋಲಾರರ ಬದುಕು, ಸೃಜನಶೀಲ ಸಾಹಿತ್ಯದಲ್ಲಿನ ಸೈದ್ಧಾಂತಿಕ ಹಾಗೂ ತಾತ್ವಿಕ ಆಯಾಮಗಳು, ಸಾಹಿತ್ಯೇತರ ಚಟುವಟಿಕೆಗಳು, ಮತ್ತು ಹೋರಾಟದ ಹಾದಿ ಒಟ್ಟಾರೆಯಾಗಿ ಕನ್ನಡದ ಸಾಂಸ್ಕೃತಿಕ ಲೋಕದಲ್ಲಿ ನಿರ್ಮಿಸಿರುವ ಮೈಲುಗಲ್ಲಿನ ಚಹರೆಗಳನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಸಮಾಜದಲ್ಲಿನ ಆರೋಗ್ಯಕರ ಮನ ಸ್ಥಿತಿಯನ್ನು ಕಾಪಾಡಿಕೊಳ್ಳಲು ಈ ಬಗೆಯ ಲೇಖಕರ ಚಿಂತನೆಗಳ ಅಧ್ಯಯನ ಮಹತ್ವವಾದುದು. ಈ ಲೇಖಕರ ಸಾಹಿತ್ಯ ಕುರಿತು ಈವರೆಗೆ ಸಮಗ್ರವಾಗಿ ಕನ್ನಡದಲ್ಲಿ ಅಧ್ಯಯನ ನಡೆದಿಲ್ಲದ ಕಾರಣ ಈ ನಿಟ್ಟಿನಲ್ಲಿ ಅಧ್ಯಯನ ನಡೆಸಲು ನನ್ನನ್ನು ತೊಡಗಿಸಿಕೊಂಡಿದ್ದೇನೆ.

## ಅಧ್ಯಯನದ ವ್ಯಾಪ್ತಿ:

ಲಕ್ಷ್ಮೀಪತಿ ಕೋಲಾರರ ಬದುಕು ಹೋರಾಟದ ಹಾದಿ, ಆತ್ಮಕಥನದ ಬಿಡಿಭಾಗಗಳಂತಿರುವ ಅನುಭವ ಕಥನಗಳನ್ನು ಒಳಗೊಂಡ ಅಂಕಣ ಬರಹಗಳ ಸಂಕಲನ 'ಕಪಿ ಮಡಗಿದ ಕಣ್ಣು' ಈ ಕೃತಿಯಲ್ಲಿನ ಬರಹಗಳು ವ್ಯಕ್ತಿಯೊಬ್ಬರ ವೈಯಕ್ತಿಕ ಬದುಕಿನ ಹೋರಾಟದ ಏಳುಬೀಳಿನ ಕಥನಗಳು ಮಾತ್ರವಲ್ಲದೆ, ಒಬ್ಬ ಹೋರಾಟಗಾರನಾಗಿ ಅನುಭವಿಸಿದ ಸಂಕಟಗಳು ಕಷ್ಟ ಪರಂಪರೆಗಳನ್ನು ಒಳಗೊಂಡಿದೆ. ಆದಕಾರಣ 'ಆತ್ಮ ಕಥನಗಳು ಯಾವಾಗಲೂ ಸಾಮಾಜಿಕ ಅಧ್ಯಯನದ ಸಂಶೋಧನೆಯ ಉಪಯೋಗಿ ಸಾಧನವೆಂದು ಪ್ರೊ.ಎಂ.ಎನ್.ಶ್ರೀನಿವಾಸರವರು ನಂಬಿದ್ದರು.

ಅಧ್ಯಯನಕ್ಕೆ ಒಳಪಡಲಿರುವ ಮುಖ್ಯ ಕೃತಿಗಳಿವು : ಅ) ನವಿಲು ಕಿನ್ನರಿ, ಆ) ನೀಲಿತತ್ತಿ, ಇ) ನೀರಚಿಗುರು(ಕವನ ಸಂಕಲನಗಳು), ಈ) ಕಾಲುದಾರಿ(ವಿಮರ್ಶಾಸಂಕಲನ), ಉ) ಮಾಸ್ತೀಕರ ಸಂಸ್ಕೃತಿ(ಸಂಸ್ಕೃತಿ ಹಾಗೂ ಜನಾಂಗೀಯ ಅಧ್ಯಯನ), ಊ) ಕಸಿ ಮಡಗಿದ ಕಣ್ಣು(ಅಂಕಣ ಬರಹಗಳು), ಋ) ಅಲ್ಲಮನ ಬಯಲಾಟ, ಎ) ಆದಿಮ ಶಿವರಹಸ್ಯ, ಏ) ಸಾಕ್ಷ್ಯಚಿತ್ರಗಳು, ಐ) ಚಲನಚಿತ್ರಗಳು ಮತ್ತು ಬಿಡಿಲೇಖನಗಳು. ಒಟ್ಟಾರೆಯಾಗಿ ಲಕ್ಷ್ಮೀಪತಿ ಕೋಲಾರ ಅವರ ಹೋರಾಟದ ಬದುಕಿನ ಹಿನ್ನೆಲೆಯಲ್ಲಿಯೇ ರೂಪುಗೊಂಡ ಅವರ ಅಭಿವ್ಯಕ್ತಿ ಸ್ವರೂಪ ಒಳಗೊಳ್ಳುವ ಸಂಸ್ಕೃತಿಯ ಇತಿಹಾಸದ ಮರುಮೌಲ್ಯಮಾಪನ, ಜನಾಂಗೀಯ ಮೂಲ, ಭಾಷಿಕ ಆಚರಣಾತ್ಮಕ ಜಗತ್ತು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಲಿದೆ.

ಲೇಖಕರನ್ನು ದಶಕಗಳ ಕಾಲ ಗಾಢವಾಗಿ ಪ್ರಭಾವಿಸಿರುವ ಭೌತವಾದಿ ಚಿಂತನೆ, ಅವೈದಿಕ ಪಂಥಗಳು ಹಾಗೂ ಒಟ್ಟಾರೆ ವಿಚಾರಚಿಂತನೆಗಳ ಕುರಿತ ಅವರ ನಿಲುವುಗಳ ಸಾರಾಸಾರ ವಿವೇಚನೆಯು ಕೂಡ ಅಧ್ಯಯನದ ವ್ಯಾಪ್ತಿಯ ಪ್ರಧಾನ ಭಾಗವಾಗಲಿದೆ.

## ಅಧ್ಯಯನದ ಸ್ವರೂಪ

ಈ ಅಧ್ಯಯನವು ವಿವರಣಾತ್ಮಕ ಸಂಶೋಧನೆ ಮೂಲಕ ಮುಂದುವರೆದು, ಅಧ್ಯಯನಗಳ ದಾಖಲಿತ (Structure)ಸಾಹಿತ್ಯವನ್ನು ಪರಿಶೀಲಿಸುವ, ಮತ್ತು ಕ್ರೋಢಿಕರಿಸಿ ಆ ಮೂಲಕ ತಲುಪುವ ಸತ್ಯಗಳನ್ನು ದಾಖಲಿಸುವ ಕೆಲಸ ಮಾಡುತ್ತೇನೆ. ಈ ವಿಧಾನದ ಬರಹ ವಿಮರ್ಶೆಯ ವಿಧಾನಗಳಿಗೆ ಹತ್ತಿರವೆನಿಸಿದರೂ, ಅಭ್ಯಾಸಗಳ ಬೌದ್ಧಿಕ ಹಿನ್ನೆಲೆ, ಉಪಲಬ್ಧ ಸಾಹಿತ್ಯ ಸಂಶೋಧನ ತಂತ್ರಗಳನ್ನು ಅಳವಡಿಸಿಕೊಂಡು ಸಂಶೋಧನೆಯನ್ನು ನಡೆಸಲಾಗುವುದು.[೪]

ಲಕ್ಷ್ಮೀಪತಿ ಅವರ ಸೃಜನಶೀಲ ಜಗತ್ತಿನೊಂದಿಗೆ ವಿವರಣಾತ್ಮಕ ಸಂಶೋಧನೆಯ ಮೂಲಕ ಅನುಸಂಧಾನ ನಡೆಸುವುದನ್ನು ಈ ಅಧ್ಯಯನದ ಒಟ್ಟಾರೆ ಸ್ವರೂಪವೆಂದು ಸದ್ಯ ಗ್ರಹಿಸಬಹುದಾಗಿದೆ. ಅವರ ಬರವಣಿಗೆಯ ತಾತ್ವಿಕತೆಯ ವಿಶ್ಲೇಷಣೆಯ ಮೂಲಕವೇ ಅದು ತಲುಪುವ ಸತ್ಯಗಳನ್ನು ದಾಖಲಿಸುವುದು ಕೂಡ ಈ ಅಧ್ಯಯನ ಸ್ವರೂಪದ ಒಂದು ಭಾಗವೇ ಆಗಿರುತ್ತದೆ. ಆ ಮೂಲಕ ಈ ಲೇಖಕರು ಬಹುಸ್ತರದ ಸಂಸ್ಕೃತಿಯ ಈ ನೆಲದಲ್ಲಿ ಯಾವ ಪರಂಪರೆಯನ್ನು ಪ್ರತಿನಿಧಿಸುತ್ತಿದ್ದಾರೆ ಮತ್ತು ಆ ಪರಂಪರೆಯೊಂದಿಗಿನ ಅವರ ಜೀವಂತ ಕೊಡು-ಕೊಳ್ಳುವಿಕೆ ಶೈಲಿಗಳನ್ನು ಸಹ ಗುರುತಿಸಲು ಪ್ರಯತ್ನಿಸಲಾಗುವುದು. ಹೀಗೆ ಭಿನ್ನ ಭಿನ್ನ ನೆಲೆಯಲ್ಲಿ ಚರಿತ್ರೆಯ ಮರು ವ್ಯಾಖ್ಯಾನ ಮತ್ತು ನಿರ್ವಹಿಸುವ ಅರ್ಥ ಮಾಡಿಕೊಳ್ಳುವ ಕಾಳಜಿಯಲ್ಲಿ ಈ ಸಂಶೋಧನಾ ಪ್ರಬಂಧ ರೂಪುಗೊಂಡಿದೆ.

## ಅಡಿ ಟಿಪ್ಪಣಿ

೧. 'ನಮಸ್ಕಾರ' ಪುಟ–೧೨.

೨. ಅಲ್ಲಮನ ಬಯಲಾಟ ಪುಟ XIII, ಲಕ್ಷ್ಮೀಪತಿ ಕೋಲಾರ, ರಂಗನಿರಂತರ, ಬೆಂಗಳೂರು

೩. 'ಅಧ್ಯಯನದ ವಿಧಿ ವಿಧಾನಗಳು'–ಸಂಪಾದಿತ ಡಾ॥ಕೆ.ರವೀಂದ್ರನಾಥ, ಪ್ರಸಾರಾಂಗ ಕ.ವಿ.ವಿ ಹಂಪಿ

೪. 'ಕನ್ನಡ ಅಧ್ಯಯನ ಸ್ಥಿತಿ–ಗತಿ' ಡಾ॥ ತಾಳ್ತಜೆ ವಸಂತ ಕುಮಾರ

೫. ಅದೇ ಪುಟ–

೬. 'ಕಸಿ ಮಡಗಿದ ಕಣ್ಣು'– ಲಕ್ಷ್ಮೀಪತಿ ಕೋಲಾರ ಅಂಕ ಪ್ರಕಾಶನ.

# ಅಧ್ಯಾಯ ೦೨

## "ಲಕ್ಷ್ಮೀಪತಿ ಅವರ ಹೋರಾಟದ ಬದುಕು ಮತ್ತು ಸೃಜನಶೀಲ ಪ್ರಯೋಗ"

ಹೋರಾಟಗಾರ, ಕವಿ, ಬರಹಗಾರ, ಚಲನಚಿತ್ರ ಸಾಹಿತಿ, ಗೀತರಚನಾಕಾರ, ವಿಮರ್ಶಕ, ಜಾನಪದ ಸಂಶೋಧಕ, ಪ್ರವಾಸಿ ಪತ್ರಕರ್ತ ಹೀಗೆ ಹಲವು ಸೃಜನಶೀಲ ಮತ್ತು ಸೃಜನೇತರ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಲಕ್ಷ್ಮೀಪತಿ ಕೋಲಾರ ಅವರು ದಿನಾಂಕ: ೦೨–೦೯–೧೯೫೫ ರಲ್ಲಿ ತಮ್ಮ ತಾಯಿಯವರ ತವರೂರಾದ ಕೋಲಾರ ತಾಲ್ಲೂಕಿನ ತಾಮೂರು ದಲ್ಲಿ ಜನಿಸಿದರು. ಇವರ ಸ್ವಂತ ಊರು ನರಸಾಪುರ, ತಂದೆಯ ಹೆಸರು ಡಾ॥ವಿ.ರಾಮಯ್ಯ ಸರ್ಕಾರಿ ವೈದ್ಯರು, ತಾಯಿ ಹೆಸರು ಕಾಂತರಾಜಮ್ಮನವರು.

ಒಂದನೇ ತರಗತಿಯಿಂದ ೪ನೇ ತರಗತಿಯವರೆಗೂ ದೇವರಾಯ ಸಮುದ್ರದಲ್ಲಿ ವ್ಯಾಸಂಗ ನಡೆಸಿ, ಮುಂದಿನ ವಿದ್ಯಾಭ್ಯಾಸದ ಬಗೆಗೆ 'ಕಪಿ ಮದಗಿದ ಕಣ್ಣು' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. "ಮುಳಬಾಗಿಲು ತಾಲ್ಲೂಕಿನ ತಾಯಲೂರಿನಲ್ಲಿ ನಾನು ಐದನೇ ಇಯತ್ತೆಯಲ್ಲಿ ಓದುತ್ತಿದ್ದಾಗ ಗಾಂಧಿಯ ಬಗ್ಗೆ ಪ್ರಾಸಬದ್ಧವಾದ ಪದ್ಯವೊಂದನ್ನು ಬರೆದಿದ್ದೆ.ತಗಡಿನ ಶೀಟುಗಳನ್ನು ಹೊದಿಸಿದ ಕಮಾನಿನಾಕಾರದ ಶಾಲೆಯ ಕಟ್ಟಡದ ಹಿಂಬದಿಯಲ್ಲಿ ಕೂತು ವಿಶಾಲವಾದ ಹೊಲ ಬಯಲುಗಳನ್ನು ನೋಡುತ್ತ ಪದ್ಯ ಬರೆದದ್ದರ ನೆನಪು ಈಗಲೂ ನನ್ನಲ್ಲುಳಿದಿದೆ. ಯಾಕೆ ಬರೆದೆನೆಂಬುದಾಗಲೀ ಅಥವಾ ಬರೆಯುವುದರ ಹಿಂದಿನ ಪ್ರೇರಣೆ ಯಾವುದೆಂಬುದರ ಬಗ್ಗೆಯಾಗಲೀ ಆ ವಯಸ್ಸಿನ ನನ್ನ ನೆನಪು ಸ್ಪಷ್ಟವಾಗಿಲ್ಲ. ಬಹುಶಃ ಪಠ್ಯ ಪುಸ್ತಕದಲ್ಲಿನ ಗಾಂಧಿ ಕುರಿತ ಪಾಠ ನನ್ನ ಮೇಲೆ ಪ್ರಭಾವ ಬೀರಿದ್ದಿರಬಹುದು. ಅದು ೧೯೬೭ರ ಅಥವಾ ೬೮ನೆಯ ಇಸವಿ ಇರಬಹುದು. ಆ ಕಾಲಕ್ಕೆ ಶಿಕ್ಷಣ ಇಲಾಖೆಯಿಂದ 'ಬಾಲವಾಣಿ' ಎಂಬ ಮಾಸಿಕವೋ-ದ್ವೈಮಾಸಿಕವೋ ಪತ್ರಿಕೆಯೊಂದು ಬರುತ್ತಿತ್ತು. ಆ ಪತ್ರಿಕೆಯಲ್ಲಿ 'ಗಾಂಧಿ ತಾತ' ಎಂಬ ನನ್ನ ಪದ್ಯ ಪ್ರಕಟವಾಗಿತ್ತು. ಕೂಡ 'ಬಾಲವಾಣಿ'ಯಲ್ಲಿನ ಆ ಪ್ರತಿಯನ್ನು ನಾನು ಬಹಳ ದಿನಗಳವರೆಗು ಜೋಪಾನವಾಗಿ ತೆಗೆದಿಟ್ಟಿದ್ದೆ." 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಗಾದೆ ಮಾತನ್ನು ನೆನಪು ತರುವಂತೆ ಇವರ ಬಾಲ ಪ್ರತಿಭೆಯನ್ನು ಇಲ್ಲಿಂದಲೇ ಗುರುತಿಸಬಹುದು. ಬಹುಶಃ ಇಲ್ಲಿಂದ ಸಾಹಿತ್ಯದ ಸೆಳೆತಕ್ಕೆ ಒಳಾಗಿರಬಹುದೆಂದು ತಿಳಿದು ಬರುತ್ತದೆ.

೭ನೇ ತರಗತಿಯನ್ನು ಹೊಳೂರಿನಲ್ಲಿ ಮುಗಿಸಿ ನಂತರ ಹೈಸ್ಕೂಲಿನ ವಿದ್ಯಾಭ್ಯಾಸಕ್ಕೆಂದು ಬೆಂಗಳೂರಿನ ಎನ್.ಎಲ್.ಎಸ್ ಹಾಸ್ಟೆಲ್‌ಗೆ ಸೇರುವಂತೆ ತಂದೆಯವರು ನಿರ್ಧರಿಸಿದ್ದರು. ಅದರಂತೆ, ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. "ವರ್ಷ ಕಳೆಯುವುದರೊಳಗಾಗಿ ಇಪ್ಪತ್ತು–ಮೂವತ್ತು ಪುಟಗಳ ಪುಟ್ಟದಾದ ರಮ್ಯ ಕಲ್ಪನೆಗಳ ಕಾದಂಬರಿಯೊಂದನ್ನು ಕನ್ನಡದಲ್ಲಿ ಬರೆದು, 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗೆ ಪೋಸ್ಟ್ ಮಾಡಿದ್ದೆ! ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದವರೊಬ್ಬರ ಮಗ ನನ್ನ ಸಹಪಾಠಿಯಾಗಿದ್ದ, ಆ ಸಹಪಾಠಿಯ ಸಲಹೆಯ ಮೇರೆಗೆ ಹಾಗೆ ಮಾಡಿದ್ದೆ.

ನಾನು ಮಾರನೆಯ ದಿನದಿಂದಲೇ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ನನ್ನ ಕಾದಂಬರಿ ಪ್ರಕಟವಾಯಿತೇ ಎಂದು ನೋಡತೊಡಗಿದೆ."[1] ಕಟಿ ಮಡಗಿದ ಕಣ್ಣು ಕೃತಿಯು ಲೇಖಿನವಾದ-ಕಲಾಸಿಪಾಳ್ಯದಲ್ಲಿ ಕಲಸಿ ಹೊಂದ ಚಂದಮಾಮನ ಕನಸುಗಳನ್ನು ಇಲ್ಲಿ ವಿವರಿಸಿದ್ದಾರೆ. ಸ್ವಲ್ಪ ದಿನ ಕಳೆದರು ಕಾದಂಬರಿ ಪ್ರಕಟವಾಗಲಿಲ್ಲ ಅಂದಿನಿಂದ ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆಯ ಬಗ್ಗೆ ಬೇಸರಗೊಂಡಿದ್ದರು. ಸಾಹಿತ್ಯದ ಬಗ್ಗೆ ಆಸಕ್ತಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ನಡೆದ ಘಟನೆಯಿಂದ ನಿರಾಸೆಯಾದರು. "ಅದೇ ಹಾಸ್ಟೆಲ್‌ನಲ್ಲೇ ಕಾಲೇಜು ವಿದ್ಯಾರ್ಥಿಯಾಗಿ ಓದುತ್ತಿದ್ದ ನನ್ನಣ್ಣನ ಗಮನಕ್ಕೂ ಬರದಂತೆ ನಾನು ಸಾಹಿತ್ಯ ಹಾಗೂ ನಾಟಕಗಳ ಲೋಕದಲ್ಲಿ ಮುಳುಗಿ ಹೋಗಿ, ಹೇಗೋ ಎಸ್.ಎಸ್.ಎಲ್.ಸಿ ಯನ್ನು ಮುಗಿಸಿ ಹೋಳೂರಿಗೆ ವಾಪಸ್ಸಾದೆ. ಕಾಲೇಜು ಓದಿನ ಹೊಸ ಸರ್ಕಸ್ಸು ಪ್ರಾರಂಭವಾಯಿತು."[2]

ಬಹುಶಃ ಇಲ್ಲಿಂದ ಇವರ ಜೀವನದಲ್ಲಿ ಒಂದು ಹೊಸ ತಿರುವು ಪಡೆದುಕೊಳ್ಳುತ್ತದೆ. ವಿದ್ಯಾರ್ಥಿ ಜೀವನದಲ್ಲಿ ತನ್ನ ವಿದ್ಯಾಭ್ಯಾಸವನ್ನು ಆಯ್ಕೆ ಮಾಡಿಕೊಳ್ಳುವಂತಹ ಪ್ರಶ್ನೆ ಎದುರಾದಾಗ, ಆ ಆಯ್ಕೆ ಪೋಷಕರ ಕೈಗೆ ಸಿಕ್ಕಂತ ಸಂದರ್ಭದಲ್ಲಿ, ವಿದ್ಯಾರ್ಥಿಯ ಇಷ್ಟವನ್ನು ಪರಿಗಣಿಸದೆ ಹೋದರೆ? ವಿದ್ಯಾರ್ಥಿಯು ಯಾವ ವಿಭಾಗದಲ್ಲಿ ವ್ಯಾಸಂಗ ಮಾಡಬೇಕು ಎಂಬುದನ್ನು ಆ ವಿದ್ಯಾರ್ಥಿ ಪೋಷಕರು ನಿರ್ಧಾರ ತೆಗೆದುಕೊಂಡರೆ? ವಿದ್ಯಾರ್ಥಿಯ ಅಭಿರುಚಿಗೆ ಧಕ್ಕೆ ತಂದಂತೆ. ಈ ಅಂಶವನ್ನು ಮನಗಾಣದೆ ಹೋದರೆ, ಇದರ ಪರಿಣಾಮ ಮುಂದೆ ವಿದ್ಯಾರ್ಥಿ ಬಹುದೊಡ್ಡ ಹೊಡೆತಕ್ಕೆ ಒಳಗಾಗಬೇಕಾಗುತ್ತದೆ ಎಂಬಂತಹ ಸತ್ಯವನ್ನು ಲಕ್ಷ್ಮೀಪತಿ ಕೋಲಾರ ಅವರ ಜೀವನವೇ ಉದಾಹರಣೆ ಆಗಬಲ್ಲದು ಎಂದು ಅರಿವಾಗುತ್ತೆ. ಆದಕಾರಣ ಪ್ರತಿಯೊಬ್ಬ ಪೋಷಕರು ಮಕ್ಕಳನ್ನು ಅರಿತು ಅವರ ಅಭಿರುಚಿಗೆ ತಕ್ಕಂತಹ ವಿದ್ಯಾಭ್ಯಾಸ ಕೊಡಿಸಿದರೆ, ಉನ್ನತ ಶಿಕ್ಷಣ ಪಡೆಯಲು ಸಾಧ್ಯ ಎಂಬ ಸತ್ಯವನ್ನು ತಿಳಿದುಕೊಳ್ಳಲಾಗುತ್ತದೆ.

ಪಿ.ಯು.ಸಿಗೆ ಸೇರುವ ಸಂದರ್ಭದಲ್ಲಿ ಎದುರಾದ ಸಮಸ್ಯೆ ಎಂದರೆ, ತಂದೆಗೆ ಸೈನ್ಸ್ ಬಗೆಗೆ ಒಲವಿತ್ತು. ಆದರೆ ಲಕ್ಷ್ಮೀಪತಿಯವರಿಗೆ ಬಿ.ಎ ಮಾಡಿಕೊಂಡು ಎಂ.ಎ ಸ್ನಾತಕೋತ್ತರ ಪದವಿ ಪಡೆದು ಯಾವುದಾದರೂ ಕೆಲಸ ಗಿಟ್ಟಿಸಿ ಕೊಳ್ಳಲು ಮನಸ್ಸಿತ್ತು. ಆದರೆ ತಂದೆ ಎ.ರಾಮಯ್ಯನವರು ಡಾಕ್ಟರ್ ಆದ ಕಾರಣ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ನಂತಹ ಉನ್ನತ ವ್ಯಾಸಂಗ ಮಾಡುವುದಾಗಿತ್ತು. ಲಕ್ಷ್ಮೀಪತಿಯವರು ತಮ್ಮ ಕಲಾ ವಿಭಾಗದ ಆಸೆಯನ್ನು ವ್ಯಕ್ತಪಡಿಸಿ ಕಪಾಳ ಮೋಕ್ಷವೂ ಆಗಿತ್ತು. ಎ.ರಾಮಯ್ಯನವರು ಕಲಾ ವಿಭಾಗದ ವಿದ್ಯಾರ್ಥಿಗಳ ನಿರುದ್ಯೋಗ ಸಮಸ್ಯೆಯನ್ನು ಉದಾಹರಣೆ ಕೊಟ್ಟದ್ದು, ಅದೇ ವಾಟ್ಸಿ ಶಾಮಣ್ಣ ನವರ ನೇತೃತ್ವದಲ್ಲಿ ಎಂ.ಜಿ.ರಸ್ತೆಯಲ್ಲಿ ಬೂಟ್ ಪಾಲಿಷ್ ಚಳವಳಿ ಮಾಡಿ ಉದ್ಯೋಗಕ್ಕಾಗಿ ಒತ್ತಾಯಿಸಿದ್ದರಂತೆ ಎಂದು ಹೇಳಿ ಎ.ರಾಮಯ್ಯನವರು ಪಟ್ಟು ಹಿಡಿದಿದ್ದರು. ಲಕ್ಷ್ಮೀಪತಿಯವರು ಸಹ ಹಠ ಹಿಡಿದಿದ್ದರು ಅದರೆ ತಂದೆಯ ಮಾತು ಕೇಳುವುದು ತಪ್ಪಲಿಲ್ಲ. ಸೆಂಟ್ ಜೋಸೆಫ್ ಕಾಲೇಜಿನಿಂದ ಇಂಟರ್‌ವ್ಯೂಗೆ ಕರೆಯೂ ಬಂತು. 'ನನ್ನ ಆಸಕ್ತಿ ಹಿಂದೆ ಸರಿದು ನನ್ನ ತಂದೆಯ ಪ್ರತಿಪಾದನೆಯ ಅಗತ್ಯ'ವೇ ಮುಖ್ಯವಾಯಿತು.

ದೇಹದ ಅಳತೆಗೆ ತಕ್ಕಂತೆ ಬಟ್ಟೆ ಕತ್ತರಿಸುವುದರ ಬದಲಿಗೆ ಬಟ್ಟೆಯ ಅಳತೆಗೆ ತಕ್ಕಂತೆ ದೇಹ ಕತ್ತರಿಸುವುದರ ಹಿಂಸೆಯನ್ನು ನಾನು ಅನುಭವಿಸುತ್ತಿದ್ದೆ."[4] ಜೀವನದ ತಿರುವಿನ ಕ್ಷಣಗಳನ್ನು ಲೇಖಕರು ತಮ್ಮ ಲೇಖನದಲ್ಲಿ ಕಾವ್ಯಾತ್ಮಕವಾಗಿ ವಿವರಿಸಿದ್ದಾರೆ. ವಿದ್ಯಾರ್ಥಿಯಾಗಿ ತಾನು ಬಯಸಿದ ವಿದ್ಯಾಭ್ಯಾಸ ಸಿಗದಿದ್ದ ಪಕ್ಷದಲ್ಲಿ ತನಗಿಷ್ಟವಿಲ್ಲದ ಮತ್ತೊಂದು ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡಿ ಜೀವನದಲ್ಲಿ ಪದವೀಧರರಾಗದೆ ಉಳಿಯಬೇಕಾಯಿತು. ಆಯ್ಕೆ ವಿಚಾರದಲ್ಲಿ ಪೋಷಕರದ್ದೇ ಮೇಲುಗೈಯಾಗಿತ್ತು. ಇದರ ಪ್ರತಿಫಲ ಮುಂದೆ ಲಕ್ಷ್ಮೀಪತಿ ಕೋಲಾರ ಅನುಭವಿಸಿದರು.

ಸಾಕಷ್ಟು ಅವಮಾನಗಳಿಂದಲೇ ಕಾಲೇಜಿಗೆ ಸೇರಿಕೊಂಡರು. ಸೇಂಟ್ ಜೋಸೆಫ್ ಕಾಲೇಜಿಗೆ ಒಂದೇ ಪ್ಯಾಂಟಿನಲ್ಲಿ ಹೋಗಿ ಬರುತ್ತಿದ್ದ ಲಕ್ಷ್ಮೀಪತಿ ಕೋಲಾರ ಅವರು ರ್‍ಯಾಗಿಂಗಗೆ ಒಳಗಾದರು. ಇದರಿಂದ ಬಾರೀ ಅವಮಾನ ಎದುರಿಸಿದ ನಂತರ ನೊಂದು ಬೆಂದು ಕಾಲೇಜನ್ನು ತೊರೆಯುವ ನಿರ್ಧಾರ ತೆಗೆದುಕೊಂಡರು. ಇದು ನಗರ ಸಂಸ್ಕೃತಿಯನ್ನು ಒಂದು ದೇಸೀ ಸಂಸ್ಕೃತಿ ಎದುರಾಗುವ ಸನ್ನಿವೇಶವನ್ನು ತಿಳಿಸುತ್ತಿದೆ. ಹಳ್ಳಿ ಹೈದನು ಪ್ಯಾಟೆಗೆ ಬಂದ ನಂತರ ಎದುರುಗೊಂಡ ಸಂಕಟಗಳು ಅಷ್ಟಿಷ್ಟಲ್ಲ. ಅದು ನಗರವನ್ನು ತೊರೆಯುವಂತೆ ಮಾಡಿದ್ದು ಅಂದಿನ ಕಾಲೇಜು ಶಿಕ್ಷಣದ ಸ್ಥಿತಿಯನ್ನು ಮತ್ತು ನಡಾವಳಿಯನ್ನು ತಿಳಿಸಿಕೊಡುವಂತಿದೆ. ಇದನ್ನು ಲಕ್ಷ್ಮೀಪತಿಯವರು ತಮ್ಮ ಲೇಖನ ಸಂಗ್ರಹವಾದ ಕಸಿ ಮಡಗಿದ ಕಣ್ಣು ಕೃತಿಯಲ್ಲಿ ಕಲಾಸಿಪಾಳ್ಯದಲ್ಲಿ ಕಲಸಿ ಹೋದ ಚಂದಮಾಮನ ಕನಸುಗಳು ಈ ಲೇಖನದಲ್ಲಿ ವ್ಯಕ್ತ ಪಡಿಸಿದ್ದಾರೆ.

"ಮತ್ತೆಂದೂ ನಾನು ಆ ಕಾಲೇಜಿಗೆ ಕಾಲಿಡಲಿಲ್ಲ. ಐದಾರು ತಿಂಗಳುಗಳ ನಂತರ ನನ್ನ ತಂದೆಗೆ ಕೋಲಾರಕೆ ವರ್ಗವಾಯಿತು. ನಾನು ಕೋಲಾರದಲ್ಲಿಯೇ ಓದುತ್ತೇನೆಂದು ಹಠ ಹಿಡಿದು ರಾದ್ಧಾಂತ ಮಾಡಿ ಬೆಂಗಳೂರನ್ನು ತೊರೆದೆ. ಕೋಲಾರದಲ್ಲಿಯೂ ನಾನು ಕನ್ನಡ, ಬಿ.ಎ ಓದಲು ನನ್ನ ತಂದೆ ಬಿಡಲಿಲ್ಲ. ಕಾಮರ್ಸ್ ಓದುವಂತೆ ಹೆದರಿಸಿ, ಒತ್ತಡ ಹೇರಿದರು. ಕೊನೆಗೂ ನಾನು ಪದವೀಧರನಾಗಲೇ ಇಲ್ಲ, ಒತ್ತಡಗಳ ಹಿಂಸೆಗೆ ಬಗ್ಗಲೇ ಇಲ್ಲ. ತೀರಾ ಇತ್ತೀಚೆಗೆ ನನ್ನ ತಂದೆ ಚಿತ್ರಾಳ ಬಳಿ 'ಅವನಿಷ್ಟದಂತೆ ಓದಿಸದೆ ನಾನೂ ತಪ್ಪು ಮಾಡಿಬಿಟ್ಟೆ, ಎಂದರಂತೆ. ಗಿಡ ಚೆನ್ನಾಗಿ ಬೆಳೆಯಲೆಂದು ಅವರು ಹೆಚ್ಚು ನೀರು ಹಾಕಿದ್ದರು. ಹಾಗೆ ಮಾಡಿದರೆ ಕೊಳೆತು ಹೋಗುತ್ತದೆಂಬುದು ಅವರಿಗೂ ತಿಳಿದಿರಲಿಲ್ಲ ಅಷ್ಟೆ."[5]

'ಸೆಂಟ್ ಜೋಸೆಫ್ ಕಾಲೇಜಿನ ಓದನ್ನು ಅರ್ಧಕ್ಕೆ ನಿಲ್ಲಿಸಿ ಕೋಲಾರಕೆ ಹೋದ ನಂತರವು ಸ್ವಾಮಿ ವಿವೇಕಾನಂದ, ಕೆ.ವಿ.ಅಯ್ಯರ್, ಶಾಂತಲೆಯನ್ನು ಕುರಿತು ಪದ್ಯಗಳನ್ನು ಬರೆದಿದ್ದೆ. ಅವುಗಳ ಪೈಕಿ 'ಸ್ವಾಮಿ ವಿವೇಕಾನಂದ' ಪದ್ಯ 'ಕೋಲಾರ ಪತ್ರಿಕೆ'ಯಲ್ಲಿ ಪ್ರಕಟವಾಗಿತ್ತು. ಆಗ ಪಟ್ಟಷ್ಟು ಆನಂದವನ್ನು ಮತ್ತೆಂದೂ ನಾನು ಪಡೆಯಲಿಲ್ಲ.'[6]

ಪಿಯುಸಿಯ ಹೊತ್ತಿಗೇ ಚಳವಳಿಯ ನೆಂಟಸ್ತಿಕೆ ಬೆಳೆದು ಬಿಟ್ಟದ್ದರಿಂದ ನನ್ನ ಕಾಲೇಜು ಓದಿನ ಅನುಭವಗಳು ಅತ್ಯಲ್ಪವಾದವು. ಅದರ ನಡುವೆಯೂ ಇಬ್ಬರು ಕನ್ನಡದ ಮೇಷ್ಟ್ರುಗಳ ನನ್ನ ಮೇಲೆ ತಮ್ಮ ಗಾಢ ಪ್ರಭಾವ ಬೀರಿ ನನ್ನ ಜೀವಮಾನದುದ್ದಕ್ಕೂ ಮರೆಯಲಾಗದಂತಹ ಚಿರ ಮುದ್ರೆಯನ್ನೊತ್ತಿದರು. ಅವರ ಪೈಕಿ ಒಬ್ಬರಾದ ಪ್ರೊ.ಎಸ್.ಜಿ.ಚಂದ್ರಮೋಹನ್ ಅವರು

ನಾವೇ ಹೊಟ್ಟೆಉರಿ ಪಡುವ ಹಾಗೆ. ಹೆಸರಿಗೆ ತಕ್ಕಂತೆಯೇ ಚೆಲುವ, ಚಿರಯೌವ್ವನಿಗರಾಗಿದ್ದರು ನನ್ನ ತಲೆ ಬೋಳಾಗಿ, ಕ್ಷಣಗಳಲ್ಲಿ ವಯಸ್ಸು ಕಳೆದು ಹೋಯ್ತಲ್ಲ ಅಂತ ನಾನು ಸಂಕಟ ಪಡುತ್ತಿರುವಾಗಲೂ, ವಿಚಾರವಾದಿಯಾದ ಚಂದ್ರಮೋಹನ್ ಅವರು ಅದೇ ಚಿರಯೌವ್ವನದ ಟ್ರಂಪ್ ಕಾರ್ಡ್‌ನ್ನು ಇಂದಿಗೂ ಹಾಕುತ್ತಲೇ 'ಪವಾಡ' ಮೆರೆಯುತ್ತಿರುವುದಂತೂ ನನಗೆ ಬಗೆಹರಿಯಲಾಗದ ಸೋಜಿಗವಾಗುಳಿದಿದೆ. ಈ ಇಂತಹ ಚೆಲುವ ಚೆನ್ನಿಗ ಚಂದ್ರಮೋಹನ್‌ರವರು ಮಾಡಿದ ಕಾವ್ಯದ ಪಾಠಗಳು ಕೂಡ ನನ್ನೊಳಗೆ ಈ ಕ್ಷಣದಲ್ಲೂ ಹಸಿರಾಗಿಯೇ ಉಳಿದಿದೆ.

ಬೇಂದ್ರೆಯವರ 'ಬೆಳಗು', 'ಶ್ರಾವಣಾ ಬಂತು ಶ್ರಾವಣಾ', ಕೆಎಸ್‌ನ ಅವರ 'ರೈಲ್ವೆ ನಿಲ್ದಾಣದಲ್ಲಿ', ಕೃಷ್ಣ ಆಲನಹಳ್ಳಿಯವರ 'ಬೆಳಗು' ಮುಂತಾದ ಕವಿತೆಗಳ ಅವರ ಪಾಠ ಕೇಳುತ್ತಿದ್ದರೆ. ನಿರಾಸಕ್ತಿಯ ಮನಸ್ಸುಗಳಲ್ಲೂ ಕಾವ್ಯೋತ್ಸಾಹ ಮೂಡುತ್ತಿತ್ತು. ನನಗಂತೂ ಶ್ರಾವಣಾ... ಕವಿತೆಯ ಅವರ ಪಾಠ ಕೇಳುತ್ತಿದ್ದಷ್ಟು ಹೊತ್ತು ಎದೆಯ ತುಂಬ ಮಳೆ ಸುರಿದಿತ್ತು. ಅಂತರಗಂಗೆ ಬೆಟ್ಟದ ಪ್ರತಿಗುಡ್ಡವೂ, ಲಿಂಗಗಳಾಗಿ ಕಂಡಿದ್ದವು. ನಿಜಕ್ಕೂ ಕಾವ್ಯವನ್ನು ಅರ್ಥ ಮಾಡಿಕೊಳ್ಳುವ ಅನೇಕ ಕ್ರಮಗಳನ್ನು ನಾನು ಅವರಿಂದ ಕಲಿತೆ, ಫ್ರೆಂಚ್ ಕವಿ ಬೋದಿಲೇರನ ಅನುವಾದಿತ ಇಂಗ್ಲೀಷ್ ಕವಿತೆಗಳನ್ನು ಮೊದಲು ನನಗೆ ಕೇಳಿಸಿದ್ದೇ ಚಂದ್ರಮೋಹನ್ ರವರು ತರಗತಿಯ ಒಳಗೆ ಕಾವ್ಯದ ಪಾಠಗಳಾಗುತ್ತಿದ್ದಂತೆಯೇ, ಹೊರಗೆ ಸಾಹಿತ್ಯ, ಚಳುವಳಿ, ಸಿದ್ಧಾಂತಗಳ ಪಾಠಗಳೂ ನಡೆಯುತ್ತಿದ್ದವು. ಒಮ್ಮೆ ಅವರ ಮನೆಯ ಕಿಟಕಿಯ ಬಾಗಿಲು ಮತ್ತು ಜಾಲರಿಯ ನಡುವೆ ಇಲಿಯೊಂದು ಸೇರಿಕೊಂಡಿತ್ತು. ಅದನ್ನು ಓಡಿಸಲೆಂದು ಕೋಲು ತರಲಿಕ್ಕಾಗಿ ನಾನು ಹೊರಗೆ ಓಡಿದೆ. ಸಣ್ಣ ಕಡ್ಡಿಯೊಂದನ್ನು ಹಿಡಿದು ನಾನು ಬರುವಷ್ಟರಲ್ಲೇ ಚಂದ್ರಮೋಹನ್ ಅವರು ಆ ಇಲಿಯ ಸ್ನೇಹ ಸಂಪಾದಿಸಿ, ಅದನ್ನು ತಮ್ಮ ಅಂಗೈಯಲ್ಲಿಟ್ಟು ಕೊಂಡು ಏನನ್ನೋ ತಿನಿಸುತ್ತಿದ್ದರು! ಅಂದಿನ ಅವರ ಜೀವಕಾರುಣ್ಯದ ಪ್ರಸಂಗವೂ ನನಗೊಂದು ಪಾಠವೇ ಆಗಿತ್ತು.” ಶಿಕ್ಷಕರ ನಡೆ ನುಡಿ ಮತ್ತು ಸಮಾಜದೊಂದಿಗಿನ ಒಡನಾಟ ಪಾತ್ರ ವಿದ್ಯಾರ್ಥಿಗಳಿಗೆ ಜೀವನದ ದೊಡ್ಡ ಪಾಠವಾಗುತ್ತೆ. ಸಜ್ಜನಿಕೆಯ ಶಿಕ್ಷಕನಿಂದ ಸಜ್ಜನಿಕೆಯ ಮನಸ್ಸೇ ಸಿದ್ಧವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಲಕ್ಷ್ಮೀಪತಿ ಕೋಲಾರ.

ಲಕ್ಷ್ಮೀಪತಿ ಕೋಲಾರ ಅವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ಶಿಕ್ಷಕರು ಪ್ರೊ.ಎಚ್.ಜಿ.ಸಣ್ಣಗುಡ್ಡಯ್ಯ ನವರು. ಬಹುಶಃ ಇವರಿಂದಲೇ ಚಂದ್ರಮೋಹನ್ ರವರು ಪರಿಚಯವಾಗಿದ್ದು. ಲಕ್ಷ್ಮೀಪತಿಯವರಿಗಿದ್ದ ಸಾಹಿತ್ಯ ಆಸಕ್ತಿಯಿಂದ ಸಣ್ಣಗುಡ್ಡಯ್ಯ ನವರ ವಿದ್ವತ್ತಿನ ಆಕರ್ಷಣೆಯಿಂದ ಯಾವೊಂದು ತರಗತಿಗೂ ತಪ್ಪಿಸಿಕೊಳ್ಳುತ್ತಿರಲಿಲ್ಲ, ಕೆಲವೊಂದು ಸಂದರ್ಭದಲ್ಲಿ ತರಗತಿಯ ಹೊರಗಡೆ ನಿಂತು ಪಾಠ ಕೇಳಿಸಿಕೊಳ್ಳುತ್ತಿದ್ದರು. ಇದೇ ವೇಳೆ ಒಂದು ಅಚಾತುರ್ಯ ನಡೆಯಿತ್ತು. ಸಣ್ಣಗುಡ್ಡಯ್ಯ ನವರು ತರಗತಿಯ ಒಳಗಿದ್ದ ವಿದ್ಯಾರ್ಥಿ ಮೇಲಿದ್ದ ಸಿಟ್ಟನ್ನು, ಹೊರಗಡೆ ಇದ್ದ ಲಕ್ಷ್ಮೀಪತಿಯವರ ಮೇಲೆ ಪ್ರಹರ ಮಾಡಿದ್ದು, ಕಪಾಳಕ್ಕೆ ಹೊಡೆದೇ ಬಿಟ್ಟದ್ದು. ಮೊದಲೇ ಉಗ್ರಕೋಪಿಷ್ಠರಾದ ಲಕ್ಷ್ಮೀಪತಿ ಅವರು ಸಣ್ಣಗುಡ್ಡಯ್ಯನವರ ಗಲ್ಲಾಪಟ್ಟಿಗೆ ಕೈ ಹಾಕಿ ಯಾಕೋ ಹೊಡೆದೆ? ಎಂದು ಜಬರಿಸಿಯೇ ಬಿಟ್ಟರು. ಇದು ಪ್ರಿನ್ಸಿಪಾಲರವರೆಗೂ ಹೋಗಿ ಚಂದ್ರಮೋಹನ್‌ರವರ ಮಧ್ಯಸ್ಥಿಕೆಯಲ್ಲಿ ಸಮಸ್ಯೆ ಬಗ್ಗೆ ಹರಿಯಿತು. “ಸಣ್ಣಗುಡ್ಡಯ್ಯನವರು ಒಮ್ಮೆ ಚಂದ್ರಮೋಹನವರ ಬಳಿ 'ಆ ಹುಡುಗನ್ನ ನೋಡಿದ್ರೆ ಒಳ್ಳೆಯವನ ಥರ ಕಾಣಸ್ತಾನಯ್ಯ'

ಅಂದರಂತೆ.ಆನಂತರ ಏನೇನಾಯಿತೋ ಎಂಬುದು ನೆನಪಿಲ್ಲ. ಆದರೆ 'ಸಂಬಂಜ ಅನ್ನೋದು ದೊಡ್ಡು ಕನಾ' ಎಂಬ ನಂಬಿಕೆಯ ಮೂರು ಮನಸ್ಸುಗಳು ಹತ್ತಿರವಾಗಲು ಬಹುಶಃ ಹೆಚ್ಚು ಸಮಯ ಬೇಕಾಗಿರಲಿಲ್ಲ. ಅದರ ಮುಂದಿನ ವರ್ಷವೇ ನಾನು ಕಾಲೇಜಿನಲ್ಲಿ 'ಮಾನವತಾ ವೇದಿಕೆ' ಎಂಬ ವಿದ್ಯಾರ್ಥಿ ಸಂಘಟನೆಯನ್ನು ಹುಟ್ಟು ಹಾಕಿದಾಗಉದ್ಘಾಟಿಸಿದವರು ಸಣ್ಣಗುಡ್ಡಯ್ಯನವರೇ, ಅಧ್ಯಕ್ಷತೆ ವಹಿಸಿದ್ದು ಚಂದ್ರಮೋಹನ!' ಈ ಎಲ್ಲಾ ವಿಚಾರಗಳನ್ನು 'ಕಸಿ ಮಡಗಿದ ಕಣ್ಣು' ಕೃತಿಯಲ್ಲಿ 'ರಘುನ ಗುರುವಿನ ಕವಾಳಮೋಕ್ಷ ಪ್ರಸಂಗ' ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಒಟ್ಟಾರೆಯಾಗಿ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಸಂಘಟನೆ ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಂಡ ಲಕ್ಷ್ಮೀಪತಿಯವರು ಅದೇ ಹಾದಿಯಲ್ಲಿ ಸಾಗಿದರು.

## ಹೋರಾಟದ ಬದುಕು

ಹಿಂದುಳಿದ ವರ್ಗದಲ್ಲಿ ಹುಟ್ಟಿದ ಲಕ್ಷ್ಮೀಪತಿಕೋಲಾರ ಅವರು ತಾವು ದಲಿತ ಸಂಘರ್ಷ ಸಮಿತಿಯೊಂದಿಗಿನ ನಂಟಸ್ತಿಕೆ ಬಗೆಗೆ. "ಮೊಟ್ಟೆಯೊಡೆದು ಹೊರಬರುವ ಬಾತುಮರಿಗೆ ತಾಯಿ ಬಾತುಕೋಳಿಯ ಬದಲಿಗೆ ಮೊದಲು ಯಾರದಾದರೂ ಕಾಲು ಕಂಡರೂ ಸಾಕು, ಅದನ್ನೇ ತನ್ನ ತಾಯಿಯೆಂದು ಭಾವಿಸಿಬಿಡುತ್ತದಂತೆ. ನಂತರ ಆ ಕಾಲನ್ನೇ ಅಥವಾ ಮೊದಲು ಕಂಡದ್ದನ್ನೇ ತಾಯಿಯೆಂದು ಭಾವಿಸಿ ಹಿಂಬಾಲಿಸುತ್ತ ಸ್ವಂತ ತಾಯಿಯನ್ನು ಗುರುತಿಸದೆಯೇ ಹೋಗುತ್ತದಂತೆ! ಸಾಂಸ್ಕೃತಿಕ ಪ್ರಪಂಚದಲ್ಲಿ ಕಣ್ಣುಬಿಟ್ಟ ಕಾಲದಲ್ಲಿ ನಾನು ಕಂಡದ್ದೂ ದಲಿತ ಸಂಘರ್ಷ ಸಮಿತಿಯ ಅಂತಹ ಕಾಲುಗಳನ್ನೇ. ಈ ಕಾಲುಗಳನ್ನು ಬಾತುಮರಿಯಂತೆ ಹಿಂಬಾಲಿಸಿದ ನಾನು ಲೌಕಿಕವಾಗಿ ಅಭದ್ರ ಬದುಕಿನ ನೆಲೆಯನ್ನು ತಲುಪಿದೆನಾದರೂ ತಾತ್ವಿಕ ಬದುಕಲ್ಲಿ ಬಹಳಷ್ಟು ಪಡೆದೆ. ಇದು ಒಂದು ಬಗೆಯ ಹತಾಶೆಯ ನಡುವೆಯೂ ನಾನಾಡಬಹುದಾದ ಅತ್ಯಂತ ಖುಷಿಯ ಮಾತಾಗಿದೆ.ಇದು ದಲಿತ ಸಂಘರ್ಷ ಸಮಿತಿಯೊಂದಿಗಿನ ನನ್ನ ಸಾಂಸ್ಕೃತಿಕ ಸಂಬಂಧದ ಖಾಸಗಿ ಮಾತಾಯಿತು." ಎಂಬುದನ್ನು 'ಕಾಲುದಾರಿ' ಕೃತಿಯಲ್ಲಿ ದಲಿತ ಚಳವಳಿಯ ಆಧ್ಯಾತ್ಮ ಹೋರಾಟ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ಲಕ್ಷ್ಮೀಪತಿ ಕೋಲಾರ ಅವರಿಗೆ ಸುಮಾರು ೮೦ ದಶಕದಲ್ಲಿ ಜೆ.ಪಿ.ಚಳುವಳಿ. ತುರ್ತುಪರಿಸ್ಥಿತಿ ಮತ್ತು ದಲಿತ ಚಳುವಳಿಗಳು ಕ್ರಾಂತಿಯ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಉತ್ತಮ ವಾತಾವರಣ ಸೃಷ್ಟಿಸಿಕೊಟ್ಟದ್ದವು ಎನ್ನಬಹುದು. ಮಾಧ್ಯಮಗಳ ಪ್ರಭಾವ ಅದರಲ್ಲೂ ಪತ್ರಿಕೆ ಮಾಧ್ಯಮಗಳು ಮತ್ತಷ್ಟು ಪುಷ್ಟಿ ನೀಡಿದವು ಇದಕ್ಕೆ ಮುಖ್ಯ ನಿದರ್ಶನದಂತೆ. (ಕಸಿ ಮಾಡಿದ ಕಣ್ಣು, ತತ್ವ ರಾಜಕಾರಣದ ತೂಗುಯ್ಯಾಲೆಯಲ್ಲಿನ ಲೇಖನದಲ್ಲಿ) ವಿವರಿಸಿದ್ದಾರೆ. "೧೯೮೦ನೇ ಇಸವಿಯಲ್ಲಿ ಕೋಲಾರ ಜಿಲ್ಲೆಯ ಪ್ರಗತಿಪರ ಗೆಳೆಯರೆಲ್ಲಾ ಸೇರಿ, ಜಿಲ್ಲಾ ಬಂಡಾಯ ಸಾಹಿತ್ಯ ಸಮಾವೇಶ'ವೊಂದನ್ನೂ ಸಂಘಟಿಸಿದ್ದೆವು. ಸಮಾಜವಾದಿ ಗೆಳೆಯ ಸೋಮಶೇಖರ್ ಮತ್ತು ಹಿರಿಯರದ ಕೆ.ನಾರಾಯಣಸ್ವಾಮಿ ಅವರು ಬಹುಶ: ಸಂಚಾಲಕರಾಗಿದ್ದರು. ಸಮಾವೇಶ ಮುಗಿದ ನಂತರ ನನ್ನ ಬ್ರಾಹ್ಮಣ ಮಿತ್ರರಿಬ್ಬರು ಸ್ಥಳೀಯ ಪತ್ರಿಕೆಯೊಂದರಲ್ಲಿ 'ಬಂಡಾಯದ ದುರ್ಬಲ ದಂತಗಳಿಗೆ ಮೃದುವಾದ ಆಹಾರ ಬ್ರಾಹ್ಮಣ' ಎಂಬ ಶೀರ್ಷಿಕೆಯಡಿಯಲ್ಲಿ ಬಂಡಾಯಗಾರರಾಗಿದ್ದ ನಮ್ಮ ಧೋರಣೆಗಳನ್ನು ಹಗುರವಾಗಿ ಟೀಕಿಸಿ ಪ್ರತಿಕ್ರಿಯಿಸಿದ್ದರು. ಈ ಪತ್ರಿಕೆಗೆ ಮರು ಉತ್ತರ ನೀಡಿದವರಲ್ಲಿ ನಾನು ಒಬ್ಬ. ಈ ಪತ್ರ ಸಮರ ದೊಡ್ಡರಗಳೆಯಾಗಿ ಕೊನೆಗದು ಎಲ್ಲರನ್ನೂ ಬಿಟ್ಟು ನನ್ನ ಕೊರಳಿಗೇ ಉರುಳಾಯ್ತು! ಹಿಮ

ಮುಗಿಯುವ ಮುನ್ನವೇ ಮನೆಬಿಟ್ಟೆ. ನಮ್ಮ ಮನೆಯ ಎದುರಿಗಿದ್ದ ಬ್ರಾಹ್ಮಣರೊಬ್ಬರು ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಇದು ನಾನು ಎದುರಿಸಿದ ಕೋರ್ಟಿನ ಮೊದಲ ಪ್ರಕರಣ. ಈ ಪ್ರಕರಣದಿಂದಾಗಿ ನನ್ನ ವಿದ್ಯಾಭ್ಯಾಸಕ್ಕೆ ಶಾಶ್ವತ ವಿರಾಮ ಬಿದ್ದುಬಿಟ್ಟಿತ್ತು."[೧೦]

ದಲಿತ ಚಳುವಳಿ ಮತ್ತು ಬಂಡಾಯ ಸಮಾವೇಶದ ಸಲುವಾಗಿ ಸಕ್ರಿಯರಾಗಿ ಭಾಗವಹಿಸಿದ್ದವರು, ಪಿ. ವೆಂಕಟ ಗಿರಿಯಪ್ಪ, ಪ್ರೊ.ಎಂ.ಡಿನಂಜುಂಡ ಸ್ವಾಮಿ, ಬರಗೂರು ರಾಮಚಂದ್ರಪ್ಪ, ಕೆ.ರಾಮಯ್ಯ, ಹ.ಸೋಮಶೇಖರಗೌಡ, ಸಿ.ಎಂ.ಮುನಿಯಪ್ಪ, ನ.ಮುನಿಸ್ವಾಮಿ, ದಲಿತ ನಾರಾಯಣಸ್ವಾಮಿ, ಸೋಮಶೇಖರ್ ಗೌಡ, ಅಮರ್ ಸಿ.ಎಸ್, ದ್ವಾರಕನಾಥ, ಎ.ಟಿ.ಶ್ರೀನಿವಾಸ್, ಜಗನ್ನಾಥ್ ಪ್ರಕಾಶ, ಗದ್ದಂ ವೆಂಕಟ ರಾಮಚಂದ್ರಪ್ಪ ನವರಂತಹ ಹೋರಾಟ ಮನೋಭಾವ, ಸಮಾಜ ಪರ ಚಿಂತಕರ ಉಪನ್ಯಾಸಗಳಿಂದ ಮುತ್ತಪ್ಪ ಉತ್ತೇಜನಕ್ಕೆ ಒಳಗಾದದ್ದು. ಹೀಗೆ ಸಮಾನ ಮನಸ್ಕರ ಗೆಳೆಯರ ಗುಂಪೊಂದು ಕೋಲಾರದ ಜಿಲ್ಲೆಯಲ್ಲಿ ಕ್ರಾಂತಿಯೊಂದನ್ನು ಹುಟ್ಟುಹಾಕಲು ತವಕ ಪಡುತ್ತಿತ್ತು. ಇದೇ ಸಂದರ್ಭದಲ್ಲಿ "ಮಾನವತಾ ವೇದಿಕೆ ಯಿಂದ 'ಸಮತ' ಎಂಬ ಪತ್ರಿಕೆಯನ್ನು ತರುತ್ತಿದ್ದರು.

ಬಂಡಾಯ ಸಾಹಿತ್ಯ ಸಮ್ಮೇಳನ ಸೃಷ್ಟಿಸಿದ ಅವಾಂತರ ಲಕ್ಷ್ಮೀಪತಿ ಕೋಲಾರ ಮತ್ತು ಇವರ ತಂದೆಯವರ ನಡುವೆ ವೈಮನಸ್ಸು ಮೂಡಲು ಕಾರಣವಾಯಿತು. ಕಪಿ ಮಡಗಿದ ಕಣ್ಣು ಕೃತಿಯಲ್ಲಿ ಬ್ರಾಹ್ಮಣರ ಬಳ್ಳಿನ ಬ್ರಹ್ಮಾಸ್ತ್ರವಾದ ಶೂದ್ರ ತಂದೆ! ಎಂಬ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಬ್ರಾಹ್ಮಣರು ತಂದೆಯವರ ಎದುರು ಪ್ರಶ್ನೆಗಳ ಸುರಿಮಳೆ ಗೈಯುವ ಸಂದರ್ಭದಲ್ಲಿ. "ಸಾಹಿತ್ಯದ ನನ್ನ ಒಲವಿನ ಮೊದಲ ಆಸಕ್ತಿಗಳೇ ಧರ್ಮ ಮತ್ತು ತತ್ವಜ್ಞಾನಗಳಾಗಿದ್ದವು. ಪ್ರಶ್ನಿಸುವ ಅವರ ಉಮೇದು ತಣ್ಣಗಾಗುವ ಹೊತ್ತಿಗೆ ರಾತ್ರಿ ಒಂದು ಗಂಟೆಯಾಗಿತ್ತು. ಏನೆಲ್ಲಾ ವಾದ–ತರ್ಕಗಳ ನಂತರವೂ ಅವರು ಕೇಳಿದ್ದಿಷ್ಟೇ. 'ನಮ್ಮನ್ನ ಬ್ರಾಹ್ಮಣರೇ ಅಲ್ಲ ಅಂತೀಯಲ್ಲ? ನಾನಂದೆ ಹೌದು ಖಂಡಿತ ನೀವು ನಿಜವಾದ ಅರ್ಥದಲ್ಲಿ ಬ್ರಾಹ್ಮಣರೇ ಅಲ್ಲ. ಯಾಕಂದ್ರೆ ನಿಜವಾದ ಬ್ರಾಹ್ಮಣದವರು ಮಂತ್ರಗಳಿಂದ ಸಂಸ್ಕರಿಸಲ್ಪಟ್ಟ ಗೋಮಾಂಸವನ್ನಷ್ಟೇ ತಿನ್ನಬೇಕು. ಯಾವ ಬ್ರಾಹ್ಮಣನು ಹೀಗೆ ಮಾಡುವುದಿಲ್ಲವೋ ಅವರು ಇಪ್ಪತ್ತೊಂದು ಜನ್ಮಗಳವರೆಗೂ ಪಶುವಾಗಿ ಹುಟ್ಟುತ್ತಾನೆ. ಅಂತ ಸ್ಮೃತಿಗಳಲ್ಲಿ ಹೇಳಿದೆ ಹಾಗಂದವನೇ ನಾನು ಹಳೇ' ಸಂಕಮಣದಲ್ಲಿನ ಲೇಖನವೊಂದರಲ್ಲಿನ ಈ ಉಲ್ಲೇಖವನ್ನು ತಂದು ತೋರಿಸಿದೆ ಅವರ ಪೈಕಿ ಕುಟ್ಟಯ್ಯಣ್ಣ ಎಂಬಾತ 'ಅದು ಹಿಂದಿನ ಕಾಲದ ವಿಚಾರ, ಕಾಲಕ್ಕೆ ತಕ್ಕಂತೆ ನಾವು ಬದಲಾಗಿದ್ದೀವಿ.' ಅಂದನು ನಾನೂ ಅದನ್ನೇ ಹೇಳ್ತಿರೋದು ಕಾಲಕ್ಕೆ ತಕ್ಕಂತೆ ಬದಲಾಗಿ ಬ್ರಾಹ್ಮಣ್ಯ ಬಿಟ್ಟು ಹೃದಯವಂತಿಕೆಯ ಮನುಷ್ಯರಾಗಿ ಅಂತ ಎಂದೆ 'ಸರಿ ಇಷ್ಟು ಮಾತಾಡ್ತೀಯಲ್ಲಯ್ಯ, ನೀನು ಗೋಮಾಂಸಾನ್ನ ನಾಳೆ ತಿಂದು ತೋರಿಸು: ಅಂತ ಸವಾಲು ಹಾಕಿದರು. ತಕ್ಷಣವೇ ನಾನು 'ನಾಳೆ ಏನು ತಿನ್ನೋದು? ಈಗಾಗ್ಲೇ ತಿಂದಿದ್ದೀನಿ' ಎಂದೆ. ನನ್ನ ಉತ್ತರ ಕೇಳಿದೊಡನೆಯೇ ನನ್ನ ತಂದೆಯೊಳಗಿನ ಬ್ರಾಹ್ಮಣಭೂತ ಕೆರಳಿ ನನ್ನ ಕಪಾಳಕ್ಕೆ ಬಿಗಿಯಿತು. ನನ್ನೊಳಗಿನ ಭೂತವೂ ಕೆರಳಿ ನಾನು ವಿವೇಚನೆಯನ್ನು ಕಳೆದುಕೊಂಡೆ ಕೆಳಗೆ ಒಣಗಲೆಂದು ಹಾಕಿದ್ದ ಕಟ್ಟಿಗೆಯ ತುಂಡೊಂದನ್ನು ಕೈಗೆತ್ತಿಕೊಂಡೆ 'ಏಯ್ ಹೇಡಿ. ತಾಕತ್ತಿದ್ರೆ ವಾದ ಮಾಡಿ ಗೆಲ್ಲು. ಅದು ಬಿಟ್ಟು ಹೊಡೆದು ನನ್ನ ಬಾಯಿ ಮುಚ್ಚಿಸೋಕೆ ನೋಡ್ತೀಯಾ? ನೀನೇನ್ ಹೊಡೆಯೋದು? ನಾನು ಹೊಡೆದೆ ಅಂದ್ರೆ ತಲೆಸುತ್ತಿ ಬೀಳ್ತೀಯ ಹುಷಾರ್' ಅಂದೆ. ಎಲ್ಲರೂ ಮರುಗಟ್ಟಿ ಹೋದವರಂತೆ ನಿಂತು ಬಿಟ್ಟರು. ಬ್ರಾಹ್ಮಣರು ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡಿದರು. ಅಪ್ಪ–ಮಗನನ್ನು ಬೇರೆ ಮಾಡುವ ಅವರ ತಂತ್ರ ಫಲಿಸಿತ್ತು. 'ನೀನು ನನ್ನ ಮಗನೇ ಅಲ್ಲ' ಅನ್ನುವ ನನ್ನ ತಂದೆಯ ಮಾತು ಮುಗಿಯುವ ಮೊದಲೇ ನಿನ್ನಂತವನ ಮಗನಾಗಿ ನಾನೂ ಹುಟ್ಟಬಾರದಾಗಿತ್ತು. ಅಂತಂದು ಆ ಅಪರ ರಾತ್ರಿಯಲ್ಲಿ ಮನೆ ಬಿಟ್ಟು ಹೊರಟೆ"[೧೧]

ಬಹಳ ಮುಖ್ಯವಾಗಿ ಗಮನಿಸ ಬೇಕಾದದ್ದು ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳದ ವ್ಯವಸ್ಥೆಯ ಡೊಂಕನ್ನು ಪ್ರಶ್ನಿಸುವ ಮನೋಧರ್ಮವನ್ನು ರೂಪಿಸಿಕೊಂಡಿದ್ದ ಲಕ್ಷ್ಮೀಪತಿ ಕೋಲಾರ ಅವರ ಜೀವನದ ದೊಡ್ಡ ತಿರುವು ಇದಾಗಿದ್ದು 'ಇಲ್ಲಿಂದಾಚೆಗೆ ಮನೆ ತೊರೆದು ಹೊರಬಂದರು. ಇದಾದ ನಂತರವು ಸಹ ಬ್ರಾಹ್ಮಣರು ಕೇಸ್ ದಾಖಲಿಸಿದ್ದು 'ದಲಿತ ಸಂಘಟನೆಗಳು ಬೆಂಬಲಕ್ಕೆ ಬಂದು ಕೆ.ರಾಮಯ್ಯನವರು ಜಾಮೀನು ಕೊಟ್ಟು ಬಿಡಿಸಿರು. ಇಂದಿಗೂ ತಂದೆ ಮಗನ ನಡುವೆ ಮಾತು ನಿಂತು ಹೋಗಿದೆ. ಲಕ್ಷ್ಮೀಪತಿ ಕೋಲಾರ ಅವರ ಜೀವನದಲ್ಲಿ ಬಹಳ ಮುಖ್ಯವಾದ ಕಾಲ ಘಟ್ಟ ಎಂದೇ ತಿಳಿಯಬಹುದು. ಪುರಾಣಗಳನ್ನು ವಿಮರ್ಶಾತ್ಮಕ ದೃಷ್ಟಿಕೋನದಿಂದ ಗ್ರಹಿಸುವ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದರು.

ಈ ಆಹಾರ ಸಾಂಸ್ಕೃತಿಕ ರಾಜಕಾರಣವು ಇಂದಿಗೂ ಪ್ರಸ್ತುತ ಎಂಬಂತೆ ಮುತ್ತೂರಿನಲ್ಲಿ ಸಂಕೇತಿ ಬ್ರಾಹ್ಮಣರು ಸೋಮ ಯಾಗವನ್ನು ನಡೆಸಿ ನಂತರ ಸೋಮರಸದ ಸೇವನೆಯೊಂದಿಗೆ ಯಜ್ಞಕುಂಡದಲ್ಲಿ ಬೆಂದ ಮೇಕೆಯ ಮಾಂಸವನ್ನು ಪ್ರಸಾದವನ್ನಾಗಿ ಸೇವಿಸಿದರೆಂಬ ಪ್ರಜಾವಾಣಿಯ ಸುದ್ದಿ (ಮೇ ೪/೨೦೧೬) ರಲ್ಲಿ ಪ್ರಕಟವಾಗಿತ್ತು.ಈ ಸೋಮಯಾಗ ಧರ್ಮ ಹಾಗೂ ಆಹಾರ ನಂಬಿಕೆಗಳ ಕುರಿತಂತೆ ಚರ್ಚೆ ಹುಟ್ಟುಹಾಕಿತ್ತು. ಈ ಚರ್ಚೆಯ ಸಂದರ್ಭದಲ್ಲಿ ಹುಟ್ಟಿದ ಅನೇಕ ಪ್ರಶ್ನೆಗಳಿಗೆ ಇತಿಹಾಸ ಮತ್ತು ಧಾರ್ಮಿಕ ಪಠ್ಯಗಳ ಮೂಲಕ ಉತ್ತರ ಹುಡುಕುವ ಪ್ರಯತ್ನವಾಗಿ ಲಕ್ಷ್ಮೀಪತಿ ಕೋಲಾರ ಅವರ ವಿಸ್ತೃತ ಲೇಖನವೊಂದು ದಿನಾಂಕ ೨೯ ಮೇ ೨೦೧೬ ರಲ್ಲಿ. "ಧರ್ಮ ಸಂಕಟ ಸೃಷ್ಟಿಸಿರುವ ಮಾದಕ ಸೋಮ!" ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿತ್ತು. *೧೯೮೦ ನೇ ದಶಕದಲ್ಲಿ ಎದುರಿಸಿದ ಬ್ರಾಹ್ಮಣ್ಯವನ್ನು ಮತ್ತೆ ೨೦೧೬ ರಲ್ಲಿ ಎದುರಿಸಿ ಲೇಖನವನ್ನು ಬರೆದು ನಿಜವಾದ ಪರಂಪರೆಯ ಆಚಾರ ಪರ ವಿಚಾರ ಮಂಡನೆ ಮಾಡಿದ್ದರು.ಆದರೆ ಈ ಬಾರೀ ಯಾರು ಕಪಾಳ ಮೋಕ್ಷ ಮಾಡೋದಲ್ಲ, ಅವರ ಲೇಖನಕ್ಕೆ ವಿರೋಧ ಪತ್ರಗಳೇ ಬರಲಿಲ್ಲ. ಸಂಪ್ರದಾಯವಾದಿಗಳು ಜಾಣ ಕುರುಡುತನವನ್ನು ಪ್ರದರ್ಶನ ಮಾಡಿದಂತೆ ಭಾಸವಾಗುತ್ತಿತ್ತು.

"ದಲಿತ ಚಳುವಳಿ ಮತ್ತು ಬಂಡಾಯ ಸಮಾವೇಶದ ಸಲುವಾಗಿ ನಾವು ಕೋಲಾರದ ಗೋಡೆಗಳ ಮೇಲೆಲ್ಲಾ ದಪ್ಪ-ದಪ್ಪ ಅಕ್ಷರಗಳಲ್ಲಿ ಬರೆದಿದ್ದ ಸ್ಲೋಗನ್‌ಗಳನ್ನು ಗಮನಿಸಿದ ಪಿ.ವೆಂಕಟಗಿರಿಯಪ್ಪ ಸ್ವಯಂ ಪ್ರೇರಿತವಾಗಿ ಬಂಡಾಯ ಸಮಾವೇಶಕ್ಕೂ ಬಂದು ಪ್ರೊ.ಎಂ.ಡಿ.ನಂಜುಂಡಸ್ವಾಮಿ, ಬರಗೂರು ರಾಮಚಂದ್ರಪ್ಪ ಮುಂತಾದವರ ಉಪನ್ಯಾಸಗಳನ್ನು ಕೇಳಿ ಅವರ ಉತ್ತೇಜನಕಾರೀ ಪ್ರತಿಕ್ರಿಯೆಗಳ ಮೂಲಕ ಹತ್ತಿರವಾಗಿದ್ದರು."

ಪಿ.ವೆಂಕಟಗಿರಿಯಪ್ಪ ನವರು ಹೇಗೆ? ತಮ್ಮ ಹೋರಾಟದ ಜೀವನದಲ್ಲಿ ನೆರವಾದರು ಎಂಬುದನ್ನು ಕಸಿ ಮಡಗಿದ ಕಣ್ಣು ಲೇಖನ ಸಂಗ್ರಹದಲ್ಲಿ ವಿವರಿಸಿದ್ದಾರೆ. ಪಿ.ವೆಂಕಟಗಿರಿಯಪ್ಪನವರು ವಕೀಲಿ ವೃತ್ತಿ ಮಾಡುತ್ತಿದ್ದು, ಎರಡು ಬಾರಿ ಶಾಸಕರಾಗಿ ಗೆದ್ದು ಬಂದಿದ್ದರು. ಈ ಮದ್ಯ ವಕೀಲಿ ವೃತ್ತಿಯನ್ನು ಬಿಟ್ಟಿದ್ದರು ಲಕ್ಷ್ಮೀಪತಿ ಕೋಲಾರ ಅವರ ಮೇಲೆ ಬ್ರಾಹ್ಮಣರೊಬ್ಬರು ಹಾಕಿದ್ದ ಕೇಸಿನ ವಿರುದ್ಧ ವಾದ ಮಾಡುವುದಾಗಿ ಲಕ್ಷ್ಮೀಪತಿ ಅವರಿಗೆ ಧೈರ್ಯ ತುಂಬಿದ್ದರು. ಆದರೆ ಮಾರ್ಕ್ಸಿಸ್ಟ್ ಪಕ್ಷದ ಆರ್.ವೆಂಕಟ ರಾಮಯ್ಯನವರು ಈ ಕೇಸ್ ವಾದಿಸಲು ಮುಂದಾಗಿದ್ದರು.

"ಕೋಲಾರದ ಕಾಲೇಜು ಕಟ್ಟಡದ ಸ್ಥಾಪನೆಗೆ ಶ್ರಮಿಸಿದ್ದ ಹಾಗೂ ಜಿಲ್ಲೆಯ ಅನೇಕ ರಾಜಕಾರಣಿಗಳನ್ನು ರೂಪಿಸಿದ ಪಿ.ವೆಂಕಟಗಿರಿಯಪ್ಪ ನವರನ್ನು ಇಂದು ಜಿಲ್ಲೆಯಲ್ಲಿ ನೆನಪಿಸಿಕೊಳ್ಳುವವರೇ ಇಲ್ಲದಂತಾಗಿದೆ. ಎಡ ಚಿಂತನೆಗಳ ಬಲವುಳ್ಳ ಯುವಕರಿಗೆಲ್ಲಾ ಪಿ.ವಿ.ಯವರು 'ಲೆನಿನ್ ಟು ದಿ ರೂರಲ್ ಪೂರ್' ಪುಸ್ತಕವನ್ನು ಓದುವಂತೆ ಪದೇ-ಪದೇ

ಹೇಳುತ್ತಿದ್ದರು". ಭಾಗಶಃ ಲಕ್ಷ್ಮೀಪತಿಯವರ ವಿಚಾರಚಿಂತನೆಗಳ ಪ್ರಭಾವ ಹಂತ ಹಂತವಾಗಿ ಮುಂದುವರೆದು ಕ್ರಾಂತಿಕಾರಿ ಮನೋಭಾವ ಹೋರಾಟದ ಹಾದಿ ತುಳಿಯಲು ಸಹಕಾರಿಯಾಗಿದ್ದವರು ಎಂದು ಭಾವಿಸಬಹುದು. ಟಿ.ವೆಂಕಟಗಿರಿಯಪ್ಪನವರ ಒಡನಾಟವು ಹೀಗೇ ಮುಂದುವರೆದು ೧೯೬೭ರ ಹೊತ್ತಿಗೆಯಲ್ಲಿ ಪಿಚ್ಚಳ್ಳಿ ನಿರ್ದೇಶಿಸಿದ 'ಸಿಂಹ ಆಟ' ರಚನೆ ಲಕ್ಷ್ಮೀಪತಿಕೋಲಾರ, ನಾಟಕ ನೋಡಿ ಪಿಚ್ಚಳ್ಳಿ ಶ್ರೀನಿವಾಸ ಅವರಿಗೆ ೫೦೦ರೂ ಗಳನ್ನು ಕೊಟ್ಟು ಮೆಚ್ಚಿಗೆ ಮಾತಾಡಿ ಹೋಗಿದ್ದನ್ನು ಲಕ್ಷ್ಮೀಪತಿಯವರು ನೆನಪಿಸಿ ಕೊಂಡಿದ್ದಾರೆ.

## ಸಿಗರಾಪುರ ಹೋರಾಟ

ಚಳುವಳಿ ಎಂಬುದು ನಿರಂತರ ಮತ್ತು ಜಾಗೃತಿ. 'ಅರಿವು ಮತ್ತು ಆಧುನಿಕ ಸಮಾಜ ಮುಖಾಮುಖಿಯಾಗುವುದರ ಸಂಘರ್ಷ. ಸೈದ್ಧಾಂತಿಕವಾಗಿಯೂ, ಪ್ರಾಯೋಗಿಕವಾಗಿಯೂ ಜಾತಿ ಸಮಸ್ಯೆಯು ಅಗಾಧವಾದುದು. ವಸ್ತುತಃ ಅದು ಭಯಾನಕ ಪರಿಣಾಮಗಳ ಬಗ್ಗೆ ಮುಂದಾಗಿ ಎಚ್ಚರಿಕೆ ಕೊಡುವ ಒಂದು ವ್ಯವಸ್ಥೆಯಾಗಿದೆ. ಅದು ಸ್ಥಳೀಯ ಸಮಸ್ಯೆಯಾದರೂ ವ್ಯಾಪಕವಾದ ಕೇಡು ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಯಾಕೆಂದರೆ ಭಾರತದಲ್ಲಿ ಜಾತಿ ಇರುವವರೆಗೂ ಹಿಂದೂಗಳು ಅಂತರ್ಜಾತೀಯ ವಿವಾಹವಾಗಲಾರರು ಅಥವಾ ಹೊರಗಿನವರೊಂದಿಗೆ ಸಾಮಾಜಿಕ ಸಂಬಂಧ ಮಾಡಲಾರರು. ಹಿಂದೂಗಳು ಪ್ರಪಂಚದ ಬೇರೆ ಭಾಗಗಳಿಗೆ ವಲಸೆ ಹೋದರೆ ಭಾರತದ ಜಾತಿಯು ಒಂದು ಜಾಗತಿಕ ಸಮಸ್ಯೆಯಾಗಿ ಪರಿಣಮಿಸುತ್ತದೆ.

"ಜಾತಿ ವ್ಯವಸ್ಥೆಯ ವಿರುದ್ಧವಾಗಿ ಹೋರಾಡುವವರ ಹಾದಿ ದುರ್ಗಮವಾದುದು. ಜಾತಿ ಸಂಘಟನೆಗಳನ್ನು ಮಾಡುವವರಿಗಿರುವಷ್ಟು ಸುರಕ್ಷತೆ ಜಾತಿ ವಿನಾಶಕ್ಕೆ ತೊಡಗಿರುವವರಿಗಿರುವುದಿಲ್ಲ. ಇದು ದುರಂತ ಲಕ್ಷ್ಮೀಪತಿಯವರು ಜಾತಿ ವಿನಾಶದ ಚಳುವಳಿಯ ಹಾದಿ ತುಳಿದಾಗ ಅನುಭವಿಸಿದ ನೋವುಗಳು ಇಬ್ಬಗೆಯವು. ಹೋರಾಟಕ್ಕೆ ಕಾರಣ ಮೂಲವಾದ ವಿರೋಧ ನೆಲೆಯ ಪ್ರತೀಕಾರ ಧೋರಣೆ ಒಂದು ಬಗೆಯಾದರೆ, ಹೋರಾಟಕ್ಕೆ ತೊಡಗಿದ ಒಳಗಿನ ಶತ್ರುಗಳೇ ಕೊಟ್ಟ ತಿರುಗುಬಾಣದ ನೋವು ಮತ್ತೊಂದು ಬಗೆಯದು. ಈ ನೋವನ್ನು ಲಕ್ಷ್ಮೀಪತಿಯವರು 'ಎರಡು ಹೆಡೆ ಎತ್ತಿದ ಜಾತಿಯೆಂಬ ವಿಷಸರ್ಪ'ಲೇಖನದಲ್ಲಿ ಹಿಡಿಸಿಟ್ಟಿದ್ದಾರೆ. ಸಿಗರಾಪುರದ ಪ್ರಕರಣದಲ್ಲಿ ಲಕ್ಷ್ಮೀಪತಿಯವರು ಸಿಕ್ಕಿಕೊಂಡದ್ದು ಮುಗ್ಧವಾಗಿ ಮನುಷ್ಯರನ್ನು ನಂಬಿದ್ದರಿಂದ, ತನ್ನ ಕೈ ಬರಹದಲ್ಲೇ ಮುಚ್ಚಳಿಕೆ ಪತ್ರ ಬರೆದು ಸಿಕ್ಕಿಹಾಕಿಕೊಂಡ ಲಕ್ಷ್ಮೀಪತಿ ತನ್ನ ಸರಳ ಮುಗ್ಧ ಭಾವಗಳಿಗೆ ತೆತ್ತ ಬೆಲೆ ಅಪಾರವಾದುದು. ಹೋರಾಟ ನೀಡಿದ ಅನುಭವದ ದೊಡ್ಡ ಪಾಠವಿದು ತೀರ ಆಪ್ತರ ಬಗ್ಗೆಯೂ ನಂಬಿಕೆ ಕಳೆದು ಕೊಳ್ಳಬಹುದಾಗಿದ್ದ ಒಳಸುಳಿಗಳನ್ನು ದಾಟಿ ಬಂದ ಲಕ್ಷ್ಮೀಪತಿಯವರು ಇನ್ನೂ ಮನುಷ್ಯ ಸಂಬಂಧಗಳ ಬಗ್ಗೆ ಅಪಾರ ಪ್ರೀತಿ, ವಿಶ್ವಾಸ ಇಟ್ಟುಕೊಂಡಿರುವುದು ಅಚ್ಚರಿಯನ್ನುಂಟು ಮಾಡುವಷ್ಟೇ ಗೌರವದಿಂದ ಬಾಗುವಂತೆ ಪ್ರಭಾವಿಸುತ್ತದೆ." ಎಂದು ಎಸ್.ಜಿ.ಸಿದ್ಧರಾಮಯ್ಯ ನವರು ತಮ್ಮ ಅಭಿಪ್ರಾಯವನ್ನು ಕೃತಿಯ ಮುನ್ನುಡಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

ಇದು ಭಾರತದ ಮಟ್ಟಿಗೆ ಆದಿಕಾಲದಿಂದಲೂ ಇಲ್ಲಿಯವರೆಗೂ ಕಾಡುತ್ತಿರುವ ಜಾತಿ ಎಂಬ ಪೆಡಂಭೂತ. ೧೯೭೯ರ ಸುಮಾರಿನಲ್ಲಿ ಕೋಲಾರ ಜಿಲ್ಲೆಯಲ್ಲಿಯೂ ಜಾತಿ ವ್ಯವಸ್ಥೆ, ಭೂ ಮಾಲೀಕರ ದಬ್ಬಾಳಿಕೆ ದೌರ್ಜನ್ಯಗಳಿಗೆ ಸಾಕ್ಷಿ ಎಂಬಂತೆ ಕೆ.ಜಿ.ಎಫ್ ಗೆ ಸುಮಾರು ನಾಲ್ಕೈದು ಕಿಲೋಮೀಟರ್ ದೂರದಲ್ಲಿರುವ ಸಿಗರಾಪುರದಲ್ಲೊಂದು ದಲಿತರ ಮೇಲೆ ಜಾತಿ ಹೆಸರಲ್ಲಿ ಅಮಾನವೀಯ ಘಟನೆಯೊಂದು ನಡೆದಿತ್ತು. ಭೂಮಾಲೀಕರ ಮಗನು ದಲಿತರ ಹೆಣ್ಣನ್ನು ಮದುವೆಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡಿದ್ದನ್ನು. ನಂತರ ಸ್ವಜಾತಿ

ಮದುವೆಯಾಗಿ ವಂಚನೆ ಮಾಡಿದ್ದ. ಈ ಪ್ರಕರಣದಲ್ಲಿ "ಪ್ರೀತಿಸಿ ದೈಹಿಕ ಸಂಬಂಧ ಬೆಳೆಸಿದ ಒಕ್ಕಲಿಗರ ಹುಡುಗನಿಗೂ ಅವರ ಮನೆಯವರಿಗೂ ದಲಿತ ಹುಡುಗಿಯನ್ನೇ ಮನೆ ತುಂಬಿಸಿಕೊಳ್ಳಲು ಇರುವ ತೊಡಕೆಂದರೆ ಅಸ್ಪೃಶ್ಯತೆಯೇ. ಲೈಂಗಿಕ ಸಂಬಂಧದಲ್ಲಿ ಅಡ್ಡ ಬಾರದ ಜಾತಿ ಮತ್ತು ಅಸ್ಪೃಶ್ಯತೆ ವಿವಾಹದ ಸಂದರ್ಭದಲ್ಲಿ ಹೇಗೆ ತೊಡಕಾಗಿ ಬಿಡುತ್ತದೆಂಬುದಕ್ಕೆ ಉತ್ತರವೇ ಇಲ್ಲ. ಮುಟ್ಟುವುದೇ ಪಾಪವೆಂದು ಬಗೆದು ಮುಟ್ಟಿ ಕೊಲೆ ಮಾಡುತ್ತಾರೆ. ಕೊಲೆಯ ಕ್ರೌರ್ಯ, ಮುಟ್ಟಿದ ಪಾಪವನ್ನು ಪರಿಹರಿಸಿ ಬಿಡುತ್ತದೆಂಬ ದಿಗಿಲುಗೊಳಿಸುವ ಜಾತಿ ನಂಬಿಕೆ ಅಮೇರಿಕದ ಕ್ರೌರ್ಯವನ್ನು ಮೀರಿದ್ದು ಎನಿಸಿಬಿಡುತ್ತದೆ. ಇವರ ತದ್ವಿರುದ್ಧ ಪ್ರಕರಣವನ್ನು ಒಂದಷ್ಟು ಗಮನಿಸಿ.

ಪ್ರೀತಿಸಿದ ಹುಡುಗ ದಲಿತನಾದರೆ ಕೊಲೆಯಾಗುತ್ತಾನೆ. ಕೆಲವೊಮ್ಮೆ ಪ್ರೀತಿಸಿದ ಮೇಲ್ಜಾತಿಯ ಹುಡುಗಿಯೂ! ಆದರೆ ಯಾವುದೇ ಇಂತಹ ಪ್ರಕರಣದಲ್ಲೂ ಪ್ರೀತಿಸಿಯೂ ಮೋಸ ಮಾಡುವ ಮೇಲ್ಜಾತಿಯ ಹುಡುಗನಿಗೆ ಮಾತ್ರ ಎಂತಹುದೇ ಶಿಕ್ಷೆಯಿರುವುದಿಲ್ಲ. ಈ ನ್ಯಾಯ ಪದ್ಧತಿಯೇ ಪುರುಷ ಪ್ರಧಾನ ಭಾರತೀಯ ಜಾತ್ಯಂಧ ಮನಸ್ಸಿನ ನಗ್ನ ನಕ್ಷೆ."

ಸಿಗರಾಪುರದ ಪ್ರಕರಣದಲ್ಲಿ 'ದಲಿತ ಸಂಘರ್ಷ ಸಮಿತಿ' ಕೆ.ರಾಮಯ್ಯನವರ ನೇತೃತ್ವದಲ್ಲಿ ಯುವ ಕಾರ್ಯಕರ್ತರೊಂದಿಗೆ ತಡರಾತ್ರಿ ನ್ಯಾಯಕ್ಕಾಗಿ ಹೋಗಿದ್ದರು. ಅಂತರ್‌ಜಾತಿ ವಿವಾಹಕ್ಕೆ ಒಪ್ಪದ ಭೂಮಾಲೀಕರ ಕುಟುಂಬ ಪರಿಹಾರಕ್ಕೆ ಒಪ್ಪಿತು "ಅನ್ಯಾಯವಾದ ಹುಡುಗಿಗೆ ಎರಡು ಎಕರೆ ಜಮೀನು ಒಂದು ಜೊತೆ ಎತ್ತು ಮತ್ತು ಅಂಗಡಿ ಇಟ್ಟುಕೊಂಡು ಬದುಕಲಿಕ್ಕೆಂದು ಐದು ಸಾವಿರ ರೂಗಳನ್ನು ಪರಿಹಾರವಾಗಿ ಕೊಡುವ ಸಲಹೆ ಇಟ್ಟರು." ಜೀವಮಾನ ಪರ್ಯಂತ ಕೂಲಿ ಮಾಡಿ ಜೀರ್ಣವಾಗಿ ಹೋಗಿದ್ದ ಆ ಹುಡುಗಿಯ ತಂದೆ ಹೇಗೋ ಬದುಕುವುದೇ ಮುಖ್ಯವೆಂದು ಭಾವಿಸಿದಂತೆ ಕಾಣಿಸುತ್ತದೆ. ಆ ಸಲಹೆಯನ್ನು ಒಪ್ಪಿಕೊಂಡು ಬಿಟ್ಟರು."

"ಗ್ರಾಮೀಣ ಸಮಾಜ ನ್ಯಾಯ ಕಲ್ಪನೆಗೆ ಸಂಬಂಧಪಟ್ಟ ವಿಷಯದಲ್ಲಿ ದಲಿತ ಗುಂಪು ಅಥವಾ ವ್ಯಕ್ತಿಯ ನಡವಳಿಕೆ ಸಾಂಪ್ರದಾಯಿಕವಾಗಿ ಒಪ್ಪಿತವಾದ ನೈತಿಕ, ಪ್ರೀತಿ, ಲೈಂಗಿಕತೆ ಹಾಗೂ ನಡವಳಿಕೆಗೆ ವಿರುದ್ಧವಾಗಿದ್ದಾಗ ಅಥವಾ ಅದನ್ನು ಪ್ರಶ್ನಿಸಿದಾಗ ಹಿಂದೂ ಸಮಾಜ ಅದನ್ನು ನೈತಿಕ ನಿಯಮಗಳ ಉಲ್ಲಂಘನೆ ಎಂದೇ ಪರಿಗಣಿಸಿ ತೀವ್ರವಾಗಿ ಶಿಕ್ಷೆಯನ್ನು ವಿಧಿಸುತ್ತದೆ. ಹಿಂದೂ ಸಮಾಜದ ನ್ಯಾಯ ಪರಿಕಲ್ಪನೆಗಳು ಮೂಲತಃ ಜಾತಿ ವ್ಯವಸ್ಥೆಯೊಂದಿಗೆ ತಳುಕು ಹಾಕಿಕೊಂಡಿವೆ. ಇದರಷ್ಟೇ ಮುಖ್ಯವಾದ ಇನ್ನೊಂದು ಅಂಶವೆಂದರೆ, ನ್ಯಾಯದ ಸ್ವರೂಪ ಇಡೀ ಹಳ್ಳಿಯ ಕೇಂದ್ರ ಪ್ರಜ್ಞೆಯ ಮೇಲೆ ಅವಲಂಬಿತವಾಗಿರುತ್ತದೆ. ಇದನ್ನು ಮೇಲ್ಜಾತಿಯವರ ಪ್ರಶ್ನಾತೀತ ಆಳ್ವಿಕೆ ಎಂದೂ ಹೇಳಬಹುದು. ಈ ಹಿನ್ನಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಳ್ಳಿ ನ್ಯಾಯದ ಮೂಲ ಘಟಕ ಎನ್ನುವುದನ್ನೇ ತಿರಸ್ಕರಿಸಿದರು."

ದಲಿತ ಸಂಘರ್ಷ ಸಮಿತಿಯು ಮುಚ್ಚಳಿಕೆ ಪತ್ರವನ್ನು ಬರೆಸಿದರು ಅದು ಲಕ್ಷ್ಮೀಪತಿ ಕೋಲಾರ ಅವರ ಹಸ್ತಾಕ್ಷರವಾಗಿತ್ತು. ಇದಾದ ಎರಡು ದಿನಗಳ ನಂತರ 'ಕೋಲಾರ ವಾಣಿ' ಪತ್ರಿಕೆಯಲ್ಲಿ ಸಿಗರಾಪುರದಲ್ಲಿ ಯುವಕರ ತಂಡದ ಡಕಾಯಿತಿ! ಸ್ತ್ರೀಯರ ಮೇಲೆ ಅತ್ಯಾಚಾರದ ಬೆದರಿಕೆಯೊಡ್ಡಿ ಐದು ಸಾವಿರ ರೂಗಳ ಲೂಟಿ, ತಂಡದ ನೇತೃತ್ವವನ್ನು ವಹಿಸಿದ್ದವರು ಕೋಲಾರದ ಲಕ್ಷ್ಮೀಪತಿ' ಎಂಬ ಸುದ್ದಿ ಮುಖ ಪುಟದಲ್ಲೇ ಪ್ರಕಟವಾಗಿತ್ತು.

"ಜಾತಿ ವಿರೋಧಿಯಾದ ನನ್ನನ್ನು ತುಳಿಯಲು ಸದವಕಾಶ ದೊರೆಯಿತೆಂಬಂತೆ ಆ ಬ್ರಾಹ್ಮಣ ಪತ್ರಿಕೆಯೂ ಹೆಡೆಬಿಚ್ಚಿ ಭುಸುಗುಟ್ಟಿ ಮುಖಪುಟದಲ್ಲೇ ದಪ್ಪ ಅಕ್ಷರಗಳಲ್ಲಿ 'ಡಕಾಯಿತ

ಲಕ್ಷ್ಮೀಪತಿ' ಎಂದು ನಿರ್ಲಜ್ಜವಾಗಿ ಪ್ರಕಟಿಸಿತ್ತು. ಮತ್ತೂ ದುರಂತವೆಂದರೆ ಮುಚ್ಚಳಿಕೆ ಪತ್ರದ ಬರವಣಿಗೆಯನ್ನು ಗುರುತಿಸಿದ್ದ ದಲಿತ ಗೆಳೆಯನೇ ಒಬ್ಬ ಅದು ನನ್ನದೇ ಕೈ ಬರವಣಿಗೆಯೆಂದು ಸುಲಭವಾಗಿ ಗುರುತಿಸಿ, ಅದರ ಆಧಾರದ ಮೇಲೆ ತಾನೇ ನಿಂತು ಡಕಾಯಿತಿ ಪ್ರಕರಣವನ್ನು ನನ್ನ ಮೇಲೆ ದಾಖಲಿಸಿದ್ದ! ನನ್ನ ವಿರುದ್ಧ ಆತ ಹಾಗೇಕೆ ಮಾಡಿದನೆಂಬುದು ಇಂದಿಗೂ ನನಗೆ ಬಿಡಿಸಲಾಗದ ಒಗಟಾಗಿಯೇ ಉಳಿದಿದೆ.

ಆಗ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕರಾಗಿದ್ದ ಸಿ.ಎಂ.ಮುನಿಯಪ್ಪ, ವಿಜಯಕುಮಾರ್ ಮತ್ತಿತರ ಗೆಳೆಯರೊಂದಿಗೆ ಹೊಸದಾಗಿ ಎದುರಾದ ಡಕಾಯಿತಿ ಸಮಸ್ಯೆಯ ಕುರಿತು ವಿವರವಾಗಿ ಮಾತನಾಡಿದೆ. ನಂತರ ನಾನೂ ಮತ್ತು ವಿಜಯಕುಮಾರ್ ಕೆ.ಜಿ.ಎಫ್‌ಗೆ ಹೋಗಿ ರಾಮಯ್ಯನನ್ನು ಭೇಟಿ ಮಾಡಿ ಮಾತನಾಡಿದೆವು. ನಂತರ ಕೆಜಿಎಫ್ ದಸಂಸದ ನಾಯಕರಾಗಿದ್ದ ರಾಮಚಂದ್ರ ಅವರೊಂದಿಗೆ ಚರ್ಚಿಸಿದೆವು. ರಾಮಚಂದ್ರ ಅವರು ಅಂದು ನೀಡಿದ ಧೈರ್ಯವನ್ನು ನನ್ನ ಜೀವನದಲ್ಲೇ ನಾನು ಮರೆಯಲು ಸಾಧ್ಯವಿಲ್ಲ. ಅವರು ನೇರಾ ನನ್ನನ್ನು ಕೆ.ಜಿ.ಎಫ್‌ನ ಎಸ್‌ಪಿ ಅವರ ಕಛೇರಿಗೆ ಕರೆದೊಯ್ದು ಕೂಡಿಸಿದರು. ಆಗ ಅಲ್ಲಿ ಎಸ್ಪಿಯಾಗಿದ್ದವರು ರಾಜಸ್ತಾನದ ರಾಜೇಂದ್ರಪ್ರಸಾದ್ ಗಡೇಗವಾಸ್ಲಿಯ ಎನ್ನುವವರು. ರಾಮಚಂದ್ರ ಅವರಿಗೆ ನನ್ನನ್ನು ಪರಿಚಯಿಸುತ್ತಲೇ ಅವರು ನನ್ನ ನಾಟಕಗಳು, ಕವಿತೆ, ಕಾಲೇಜಿನಲ್ಲಿನ 'ಮಾನವತಾ ವೇದಿಕೆ'ಯ ಚಟುವಟಿಕೆಗಳೆಲ್ಲದರ ಬಗ್ಗೆಯೂ ತುಂಬಾ ಪರಿಚಿತರಂತೆ ಮಾತನಾಡಿದ್ದು ಕಂಡು ಕೊಂಚ ಹೆದರಿದೆ. ರಾಮಚಂದ್ರ ಎಸ್ಪಿಯವರಿಗೆ ಇಡೀ ಘಟನೆಯನ್ನು ವಿವರಿಸಿದ ಮೇಲೆ ಗಡೇಗವಾಸ್ಲಿಯ ಅವರು 'ನೀವು ಡಕಾಯಿತಿ ಮಾಡಿದ್ದೀರಾ?' ಅಂತ ನೇರವಾಗಿ ಕೇಳಿದರು. ನಾನು 'ಇಲ್ಲ' ಎಂದೆ. 'ಹಾಗಿದ್ಮೇಲೆ ಭಯ ಯಾಕೆ? ಯಾರು ಯಾರ ಮೇಲೆ ಬೇಕಾದರೂ ದೂರು ಕೊಡಬಹುದು. ಆದ್ರೆ ಅದರಲ್ಲಿ ಸತ್ಯ ಇದೆಯಾ ಅಂತ ನಾವು ತನಿಖೆ ಮಾಡಿ ನೋಡ್ತೀವಿ. ನೀವು ಧೈರ್ಯವಾಗಿ ಹೋಗಿ' ಅಂದರು.

ಇದಾದ ಎರಡು ತಿಂಗಳಿಗೆ ನಾನು ಮೂಡಿಗೆರೆಯ ನಮ್ಮಣ್ಣನ ಕ್ವಾರ್ಟಸ್‌ನಲ್ಲಿದ್ದೆ. ಮಧ್ಯಾಹ್ನವಿದ್ದಂತೆ ಕಂಡ ವ್ಯಕ್ತಿಯೊಬ್ಬ ಬಂದು ಬಾಗಿಲು ಬಡಿದು 'ಲಕ್ಷ್ಮೀಪತಿ ಕೋಲಾರ ಅಂದ್ರೆ ನೀವೇನಾ? 'ಅಂತ ಕೇಳಿದರು. ಹೆದರುತ್ತಲೇ 'ಹೂಂ' ಅಂದೆ. 'ತಗೊಳ್ಳಿ' ಅಂದ್ರು. ಕನ್ನಡ ಪ್ರಭದಿಂದ ಕವಿತೆ ಪ್ರಕಟವಾಗಿದ್ದಕ್ಕೆ ಬಂದಿದ್ದ ಸಂಭಾವನೆಯ ಎಂ.ಓ ತಂದಿದ್ದ ಪೋಸ್ಟ್‌ಮ್ಯಾನ್ ನಿಟ್ಟುಸಿರುಬಿಟ್ಟೆ. ನಂತರ ತಿಳಿಯಿತು. ನನ್ನ ಮೇಲೆ ಹಾಕಲಾಗಿದ್ದ ಸುಳ್ಳು ಡಕಾಯಿತಿ ದೂರಿನ ಮೇಲೆ ಪೊಲೀಸರು ಕೋರ್ಟಿಗೆ ಬಿ ರಿಪೋರ್ಟ್ ಸಲ್ಲಿಸಿದ್ದರು." ಲಕ್ಷ್ಮೀಪತಿ ಅವರಿಗೆ ಇರುವ ಸಾಮಾಜಿಕ ಕಾಳಜಿಯಿಂದ ಇಲ್ಲ ಸಲ್ಲದ ಆರೋಪಗಳಿಗೆ ಗುರಿಯಾಗಿ ತಮ್ಮ ಜೀವನವನ್ನು ಭೂಗತವಾಗಿ ಬದುಕುವ ಶಿಕ್ಷೆಯಾಗಿ ಅನುಭವಿಸಿದರು. ಈ ಎಲ್ಲಾ ವಿವರಗಳನ್ನು ತಮ್ಮ ಕೃತಿಯಾದ ಕಸಿ ಮಡಗಿದ ಕಣ್ಣು ಪುಸ್ತಕದಲ್ಲಿ ದಾಖಲಿಸಿದ್ದಾರೆ.

## ಬೆಳ್ಳಂಬರಿ ಜೋಡಿದಾರರ ವಿರುದ್ಧ ಹೋರಾಟ

ಬಹುಶಃ ೧೯೮೨–೮೩ರ ಕಥೆಯಿದು. ದಲಿತ ಸಂಘರ್ಷ ಸಮಿತಿ ತನ್ನ ಭೂ ಹೋರಾಟಗಳ ಉತ್ತುಂಗದಲ್ಲಿದ್ದ ಕಾಲವದು. ಬೆಳ್ಳಂಬರಿ ಜೋಡಿದಾರರ ವಿರುದ್ಧದ ಈ ಭೂ ಹೋರಾಟದಲ್ಲಿ ದಲಿತ ಸಂಘರ್ಷ ಸಮಿತಿಯೇ ಪ್ರಧಾನ ಪಾತ್ರ ವಹಿಸಿದ್ದರೂ ಸಮಾನ ತತ್ವ ಬದ್ಧತೆಯ ಕಾರಣಕ್ಕಾಗಿಯೂ, ತನ್ನ ಹಿಂದಿನ ಹೋರಾಟಗಳ ಚಾರಿತ್ರಿಕವಲಯವಾಗಿದ್ದರಿಂದಲೂ ಪಿ.ವೆಂಕಟಗಿರಿಯಪ್ಪನವರು ಈ ಹೋರಾಟದಲ್ಲಿ ಹಿರಿಯ ನಾಯಕರಾಗಿ ತೊಡಗಿಸಿಕೊಂಡಿದ್ದರು. ಹಾಗಾಗಿ ನಮ್ಮ ಹೋರಾಟದ ಉಮ್ಮೇದು ಇಮ್ಮಡಿಸಿತ್ತು. ಪಿ.ವೆಂಕಟಗಿರಿಯಪ್ಪನವರೇ ನಾಯಕತ್ವ

ವಹಿಸಿದ್ದರಿಂದಾಗಿ (ಕುಡುವನಹಳ್ಳಿ ಗ್ರಾಮ ಹಾಲಿ ಶಾಸಕರಾದ ಕೆ.ಎಂ.ಶ್ರೀನಿವಾಸಗೌಡರ ಊರು) ಚೆನ್ನೇಗೌಡ, ತೊಗಟವೀರರ ನಾರೆಪ್ಪ, ನುಕ್ಕನಹಳ್ಳಿಯ ಬಚ್ಚರೆಡ್ಡಿ, ಬೆಳ್ಳಂಬರಿಯ ಸೊಣ್ಣಪ್ಪ, ವೆಂಕಟೇಶಪ್ಪ ಹಾಗೂ ಸುತ್ತ ಮುತ್ತಲ ಹತ್ತಾರು ಹಳ್ಳಿಗಳ ಒಕ್ಕಲಿಗ ಜನಾಂಗದ ಪ್ರಮುಖರೂ ಪ್ರತ್ಯಕ್ಷ-ಪರೋಕ್ಷವಾಗಿ ಭಾಗವಹಿಸಿದ್ದರು. ಐತಿಹಾಸಿಕ ಜೋಡಿ ಇನಾಂ ರದ್ದಿಯಾತಿ ಹೋರಾಟದಲ್ಲಿ ೬೦೦ ಗ್ರಾಮಗಳ ಸಾವಿರಾರು ರೈತರು ಭೂಮಿಯ ಒಡೆಯರಾಗಿದ್ದರು ಮತ್ತು ಅವರಲ್ಲಿ ಬಹುತೇಕ ಮಂದಿ ರೈತರು ಒಕ್ಕಲಿಗರೇ ಆಗಿದ್ದರು. ಬೆಳ್ಳಂಬರಿಯೂ ಅಂತಹದೊಂದು ಜೋಡಿ ಗ್ರಾಮವೇ ಆಗಿತ್ತು. ವಿಚಿತ್ರವೆಂದರೆ ಬೆಳ್ಳಂಬರಿಯ ಜೋಡಿದಾರರು ಉಳಿದೆಡೆಗಳಲ್ಲಿಯಂತೆ ಆಂಗ್ಲರ್‌ಗಳೋ, ಇನ್ನಿತರ ಬ್ರಾಹ್ಮಣರೋ ಆಗಿರದೆ ಹಿಂದುಳಿದ ವರ್ಗದ ಬಲಿಷ್ಠ ಕೋಮಿನವರಾಗಿದ್ದುದು! ಒಕ್ಕಲಿಗರಲ್ಲೂ ಜೋಡಿದಾರರು ಇದ್ದರೋ ಹೇಗೆ ಎಂಬುದು ನನಗೆ ಇನ್ನೂ ಖಚಿತವಾಗಿಲ್ಲದ ವಿಷಯ. ಆ ಕಾಲದಲ್ಲಿ ಕೆಲವು ಜೋಡಿದಾರರು ಒಕ್ಕಲಿಗರಾಗಿದ್ದಿರಬಹುದೆಂಬುದು ಕೇವಲ ನನ್ನ ಊಹೆ. ಅದೇನೇ ಆದರೂ ಸ್ವಾತಂತ್ರ್ಯೋತ್ತರದ ಭೂ ಹೋರಾಟಗಳಲ್ಲಿ ಭೂಮಿಯ ಒಡೆಯರಾಗಿ, ರಾಜಕೀಯ ಶಕ್ತಿಯಾಗಿ ಒಕ್ಕಲಿಗ ಜನಾಂಗ ರೂಪುಗೊಂಡಿದ್ದಂತೂ ಸತ್ಯ. ಸಿ. ಭೈರೇಗೌಡರು ರಾಜಕೀಯ ನಾಯಕರಾಗಿ ರೂಪುಗೊಳ್ಳಲು ಸಾಧ್ಯವಾದದ್ದು ಕೂಡ, ಅವರ ತಂದೆಯವರು ಖ್ಯಾತ ನಟಿ ವೈಜಯಂತಿ ಮಾಲಾ ಅವರ ತಾಯಿಗೆ ಮೈಸೂರು ಮಹಾರಾಜರು ಕಾಣಿಕೆಯಾಗಿ ನೀಡಿದ ನೂರಾರು ಎಕರೆ ಭೂಮಿಯನ್ನು ಭೂಕಾಯ್ದೆಗಳ ಮೂಲಕ ದಕ್ಕಿಸಿಕೊಂಡಿದ್ದರಿಂದಲೇ. ಒಟ್ಟಾರೆಯಾಗಿ ಭೂಮಿಯ ಮರು ಹಂಚಿಕೆಯಿಂದಾದ ಆರ್ಥಿಕ ಸಬಲತೆ ಹಾಗೂ ಸಂಖ್ಯಾಬಲದಿಂದಾಗಿ ರಾಜಕಾರಣವೆಂದರೆ ಒಕ್ಕಲಿಗರ ಮತ್ತೊಂದು ವೃತ್ತಿಯೆಂಬಂತಾಗಿ ಹೋಯ್ತು.

ದಲಿತ ಸಂಘರ್ಷ ಸಮಿತಿಯು ಭೂ ಹೋರಾಟಗಳನ್ನು, ಭೂ ಗ್ರಹಣ ಚಳುವಳಿಗಳನ್ನು ಪ್ರಾರಂಭಿಸಿದ ನಂತರ ಭೂ ಸಂಪತ್ತಿನ ಒಡೆತನದಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳಾದವೇ ಹೊರತು ರಾಜಕೀಯವಾಗಿ ನಿರೀಕ್ಷಿತ ಮಟ್ಟದ ಬದಲಾವಣೆಗಳೇನೂ ಸಂಭವಿಸಲಿಲ್ಲ.

ಈ ಹಿನ್ನೆಲೆಯಲ್ಲಿ ಬೆಳ್ಳಂಬರಿ ಜೋಡಿದಾರರು ಬಲಿಜ ಕೋಮಿನವರಾಗಿದ್ದುದು ಕೂಡ ಆ ಭಾಗದ ಒಕ್ಕಲಿಗರು ಹೋರಾಟದಲ್ಲಿ ತೊಡಗಿಸಿಕೊಳ್ಳಲು ಒಂದು ಪ್ರಧಾನ ಒಳಪ್ರೇರಣೆಯಾಗಿ ಪರಿಣಮಿಸಿರಬಹುದು. ಯಾಕೆಂದರೆ ದಲಿತ ಚಳವಳಿಯ ಇನ್ಯಾವ ಭೂ ಹೋರಾಟಗಳಲ್ಲೂ ಇಷ್ಟೊಂದು ಪ್ರಮಾಣದಲ್ಲಿ ಒಕ್ಕಲಿಗರು ಸ್ವಯಂಪ್ರೇರಣೆಯಿಂದ ಭಾಗವಹಿಸಿದ ಅಪರೂಪದ ಉದಾಹರಣೆಗಳು ಕೂಡ ಇಲ್ಲವೇ ಇಲ್ಲ. ಅಷ್ಟರ ನಡುವೆಯೂ ಒಕ್ಕಲಿಗರೊಂದಿಗೆ ಆ ಭಾಗದ ಎಲ್ಲಾ ಜಾತಿಯ ಬಡ ರೈತರಿಗೂ ಭೂಮಿಯ ಮೂಲಕದ ಸ್ವಾವಲಂಬನೆಯ ಕನಿಷ್ಟ ಬದುಕೊಂದು ಸಾಧ್ಯವಾಗುತ್ತದೆಂಬ ಮಾನವೀಯ ಧೋರಣೆಯ ಕಾರಣದಿಂದಾಗಿ ನಾವು ಹೋರಾಟಕ್ಕಿಳಿದಿದ್ದೆವು. ಅಂತಹ ರೈತರ ಪೈಕಿ ಹಲವಾರು ದಲಿತ ಕುಟುಂಬಗಳೂ ಇದ್ದವೆನ್ನಿ.

ನಾವು ಭೂ ಹೋರಾಟ ಪ್ರಾರಂಭಿಸಿದ ಕಾಲದಲ್ಲಿ ಬೆಳ್ಳಂಬರಿಯ ಭೂಮಾಲೀಕರಾಗಿದ್ದವರು ಸಿ.ಎಚ್.ವೆಂಕಟರಮಣಪ್ಪ ಮತ್ತು ಅವರ ಇಬ್ಬರು ತಮ್ಮಂದಿರು. ಜೋಡಿ ಇನಾಂ ಹೋರಾಟದ ಸಂದರ್ಭದಲ್ಲಿ ಅವರ ತಂದೆ ಹನುಮಂತಪ್ಪನವರಿದ್ದರು.

ಹನುಮಂತಪ್ಪನವರು ಆ ಕಾಲಕ್ಕೇ ಕೆ.ಜಿ.ಎಫ್ ಚಿನ್ನದ ಗಣಿಗಳ ಕಂಟ್ರಾಕ್ಟರ್ ಆಗಿದ್ದವರು. ಹಾಗಾಗಿ ಕೊಂಚ ಶ್ರೀಮಂತರೂ ಗಣ್ಯರೂ ಆಗಿದ್ದರು. ದಿವಾನ್ ಪೂರ್ಣಯ್ಯನವರೊಮ್ಮೆ ತಿರುಪತಿಯಿಂದ ವಾಪಸ್ಸಾಗುವಾಗ ಅವರನ್ನು ಸ್ವಾಗತಿಸಿ ಆತಿಥ್ಯ ನೀಡಿದರೆಂಬ ಕಾರಣಕ್ಕೆ ಪೂರ್ಣಯ್ಯನವರು ಹನುಮಂತಯ್ಯನವರಿಗೆ 'ಏನು ಬೇಕೋ ಕೇಳಿಕೋ' ಎಂದರಂತೆ. ಹನುಮಂತಯ್ಯನವರು ದೊಡ್ಡದಾದ ಮುದುವಾಡಿ ಕೆರೆಯನ್ನು ಮತ್ತು ಅದರ ಅಚ್ಚುಕಟ್ಟಲ್ಲಿ ಜಮೀನನ್ನು ಕೇಳಿದರು. ಕೇಳುವಾಗ ಪೂರ್ಣಯ್ಯನವರಿಗೆ ತಪ್ಪು ಮಾಹಿತಿ ನೀಡಿ ಕೆರೆಯೆಂದು ಹೇಳದೆ ಕುಂಟೆಯೆಂಬ ಪದ ಬಳಸಿದ್ದರು. ನಂತರ ವಿಷಯ ತಿಳಿದ ಪೂರ್ಣಯ್ಯನವರು ಹನುಮಂತಯ್ಯನವರ ದುರ್ಬುದ್ಧಿ ಹಾಗೂ ದುರಾಸೆಯಿಂದ ಸಿಟ್ಟಾಗಿ, ಶ್ರೀಮಂತರಾಗಿದ್ದ ಹನುಮಂತಯ್ಯನವರಿಗೆ ಒಂದು ರೂಪಾಯಿಯ ದಂಡ ವಿಧಿಸುವ್ವದರ ಮೂಲಕ ಅವರಿಗೆ ಮುಜುಗರದ ಶಿಕ್ಷೆ ವಿಧಿಸಿದ್ದರಂತೆ! ಆದರೂ ಅನಂತರ ಹನುಮಂತಯ್ಯ ಹೇಗೋ ಸಾಕು ಬೇಕಾದಷ್ಟು ಜಮೀನನ್ನು ಪಡೆದುಕೊಂಡರು. ಹನುಮಂತಯ್ಯನವರ ಮಕ್ಕಳಲ್ಲಿ ಹಿರಿಯರಾದ ಸಿ.ಎಚ್.ವೆಂಕಟರಮಣಪ್ಪನವರು ಸತತವಾಗಿ ೨೫ ವರ್ಷಗಳ ಕಾಲ ಕೋಲಾರದ ಪುರಸಭೆಯ ಅಧ್ಯಕ್ಷರಾಗಿದ್ದವರು. ಅವರ ತಮ್ಮ ನಾರಾಯಣಸ್ವಾಮಿಯವರಂತೂ ತಮ್ಮ ದಬ್ಬಾಳಿಕೆ, ದೌರ್ಜನ್ಯಗಳಿಗೆ ಕುಖ್ಯಾತರಾಗಿದ್ದವರು. ನಾರಾಯಣಸ್ವಾಮಿಯವರು ಬೆಳ್ಳಂಬರಿಯಲ್ಲೇ ನಂದನವನದಂತಹ ಅತಿಥಿ ಗೃಹವೊಂದನ್ನು ಕಟ್ಟಿಕೊಂಡು ಅಲ್ಲಿ ಅಬಲೆಯರಾದ ಹಳ್ಳಿಯ ಹುಡುಗಿಯರನ್ನು ಬಲವಂತವಾಗಿ ಪೈಲ್ವಾನರ ಮೂಲಕ ಹೊರೆಸಿ ತಂದಿಟ್ಟುಕೊಂಡು ಅತ್ಯಾಚಾರವೆಂಬ ರಾಸಕ್ರೀಡೆಯಾಡುತ್ತಿದ್ದರೆಂದು ಬೆಳ್ಳಂಬರಿಯ ರೈತರೇ ನನಗೆ ವಿವರಿಸಿದ್ದರು. ನಾನು ಆ ಪಾಳುಬಿದ್ದ ನಂದನವನವನ್ನು ನೋಡಿದ್ದೇನೆ. ನಾರಾಯಣಸ್ವಾಮಿಯ ನಿರಂಕುಶ ಆಡಳಿತಕ್ಕೆ ಅಡ್ಡಬಂದವರನ್ನು ಪ್ರಾಣಾಂತಿಕವಾಗಿ ಚಿತ್ರಹಿಂಸೆಗೊಳಪಡಿಸುತ್ತಿದ್ದರಂತೆ. ಹಾಗೆ ದೈಹಿಕ ಹಿಂಸೆಗೆ ಒಳಗಾಗಿದ್ದವರು ತಮ್ಮ ಅಂಗ ಊನತೆಗಳನ್ನು, ದೌರ್ಜನ್ಯದ ಕುರುಹುಗಳನ್ನು ನಮಗೆ ತೋರಿಸಿ ಅತ್ತಿದ್ದರು. ಬೆಳ್ಳಂಬರಿಯ ಭೂಮಾಲೀಕರ ದಮನಕಾರೀ ಕಥೆಗಳು ನನಗಂತೂ ತೆಲಂಗಾಣದ ರೈತರ ಉಸಿರುಗಟ್ಟಿಸುವ ಬದುಕುಗಳನ್ನೇ ನೆನಪಿಸಿದ್ದವು.

ಇಂತಹ ಕಥೆಗಳನ್ನು ಕೇಳಿದ ಮೇಲಂತೂ ನಮ್ಮ ಹೋರಾಟದ ನಿಲುವು ಇನ್ನಷ್ಟು ಗಟ್ಟಿಯಾಗುತ್ತಿತ್ತು. ನಾನೂ ಮತ್ತು ಕೆ.ಮೂರ್ತಿ ಬೆಳ್ಳಂಬರಿಯ ರೈತ ಸೊಣ್ಣಪ್ಪನವರ ಮನೆಯಲ್ಲೇ ಹಲವಾರು ರಾತ್ರಿಗಳು ಉಳಿದು ಮಾಹಿತಿ ಸಂಗ್ರಹಿಸುವ, ವರದಿ ಮಾಡುವ, ರೈತರಲ್ಲಿ ನೈತಿಕ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದೆವು. ಕೊನೆಗೆ ಬೆಳ್ಳಂಬರಿಯಿಂದ ಕೋಲಾರಕ್ಕೆ ರೈತರ ಜಾಥಾ ಹೊರಡಿಸಿ ಭೂಮಿಯ ಮರು ಹಂಚಿಕೆಗೆ ಒತ್ತಾಯಿಸಿ ಹೋರಾಟ ರೂಪಿಸಿದ್ದೆವು. ಎಲ್ಲಾ ಮಾನವೀಯ ಸಂಬಂಧಗಳನ್ನು ಗಾಳಿಗೆ ತೂರಿ ದಶಕಗಳ ಕಾಲ ತಮ್ಮ ದರ್ಪ ದೌರ್ಜನ್ಯಗಳಿಂದ ಅಟ್ಟಹಾಸಗೈದಿದ್ದ ಬೆಳ್ಳಂಬರಿ ಭೂಮಾಲೀಕರ ಕೋಟೆಯಂತಹ ಮನೆಯ ಮುಂದೆ ನಿಂತು ನಾನು ಮೂರ್ತಿ ಮತ್ತು ದಲಿತ ಚಳವಳಿಯ ಗೆಳೆಯರು ಗಂಟಲು ಹರಿಯುವ ಹಾಗೆ ಘೋಷಣೆಗಳನ್ನು ಕೂಗಿದ್ದು ನನಗೆ ನಿನ್ನೆ ಮೊನ್ನೆಯ ನೆನಪಿನ ಹಾಗಿದೆ. ಕೊನೆಗೂ ಭೂಮಾಲೀಕರು ಭೂಪರಿಮಿತಿ ಕಾಯ್ದೆಯನ್ನೇ ಗುರಾಣಿಯಾಗಿ ಬಳಸಿ ಕೂಸು-ಕುನ್ನಿಯ ಲೆಕ್ಕದಲ್ಲೂ ಗರಿಷ್ಠ ಭೂಮಿಯನ್ನು ತಮ್ಮಲ್ಲೇ ಉಳಿಸಿಕೊಂಡು ಹೆಚ್ಚು ಫಲವಂತಿಕೆಯಲ್ಲದ ಜಮೀನುಗಳನ್ನು ಮಾತ್ರವೇ ರೈತರಿಗೆ ಬಿಟ್ಟುಕೊಟ್ಟರು. ಕಾನೂನಿನ ಕಳ್ಳಗಿಂಡಿಗಳನ್ನು ಮುಚ್ಚದೆ ಎಷ್ಟು ಭೂ ಹೋರಾಟಗಳನ್ನು

ಮಾಡಿದರೂ ಸಹ ನಿಜವಾದ ಅಧಿಕಾರ ಕಟ್ಟಕಡೆಯ ಮನುಷ್ಯನಿಗೆ ತಲುಪುವುದಿಲ್ಲ. ಪ್ರಜಾಪ್ರಭುತ್ವಕ್ಕೆ ಜೀವ ಬರುವುದಿಲ್ಲ". ಒಟ್ಟಾರೆ ಹೋರಾಟಗಳನ್ನು ಗಮನಿಸಿದಾಗ 'ಕೋಲಾರ ಜಿಲ್ಲೆ ದಲಿತ ಚಳುವಳಿಯ ಗಂಗೋತ್ರಿ' ಎಂದು ಚಂದ್ರಶೇಖರ್ ನಂಗಲಿ ಅವರು ಸಂದರ್ಶನ ಸಂದರ್ಭದಲ್ಲಿ ಹೇಳಿದ ಮಾತು ಅರ್ಥದಿಂದ ಕೂಡಿದೆ ಎಂದು ಭಾವಿಸಬಹುದು.

## ಪ್ರೇಮ ಪ್ರಕರಣ

ಪ್ರೇಮ ವಿವಾಹಕ್ಕೆ ಬೆಂಬಲ ಕೊಟ್ಟು ಭೂಗತವಾಗಿ ಕಳೆದ ದಿನಗಳು ಮರೆಯುವಂತಿಲ್ಲ. "ಭೂಗತ ಬದುಕಲ್ಲಿ ಬೆಂಬತ್ತಿದ ಬೇಹುಗಾರಿಕೆ"! ಲೇಖನ ಈ ಬಗೆಗೆ ಬೆಳಕು ಚೆಲ್ಲುತ್ತದೆ. ಕ್ರಾಂತಿಯ ಮನೋಭಾವನೆ ಹೊಂದಿದ್ದ ಲಕ್ಷ್ಮೀಪತಿಯವರು ಪ್ರೇಮಿಗಳಿಗೆ ಸಹಾಯ ಮಾಡಿದಕ್ಕೆ 'ಕಿಡ್ನ್ಯಾಪ್, ರೇಪ್ ಅಂಡ್ ಮರ್ಡರ್' ಕೇಸು ದಾಖಲಾಗಿತ್ತು. ಸಲಹೆ ನೀಡಿದ ಪೊಲೀಸ್ ಅಧಿಕಾರಿಯೇ ಮುಂದೆ ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು! ನುಂಗಲಾರದ ತುತ್ತಾಗಿ ಪರಿಣಮಿಸಿತು. ಪೊಲೀಸ್ ಬಂಧನ ಭೀತಿಯಿಂದ ತಪ್ಪಿಸಿಕೊಂಡು ತಿರುಗಾಡಿದ್ದು ಲಕ್ಷ್ಮೀಪತಿಯವರು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಕೊನೆಗೆ ಹುಡುಗ ಹುಡಿಗಿಯನ್ನೂ ಅವರ ಮನೆಯವರಿಗೆ ಭೇಟಿ ಮಾಡಿಸಿ ಸಮಸ್ಯೆ ಬಗೆಹರಿಸಿ ಕೊಂಡರೂ 'ಸಚ್ಚಾರಿತ್ರ್ಯ' ಹೊಂದಿದ್ದ ಲಕ್ಷ್ಮೀಪತಿಯವರಿಗೆ ಯಾವ ರಾಜಕೀಯ ಪಕ್ಷವೂ ಚುನಾವಣೆಯಲ್ಲಿ ಟಿಕೇಟು ನೀಡಲು ಮುಂದಾಗದೆ ಹೋದದ್ದು, ಹೋರಾಟಗಾರರಾಗಿ ಬದುಕು ಕಟ್ಟಿಕೊಳ್ಳುವುದು ಎಷ್ಟು ಕಷ್ಟದ ಕೆಲಸ ಎಂಬಂತಹ ನೈಜ್ಯ ಸತ್ಯಗಳನ್ನು ಇದರ ಮೂಲಕ ಕಾಣಬಹುದಾಗಿದೆ.

## ನಾಗಸಂದ್ರ ಜೀತಗಾರರ ಪರ ಹೋರಾಟ

"ಮೌಲ್ಯಾಧಾರಿತ ಮುಖ್ಯಮಂತ್ರಿಯೆಂದು ಮಾಧ್ಯಮಗಳ ಮೂಲಕ ತನ್ನ ಕಳ್ಳುಬಳ್ಳಿಗಳಿಂದ ಹುಸಿ ಹೊಗಳಿಕೆಯ ಹೊನ್ನ ಶೂಲಕ್ಕೇರಿಸಿಕೊಂಡಿದ್ದ ರಾಮಕೃಷ್ಣ ಹೆಗಡೆಯವರ ನಾಟೂಕು ದರ್ಬಾರಿನ ಕಾಲವದು. ಹೆಗಡೆಯವರ ಹುಸಿ ಭರವಸೆಗಳ ಮುಖವು ಬಯಲಾಯಿತು. ದಲಿತ ಜೀತಗಾರರ ಪ್ರತಿ ಹೊತ್ತಿನ ಪ್ರತಿ ತುತ್ತಿನ ಭರವಸೆಯೂ ಅನಿಶ್ಚಿತವಾಗಿದ್ದಾಗ ಹೆಗಡೆಯವರು ಜೀತ ವಿಮುಕ್ತಿಯ ವಿಚಾರವನ್ನು ವರ್ಷಗಳ ಕಾಲ ಎಳೆದಾಡಿದರು! "ನೈತಿಕತೆ" ಎನ್ನುವುದೇ ರಾಜಕಾರಣಿ ಎಂಬ ಪದಕ್ಕೆ ವಿರುದ್ಧ ಪದ ಎಂಬಂತಾಗಿರುವ ಕಾಲದಲ್ಲಿ ಹೆಚ್ಚು ಸಂಬಂಧ ದಲಿತ ಸಂಘರ್ಷ ಸಮಿತಿ ನಾಗಸಂದ್ರ ಜೀತಗಾರರ ಹೋರಾಟವನ್ನು ಮುಂದುವರಿಸಿಯೇ ಇತ್ತು. ಅದರ ಅಂಗವಾಗಿ ವಿಧಾನ ಸಭೆಯ ಗ್ಯಾಲರಿಯಿಂದ ನಾಗಸಂದ್ರ ದಲಿತ ಜೀತಗಾರರಿಗೆ ಭೂಮಿ ಹಂಚುವಂತೆಯೂ ಹಾಗೂ ಪುನರ್ವಸತಿ ಕಲ್ಪಿಸುವಂತೆಯೂ ಆಗ್ರಹಿಸಿ ಕರಪತ್ರ ಎಸೆದು ಸರ್ಕಾರದ ವಿರುದ್ಧ ಘೋಷಣೆ ಕೂಗುವುದೆಂದು ನಿರ್ಧರಿಸಿ, ಲಕ್ಷ್ಮೀಪತಿ ಕೋಲಾರ, ಪಿಚ್ಚಳ್ಳಿ ಶ್ರೀನಿವಾಸ್, ರಾಮ ಮೂರ್ತಿ ಮೂವರು ಸೇರಿದಂತೆ ತಮ್ಮ ಸ್ನೇಹಿತರ ಜೊತೆಗೂಡಿ, ಗ್ಯಾಲರಿಗೆ ಮುತ್ತಿಗೆ ಹಾಕಿ ಘೋಷಣೆಗಳನ್ನು ಕೂಗಿದ್ದರು ಆ ಸಂದರ್ಭದಲ್ಲಿ ಕಮ್ಯಾಂಡೋಗಳಿಂದ ಥಳಿತಕ್ಕೆ ಒಳಗಾಗಿ ವಿಧಾನ ಸೌಧ ಪೊಲೀಸ್ ಠಾಣೆ ಸೇರಿದ್ದರು ಅಂದು ಬಿದ್ದ ಹೊಡೆತದಿಂದ ಇಂದಿಗೂ ಚೇತರಿಸಿಕೊಳ್ಳಲಾಗಿಲ್ಲ. ಲಕ್ಷ್ಮೀಪತಿಯವರಿಗೆ ಆ ನೋವು ಇನ್ನು ಕಾಡುತ್ತಿದೆ. ಕಸಿ ಮಡಗಿದ ಕಣ್ಣು ಕೃತಿಯಲ್ಲಿ "ಈಗಲು ಆ ನೋವಿನ ಗಂಟು ಅಲ್ಲೇ ಹಾಗೇ....!' ಲೇಖನದಲ್ಲಿ ರೋಚಕ ಕ್ಷಣಗಳನ್ನು ವಿವರಿಸಿದ್ದಾರೆ.

## ಅಹಿಂದ ಸಂಘಟನೆಯ ನಂಟು

ಆಗ ಕೋಲಾರದಲ್ಲಿ 'ಅಹಿಂದ' ತಲೆ ಎತ್ತಿತ್ತು'. ಅಹಿಂದಕ್ಕೂ ತುಂಬಾ ಹಿಂದೆಯೇ ಮಂಡಲ್ ವರದಿಯ ಅನುಷ್ಠಾನವನ್ನು ಒತ್ತಾಯಿಸಿ 'ಹಿಂದುಳಿದ ವರ್ಗಗಳ ಸಮರಶೀಲ ಒಕ್ಕೂಟ' ಎಂಬ ಸಂಘಟನೆಯನ್ನು ಕಟ್ಟಿ ತಾಲ್ಲೂಕು, ಹೋಬಳಿ, ಹಳ್ಳಿಗಳನ್ನೆಲ್ಲಾ ಸುತ್ತಿ ಸಭೆ ನಡೆಸಿದ್ದರು. ಹ.ಸೋಮಶೇಖರ್ ಈ ಸಂಘಟನೆಯ ತಾತ್ವಿಕ ವಿನ್ಯಾಸದ ರೂವಾರಿಯಾಗಿದ್ದರು. ಇವರ ಜೊತೆಗೆ ಲಕ್ಷ್ಮೀಪತಿ ಕೋಲಾರ, ಸಿ.ಎಸ್.ದ್ವಾರಕಾನಾಥ್, ಸೋಮು. ಕೀಲುಕೋಟೆ ನಾರಾಯಣಸ್ವಾಮಿ, ಎಂ.ಜಿ.ಪ್ರಭಾಕರ್ ಮತ್ತಿತರರು ಒಕ್ಕೂಟದಲ್ಲಿದ್ದರು, ಇದು ಹಿಂದುಳಿದ ವರ್ಗಗಳಿಗಷ್ಟೆ ಸೀಮಿತವಾಗಿತ್ತು.

ಅದಾಗಲೇ ಲಕ್ಷ್ಮೀಪತಿಯವರು ದಲಿತ ಸಂಘರ್ಷ ಸಮಿತಿಯಲ್ಲಿ ಗುರುತಿಸಿಕೊಂಡಿದ್ದರ ಕಾರಣ, ಇವರು ಹಿಂದುಳಿದ ವರ್ಗದವರಾದರು ಸಹ ಅನುಮಾನದಿಂದ ನೋಡುವ ಪರಿಸ್ಥಿತಿ ಇತ್ತು. ಇಂತಹ ಸ್ಥಿತಿಯಲ್ಲಿ ದಲಿತರ ಮತ್ತು ಮುಸ್ಲಿಮರೊಂದಿಗೆ ಎಲ್ಲಾ ಹಿಂದುಳಿದ ವರ್ಗಗಳನ್ನು ಒಂದೇ ವೇದಿಕೆಗೆ ಕರೆತರುವ ಪ್ರಯತ್ನವಂತೂ 'ಅಹಿಂದ'ದ ಮೂಲಕ ಪ್ರಾರಂಭವಾಗಿತ್ತು.

'ಅಹಿಂದ ಸಂಘಟನೆ' ಬಗ್ಗೆ ಸಮಾವೇಶ ಮಾಡಲು ಮುಂದಾದ ಸಂದರ್ಭದಲ್ಲಿ ದಲಿತರ ಗುಂಪೊಂದು ಮೇಲ್ಜಾತಿಗಳೊಂದಿಗೆ ಕೈ ಜೋಡಿಸಿ ಅಹಿಂದ ಸಂಘಟನೆಯನ್ನು ಮಣ್ಣು ಮುಕ್ಕಿಸುವ ಹುನ್ನಾರಗಳು ನಡೆದಿದ್ದವು. ಇವರ ಮಧ್ಯವೂ ಅಹಿಂದ ಸಂಘಟನೆಗೆ ಉತ್ತೇಜನಕಾರಿ ಪ್ರತಿಕ್ರಿಯೆಗಳು ಬಂದವು; ಮುಸ್ಲಿಂ ಬಾಂಧವರಿಂದಲೂ ಸಹ ಬೆಂಬಲ ದೊರೆಯಿತು. ಆಗಸ್ಟ್ 20 ದೇವರಾಜ ಅರಸುರವರ ಜನ್ಮದಿನದಂದು ಅಹಿಂದ ಸಮಾವೇಶಕ್ಕೆ ಜಿಲ್ಲೆಯ ವಿವಿಧ ಹಿಂದುಳಿದ ಜಾತಿ ಸಂಘಟನೆಗಳಿಂದ ಶುಭ ಹಾರೈಸಿ ಪತ್ರಿಕಾ ಹೇಳಿಕೆಗಳು ಸಹ ಬಂದಿದ್ದವು.

ಒಂದೆಡೆ ಊರೂರುಗಳನ್ನು ಸುತ್ತಿ ಸಂಘಟಿಸುತ್ತಿದ್ದಾರೆ. ಮತ್ತೊಂದು ಕಡೆ ಸಮಾವೇಶವನ್ನು ನಿಷ್ಫಲಗೊಳಿಸಲು ಪಿತೂರಿಗಳು ಪ್ರಾರಂಭವಾದವು. ಈ ಮಧ್ಯೆ ದಲಿತ ಮತ್ತು ಮುಸ್ಲಿಂಮರ ನಡುವೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯನ್ನು ಭಗ್ನಗೊಳಿಸಲಾಗಿತ್ತು. ಈ ವಿಷಯ ಜಿಲ್ಲೆಯಾದ್ಯಂತ ಸಂಚಲನವನ್ನು ಮೂಡಿಸಿ ಅಹಿಂದ ಸಂಘಟನೆ ಕಡೆಗಿದ್ದ ಗಮನವನ್ನು ಬೇರೆಡೆ ಸೆಳೆಯುವ ಕುತಂತ್ರಗಳನ್ನು ಮಾಡಿದಾಗ. ಅಲ್ಲಿಯವರೆಗೂ ಮುಸ್ಲಿಂಬಾಂಧವರು ನಂಬಿಕೆಯಿಂದ ನೋಡುತ್ತಿದ್ದ ಅಹಿಂದವನ್ನು ದೂರ ಮಾಡುವಂತೆ ಆಯಿತ್ತು. 'ಅ-ಹಿಂ-ದ' ಸಮುದಾಯಗಳ ನಡುವಿನ ಜಾತಿ/ಮತ ದ್ವೇಷದ ಹುಣ್ಣು ಮತ್ತೊಮ್ಮೆ ಹಸಿಯಾಗಿ ಕೆರಳಿಸಿತ್ತು. ಇದರಲ್ಲಿ ಪೊಲೀಸಿನವರ ಕೈವಾಡವಿದ್ದದು ಮರೆಯುವಂತಿಲ್ಲ.

ಇಷ್ಟೆಲ್ಲಾ ಬೆಳವಣಿಗೆಗಳ ನಡುವೆಯು ನಂದಿ ಗ್ರಾಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಅಹಿಂದ ಸಂಘಟನೆಯ ಕಾರ್ಯಕರ್ತರ ಮೇಲೆ 300 ಜನರ ಬಲಿಷ್ಠ ಜಾತಿಯವರು ಹಲ್ಲೆ ನಡೆಸಿ ಜಾತಿ ಮತದ ಭಯೋತ್ಪಾದನೆಯನ್ನು ಹರಡಿದರು. ಈ ಘಟನೆಯು ಅಹಿಂದ ಸಂಘಟನೆಯಿಂದ ಜೀರ್ಣಿಸಿಕೊಳ್ಳಲಾಗಲಿಲ್ಲ. ಅಲ್ಲಿ ಮತ್ತೆ ಹತಾಶ ಭಾವನೆ ಮೂಡಿಸಿತ್ತು. ಇಂತಹ ಸಂದರ್ಭದಲ್ಲೂ ಎದೆಗುಂದದೆ ಲಕ್ಷ್ಮೀಪತಿಯವರು ಸಂಘಟನಾಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಅಂಹಿದ ಸಂಘಟನೆಯ ಮೂಲಕ ಗುರುತಿಸಿಕೊಂಡವರು ರಾಜ್ಯದ ಚುಕ್ಕಾಣಿಯನ್ನು ಹಿಡಿದಿರುವುದು ಈ ಎಲ್ಲಾ ಹೋರಾಟದ ಫಲವಾಗಿಯೇ ಎಂಬುದನ್ನು ಮನಗಾಣಬಹುದಾಗಿದೆ.

## ಅಡಿ ಟಿಪ್ಪಣಿ

೧ 'ಕಸಿ ಮಡಗಿದ ಕಣ್ಣು', ಪುಟ ೪೮,ಲಕ್ಷ್ಮೀಪತಿ ಕೋಲಾರ.

೨ 'ಕಸಿ ಮಡಗಿದ ಕಣ್ಣು', ಪುಟ ೭೫

೩ ಅದೇ ಪುಟ ೭೫

೪ ಅದೇ ಪುಟ ೭೬

೫ ಅದೇ ಪುಟ–೭೮

೬ಅದೇ ಪುಟ–೪೮

೭ಅದೇ ಪುಟ– ೧೩೧–೧೩೨

೮ ಅದೇ ಪುಟ– ೧೩೫

೯ 'ಕಾಲುದಾರಿ' ಪುಟ–೪ ಮತ್ತು ೫, ಲಕ್ಷ್ಮೀಪತಿ ಕೋಲಾರ.

೧೦'ಕಸಿ ಮಡಗಿದ ಕಣ್ಣು', ಪುಟ–೧೦೬–೧೦೭

೧೧ ಅದೇ ಪುಟ ೬೬ ರಿಂದ ೬೭

೧೨ ಅದೇ ಪುಟ ೧೦೭

೧೩ ಅದೇ ಪುಟ–೧೧೦

೧೪ (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು. ಸಂಪುಟ–೧)

೧೫ ಕಸಿ ಮಡಗಿದ ಕಣ್ಣು ಪುಟ ಮುನ್ನುಡಿ

೧೬ ಅದೇ ಪುಟ ೫೭

೧೭ ಅದೇ ಪುಟ ೫೮

೧೮ ಅದೇ ಪುಟ ೫೯

೧೯(ಡಿ.ಆರ್.ನಾಗರಾಜ್ ಅವರ 'ದಿ ಫ್ಲೇಮಿಂಗ್ ಫೀಟ್' ಕೃತಿಯ ಅನುವಾದ 'ಉರಿಚಮ್ಮಾಳಿಗೆ' ದಲಿತ ಚಳವಳಿಯ ಅಧ್ಯಾಯ ಅನು:ಎಂ.ಎಸ್.ಆಶಾದೇವಿ. ಪುಟ–೪೫

೨೦ ಕಸಿ ಮಡಗಿದ ಕಣ್ಣು ಪುಟ–೬೦

೨೧ಅದೇ ಪುಟ –೧೦೪–೧೦೫

೨೨ ಅದೇ ಪುಟ –೧೧೨

* ಪ್ರಜಾವಾಣಿ ಪತ್ರಿಕೆ ಸುದ್ಧಿ ಆಧರಿಸಿ

# ಅಧ್ಯಾಯ:೦೩

## ಅಭಿವ್ಯಕ್ತಿಯಲ್ಲಿನ ಸಂಸ್ಕೃತಿ ನಿಷ್ಠ ನೆಲೆಗಳ ಅನನ್ಯತೆ

'ಸಂಸ್ಕೃತಿಯನ್ನು ರೂಪಿಸುತ್ತಾ ಹೋಗುವ ಮಾನವ, ತನ್ನನ್ನೇ ತಾನು ರೂಪಿಸಿಕೊಳ್ಳುತ್ತಾನೆ' ಎಂಬ ಶಂ.ಬಾ ಜೋಶಿ ಯವರ ಮಾತು ಇಲ್ಲಿ ಉಲ್ಲೇಖನೀಯ"[1] ಆದಿಮ ಸಂಸ್ಕೃತಿಯ ಶೋಧದಲ್ಲಿ ತೊಡಗಿಸಿಕೊಂಡ ಲಕ್ಷ್ಮೀಪತಿ ಕೋಲಾರ ಅವರು ನೆಲಮೂಲ ಸಂಸ್ಕೃತಿಯ ಚಹರೆ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

### ಸಂಸ್ಕೃತಿಯ ವ್ಯಾಖ್ಯಾನಗಳು

ಸಮೂಹ ಮತ್ತು ಸಂಬಂಧಗಳ ಆಯಾಮದಲ್ಲಿ ಪ್ರಕಟಗೊಳ್ಳುವ ಸಾಮಾಜಿಕ ಸತ್ವಗಳ ಮೊತ್ತವೇ ಸಮಾಜ. ಇವೇ ಮೊತ್ತದ ಕ್ರಿಯೆಯ ಆಯಾಮವೇ ಸಂಸ್ಕೃತಿ' (The Foundation of Social Anthropology by .S.F.Nadel)[2]

'ಹರ್ಸ್ಕೋವಿಟ್ಸ್ ಮಾತಿನಲ್ಲಿ ಹೇಳುವುದಾದರೆ' ಸಂಸ್ಕೃತಿಯು ಏಕಕಾಲದಲ್ಲೇ ಸ್ಥಿರವೂ ಚಲನಶೀಲವೂ ಆಗಿರುತ್ತದೆ'(Cultural Anthropolgy by Herskovits)[3].

'ಜನರ ಜೀವನ ವಿಧಾನವೇ ಸಂಸ್ಕೃತಿ'[4](Cultural Anthropolgy by Herskovits)

ಡಿ.ವಿ.ಜಿಯವರು ತಮ್ಮ 'ಸಂಸ್ಕೃತಿ' ಕೃತಿಯಲ್ಲಿ ಸಾದರಪಡಿಸಿರುವ ಇನ್ನೂ ಕೆಲವು ಹೇಳಿಕೆಗಳನ್ನು ಇಲ್ಲಿ ಕೊಡಬಹುದಾಗಿದೆ.

'ಸುಸಂಸ್ಕೃತನ ಗುಣ ಸಂಪತ್ತು ಸಂಸ್ಕೃತಿ'

ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ. ಅದು ವಿದ್ಯಾಕುಸುಮ ಪರಾಗ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಜೀವನಾನುಭವದ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಲೋಕ ಸಮಾಧಾನಕಾರಕವಾದ ಶೀಲ ಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ವಗಳ, ನಾನಾ ಧರ್ಮಗಳ ಮೌಲ್ಯ ತಾರತಮ್ಯ ಜ್ಞಾನದಿಂದಾದ ಸಮನ್ವಯ ಸ್ವಾರಸ್ಯ'.

'ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ' ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಸಂಪಾದಿಸುವ ಚಿತ್ತವೇ ಸಂಸ್ಕೃತಿ'

'ಪಾಂಡಿತ್ಯಕ್ಕೂ ಸಂಸ್ಕೃತಿಗೂ ವಿರೋಧವೇನೂ ಇಲ್ಲ. ಬುದ್ಧಿಕುಶಲತೆಗೂ ಸಂಸ್ಕೃತಿಗೂ ವೈಷಮ್ಯವೇನೂ ಇಲ್ಲ. ಸಂಸ್ಕೃತಿಯಲ್ಲಿ ವಿದ್ವತ್ತಿಗೂ ಪ್ರತಿಭೆಗೂ ಚತುರತೆಗೂ ಜಾಗವುಂಟು. ಆದರೆ ಅದಷ್ಟರಿಂದಲೇ ಸಂಸ್ಕೃತಿಯಾಗದು. ಸಂಸ್ಕೃತಿಯೆಂದರೆ ಒಂದು ಅಂತರಂಗದ ಪರಿಪಾಕ.' 'ನಿಜವಾದ ಸಂಸ್ಕೃತಿಗೆ ಭೌತಸಂಪತ್ತಿನ ಪ್ರಗತಿಗಿಂತ ಆತ್ಮ ಸಂಪತ್ತಿನ ಪ್ರಗತಿ ಹೆಚ್ಚಾದದ್ದು..... ಅದರ ಮುಖ್ಯ ಲಕ್ಷ್ಯ ಸಮಾಜವಲ್ಲ ವ್ಯಕ್ತಿ'

–ಹೀಗೆ ಡಿ.ವಿ.ಜಿಯವರ ಚಿಂತನೆಗಳ ಪ್ರಧಾನ ನೆಲೆ–ವ್ಯಕ್ತಿ ಮತ್ತು ಅಂತರಂಗ. ಇದು ಇವರೊಬ್ಬರ ಅಭಿಪ್ರಾಯವಾಗಿರದೆ ಹೀಗೆ ಚಿಂತಿಸುವ ಅನೇಕರ ಅಭಿಪ್ರಾಯಗಳ ಪ್ರಾತಿನಿಧಿಕ ಮಾದರಿಯಾಗಿದೆ"[5]

"ವ್ಯಕ್ತಿಯಲ್ಲಿ ಸಮಾಜ, ಸಮಾಜದಲ್ಲಿ ವ್ಯಕ್ತಿ ಹೀಗೆ ವ್ಯಕ್ತಿ ಮತ್ತು ಸಮಾಜಗಳೊಂದಾದ ಸಾಮಾಜಿಕ ವ್ಯಕ್ತಾತ್ವವೇ ಸಂಸ್ಕೃತಿಯ ಭಾಗವಾಗಿ ಬೆಳೆಯುತ್ತದೆ."
ಹರ್ಸ್ ಕೊವಿಟ್ಸ್ ಹೇಳುವಂತೆ 'ಜನರ ಜೀವನ ವಿಧಾನವೇ ಸಂಸ್ಕೃತಿ'(Cultural Anthro pology by Herskoyits)

ಸಂಸ್ಕೃತಿ ನಿಷ್ಠ ಸಂಶೋಧನೆಯೆಂಬುದು ಒಂದು ಜ್ಞಾನಶಿಸ್ತಾಗಿ ಬೆಳೆದಾಗ ಅದು ಚರಿತ್ರೆಯ ಒಡಲಲ್ಲಿ ಅಡಗಿರುವ ಹಲವು ಒಳಸಂಗತಿಗಳನ್ನು ಬಯಲುಗೊಳಿಸುವುದಕ್ಕೆ ಒಂದು ಕೀಲಿಕೈನಂತೆ ಬಳಕೆಯಾಗುತ್ತದೆ. ಆದರೆ ಈ ಜ್ಞಾನಶಿಸ್ತನ್ನು ಕೆಲವು ಜನ ಸಂಶೋಧಕರೆನ್ನಿಸಿಕೊಂಡವರು ಮತ ನಿಷ್ಠೆಯೆಂಬ ಮೂಲಭೂತವಾದಿ ಧೋರಣೆಗೆ ಅನುಗುಣವಾಗಿ ಬಳಸಿಕೊಳ್ಳುತ್ತಿರುವುದು ನಮ್ಮ ನಡುವಿನ ಹಲವು ದುರಂತಗಳಿಗೆ ಕಾರಣವಾಗಿದೆ. ಇಂಥ ಸಂಶೋಧಕ ಪಡೆ ಬೆಳೆದಿರುವುದು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಶಿಸ್ತಿನ ವೇದಿಕೆ ಮೂಲಗಳಲ್ಲಿ ಎಂಬುದು ವಿಷಾದದ ಸಂಗತಿ. ಈ ಪಡೆಯ ಸೈನಿಕರೆಲ್ಲ ಕಲ್ಲು, ಬೋಗಿ, ತಾಮ್ರಪಟ, ಸಮಾಧಿಗಳ ಆಕರ ಪ್ರಮಾಣ ಮೂಲದ ಶಬ್ದಾರ್ಥ ಶೋಧಕರು. ಬದುಕಿನ ಪ್ರವಾಹದಲ್ಲಿ ಈಗಲೂ ಚಲಿಸುತ್ತಿರುವ ಚಾರಿತ್ರಿಕ ಜೀವ ಸ್ವರಗಳು ಇವರ ಕಿವಿಗೆ ಕೇಳಿಸುವುದಿಲ್ಲ. ವಿಚಿತ್ರವೆಂದರೆ ಇಂಥ ಯಾವುದೇ ಶೈಕ್ಷಣಿಕ ಶಿಸ್ತಿನ ವಿಶ್ವವಿದ್ಯಾಲಯ ಮೂಲದಿಂದ ಬಂದಿರುವ ಕೆಲವು ಜನ ವಿದ್ವಾಂಸರು ನಮ್ಮ ಸಂಶೋಧನಾ ಕ್ಷೇತ್ರವನ್ನು ನಿಜವಾದ ಸಂಸ್ಕೃತಿನಿಷ್ಠೆ ನೆಲೆಯಲ್ಲಿ ರೂಪಿಸಿದ್ದಾರೆ. ಇವರ ಸಂಸ್ಕೃತಿನಿಷ್ಠೆ ಎಂಬುದು ಪ್ರಭುತ್ವ ಮತ್ತು ಉಪ ಜೀವಿ ಪಂಡಿತ ಮಾನ್ಯರನ್ನು ಉಪೇಕ್ಷಿಸಿದಂತೆ ಪಾಮರರ, ಸೋತವರ ನೆಲೆಯಲ್ಲಿನ ನಿಜದ ಉಸಿರಿನ ಮಿಡಿತಕ್ಕೆ ಬದ್ಧವಾಗಿರುವುದು. ಆಕ್ರಮಣಕಾರರ ನೆಲೆಗಿಂತ ಆಕ್ರಮಣಕ್ಕೆ ಒಳಗಾದವರ ಮೂಲದ ಸಂಕಟಗಳಿಗೆ ಕಣ್ಣು ಕಿವಿಯಾಗಿರುವುದು. ಸಹಜವಾಗಿ ಇಂಥವರ ಹೆಜ್ಜೆಗತಿಯೆಂಬುದು ಕಲ್ಲುಮುಳ್ಳಿನ ಕಗ್ಗಂಟುಗಳ ಕಾಡು ದಾರಿಯ ಪಯಣ. ಎಂದು ಎಸ್.ಜಿ.ಸಿದ್ದರಾಮಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ನೆಲಮೂಲ ಸಂಸ್ಕೃತಿಗಳ ಚಾರಿತ್ರಿಕ ವಸ್ತು ಸಂಗತಿಗಳನ್ನು ಶೋಧಿಸುವಲ್ಲಿ ಇಂಥವರ ಪರಿಶ್ರಮ ಅನನ್ಯವಾದುದು. ಇಂಥವರ ಸಂಶೋಧಕರ ಸಾಲಿನಲ್ಲಿ ಲಕ್ಷ್ಮೀಪತಿ ಕೋಲಾರ ಅವರು ಇರುವುದು ಮಹತ್ವದ ಸಂಗತಿ.

ಜಾಗತಿಕ ಜಗತ್ತಿನ ಎದುರು ಪ್ರಾದೇಶಿಕ ಸಂಸ್ಕೃತಿಯು ಅಳಿವಿನಂಚಿಗೆ ಸರಿದದ್ದು ಪ್ರಸ್ತುತ ಸಮಾಜದ ದುರಂತವೇ ಸರಿ. ಭಾರತದ ಭೌಗೋಳಿಕ ಸರಹದ್ದುಗಳನ್ನು ಎಷ್ಟೆ ನಿಕರವಾಗಿ ಗುರುತಿಸಿದರೂ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಇದರ ವಿಸ್ತರಣೆ ಗಡಿ ಸರಹದ್ದು ಮೀರುವಿಕೆಯೇ ಆಗಿದೆ. ಭಾರತೀಯ ಸಂಸ್ಕೃತಿಯ ಚಹರೆಗಳನ್ನು ಇದುವರೆಗೂ ಗ್ರಹಿಸಿದ್ದು, ಏಕರೂಪಿ ದೃಷ್ಟಿಕೋನದಿಂದಲ್ಲೆ. ಅಂದರೆ ವೈದಿಕ ದೃಷ್ಟಿಕೋನ. ಈಗೆ ಏಕರೂಪಿ ದೃಷ್ಟಿಕೋನದ ಬಗೆಗೆ ತೀವ್ರ ಭಿನ್ನಾಭಿಪ್ರಾಯ ತಳೆದು ಭಾರತೀಯ ಸಾಂಸ್ಕೃತಿಕ ಚರಿತ್ರೆಯನ್ನು ಅವೈದಿಕ ನೆಲೆಗಳಿಂದ ನಿರ್ವಹಿಸುವ ಹೊಣೆಗಾರಿಕೆಯನ್ನು ಯಾವುದೇ ಶೈಕ್ಷಣಿಕ ಪದವಿಗಳನ್ನು ಪಡೆಯದಿದ್ದರು. ಸಂಶೋಧನೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಇವುಗಳ ಅಂತಿಮ ರೂಪವೇ 'ಮಾಸ್ತೀಕರು: ಜನಾಂಗೀಯ ಅಧ್ಯಯನ'. 'ಆದಿಮ ಶಿವರಹಸ್ಯ'(ಜೇನು ಕುರುಬ ಬುಡಕಟ್ಟು ಮೂಲದ ಆಚರಣಾ ಪ್ರದಾನ ಅಧ್ಯಯನ) ಮತ್ತು 'ದಕ್ಷಿಣ ದಂಡಾಜೀಪಿಕ'.

## 'ದಕ್ಷಿಣ ದಂಡಾಜೀವಿಕ'

ಲಕ್ಷ್ಮೀಪತಿಯವರು ಸದಾ ಒಂದಲ್ಲ ಒಂದು ವಿಚಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಇದಕ್ಕೆ ಕಾರಣವನ್ನು 'ದಕ್ಷಿಣ ದಂಡಾಜೀವಿಕ' ಕೃತಿಯಲ್ಲಿ ಅಧ್ಯಾಯ ೧ರ ಅಸಾಂಪ್ರದಾಯಿಕ ಪ್ರವೇಶಿಕೆಯಲ್ಲಿ ಈಗೆ ಹೇಳಿಕೊಂಡಿದ್ದಾರೆ. 'ಸಾಹಿತ್ಯ, ಚಳುವಳಿ, ಪತ್ರಿಕೋದ್ಯಮ ಹಾಗೂ ದೃಶ್ಯಮಾಧ್ಯಮಗಳು ನನ್ನ ಬದುಕಿನ ನಾಲ್ಕು ಆಧಾರ ಸ್ತಂಭಗಳಾಗಿ ಹೋಗಿದೆ. ಅದರಲ್ಲೂ ಸಾಹಿತ್ಯ ಮತ್ತು ಚಳುವಳಿಗಳೆಂಬ ದ್ವೈತ ಮಾರ್ಗಗಳನ್ನು ಸಾಂಸ್ಕೃತಿಕವೆಂಬ ಅದ್ವೈತದ ಯಾನವಾಗಿಸಿಕೊಂಡಿದ್ದೇ ನನ್ನ ಕಾಲುದಾರಿಯ ಬದುಕಿನ ಬಹುದೊಡ್ಡ ಆಕಸ್ಮಿಕವಾಗಿದೆ. ಈ ಆಕಸ್ಮಿಕದ ದೆಸೆಯಿಂದಾಗಿ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ನಾನು ಆದಿಮ ಶಿವ ರಹಸ್ಯ ಹಾಗು ಆಜೀವಿಕ ಧರ್ಮದ ಕುರಿತಂತಹ ಸಾಂಸ್ಕೃತಿಕ ಸಂಶೋಧನೆಗಳ ಪರವಶತೆ ಮತ್ತು ಎಚ್ಚರಗಳ ನಡುವೆ ತೂಗಿ ತೊನೆಯುತ್ತ ವಿಚಿತ್ರ ಸೃಜನಾತ್ಮಕ ಆನಂದಗಳನ್ನು ಅನುಭವಿಸಿದ್ದೇನೆ. ಈ ಸಂಶೋಧನೆಗಳ ಕುರಿತಂತೆ ನಾನಿದುವರೆವಿಗೂ ಬರೆದದ್ದು ಅತ್ಯಲ್ಪ. ಆದರೆ ಮಾಡಿಕೊಂಡಿರುವ ಟಿಪ್ಪಣಿಗಳ ಗಾತ್ರ ಮಾತ್ರ ನಾನೇ ಬೆಚ್ಚಿಬೀಳುವಷ್ಟಿದೆ. ಬದುಕಲ್ಲಿನ ನಿರಂತರವಾದ ಅಸ್ಥಿರತೆಯ ಕಾರಣದಿಂದಾಗಿ ಅನುಭವಿಸುತ್ತಲೇ ಬಂದ ಅಪಮಾನಗಳನ್ನೆಲ್ಲ ಚಣ ಮಾತ್ರದಲ್ಲಿ ಮರೆಸಿಬಿಡಬಲ್ಲಂತಹ ಸಂಸ್ಕೃತಿ ಸಂಶೋಧನೆಗಳ ವಿಚಿತ್ರ ಹಾಗೂ ರೋಚಕ ಅವಸ್ಥೆಯಿದು. ಸೂಫಿಗಳ ಉನ್ಮಾದಾವಸ್ಥೆಯ ಜೊತೆಗೇ ತಾವೋನ ನಿರುಮ್ಮಳತೆಯೂ ಬೆರೆತ ರೀತಿ! ಕಾವ್ಯ, ನಾಟಕವನ್ನೂ ಒಳಗೊಂಡಂತೆ ನನ್ನ ಎಲ್ಲ ಬಗೆಯ ಬರವಣಿಗೆಗಳ ಹಿಂದಿನ ಮೂಲ ಶಕ್ತಿಯೂ ಇದೆ. ಇತರೆ ಸಂಶೋಧಕರಿಗೆ ಈ ಬಗೆಯ ಅನುಭವವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅಜ್ಞಾತವೂ, ನಿಗೂಢವೂ ಹಾಗೂ ಅವಜ್ಞೆಗೀಡಾದ ಅನನ್ಯ ಸಾಂಸ್ಕೃತಿಕ ಗುಪ್ತ ಧಾರೆಗಳ ಬೆನ್ನು ಹತ್ತಿ ಕಳೆದುಹೋಗುವ ಸುಖವು ನನ್ನ ಪಾಲಿಗೆ ವ್ಯಸನವಾಗಿ ಪರಿಣಮಿಸಿದೆಯೇನೋ ಎಂದು ಎಷ್ಟೋ ಬಾರಿ ದಿಗಿಲು, ಅನುಮಾನಗಳು ಕಾಡಿದ್ದೂ ಉಂಟು. ಈ ಬಗೆಯ ದಿಗಿಲು ಕೂಡ ಒಂದು ಸುಖವೇ. ವ್ಯಸನವೇ ಸುಖವಲ್ಲವೇ? ಪ್ರಾಚೀನ ಪಂಥಗಳು, ಧರ್ಮ ಮತ್ತು ಸಾಹಿತ್ಯ, ಇತಿಹಾಸ, ಭಾಷೆ, ಆಚರಣೆ, ಜನಾಂಗೀಯ ಮೂಲಗಳ ಬೆನ್ನು ಹತ್ತುವ ಈ ಹಠವು ನನ್ನ ಅಮೂಲ್ಯ ಆಯುಷ್ಯವನ್ನೇ ಕಬಳಿಸಿಬಿಟ್ಟಿದೆ. ಈ ವಿಷಯದಲ್ಲಿ ಚಳವಳಿಯ ನಂತರದ ಸ್ಥಾನ ಸಂಶೋಧನೆಗೇ ಮೀಸಲೆನ್ನಬಹುದು. ಕಳೆದೊಂದು ದಶಕದಿಂದಲಂತೂ ಸಂಸ್ಕೃತಿ ಸಂಶೋಧನೆಯೇ ಎನೆಲ್ಲಕ್ಕಿಂತಲೂ ಮಿಗಿಲೆನಿಸಿಬಿಟ್ಟಿದೆ. ಅನುದಿನದ ಜಂಜಡಗಳ ನಡುವೆಯೂ ನನ್ನ ಸಂಶೋಧನಾಸಕ್ತಿಯು ಕಾವು ಆರದಂತೆ ಎಚ್ಚರ ವಹಿಸಿರುತ್ತೇನೆ. ಹೀಗೆ, ಈ ಬಗೆಯ ಆಕಸ್ಮಿಕ ಯಾನದಲ್ಲೇ ಎಂದೋ, ಯಾವ ಗಳಿಗೆಯಲ್ಲೋ, ಅದು ಹೇಗೋ ಸದ್ದಿಲ್ಲದಂತೆ ನನ್ನ ಜತೆಗೂಡಿದವನು ಈ ದಕ್ಷಿಣ ದಂಡಾಜೀವಿಕ![2]

'ದಕ್ಷಿಣ ದಂಡಾಜೀವಿಕ' ಸಂಶೋಧನಾ ಪ್ರಬಂಧವನ್ನು ಸಿದ್ಧ ಪಡಿಸಿದ ರೀತಿಯೇ ನಮ್ಮನ್ನು ಬೇರಗು ಮಾಡುವಂತಿದೆ. ೧೯೮೯ರಲ್ಲಿ ಪ್ರಕಟವಾದ 'ನವಿಲು ಕಿನ್ನರಿ' ಕವನ ಸಂಕಲನದಲ್ಲಿ **'ಮಕ್ಖಲಿ ಘೋಷಾಲ್'**ನ ಬಗೆಗೆ ಸುದೀರ್ಘ ಕವಿತೆಯೊಂದನ್ನು ಬರೆದು ಪ್ರಕಟಿಸಿದ್ದರು ಬಹುಶಃ ಇವರಿಗೆ ಹಲವು ವರ್ಷಗಳಿಂದ ಕಾಡಿದ ಪ್ರಶ್ನೆಗಳ ಬೆನ್ನತ್ತಿ ಈ ಕೃತಿಯನ್ನು ಹೊರ ತಂದಿದ್ದಾರೆ.

ಅಧ್ಯಯನಕ್ಕೆ ಹಲವಾರು ಪೂರಕ ಆಕರಗಳನ್ನು ಬಳಸಿಕೊಂಡಿದ್ದಾರೆ. ಅದರಲ್ಲೂ ಭಾಷಾಂ ರವರ "ಹಿಸ್ಟರಿ ಅಂಡ್ ಡಾಕ್ಟ್ರಿನ್ಸ್ ಆಫ್ ಆಜೀವಿಕಾಸ್' ಪುಸ್ತಕವನ್ನು ಹುಡುಕಿ ಮಾಹಿತಿ ಸಂಗ್ರಹಿಸಿ ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಭಾಷಂ ಅವರು ನೀಡಿದ್ದ 'ಈಸ್ಟರ್ನ್ ಡೆಕ್ಕನ್' ಪ್ರಾಂತಿನ ಆಜೀವಿಕ ಶಾಸನಗಳು ಸಿಕ್ಕಿದ್ದು ಅದರ ಕೇಂದ್ರಗಳು ಕೋಲಾರ ಜಿಲ್ಲೆಯ ಆವಣಿ, ಕೈವಾರ, ಮಡಿವಾಳ ಕಲ್ಲಹಳ್ಳಿ, ಹಳೆಬಾಳ್ಯ ಮತ್ತೊಂದು ಮಡಿವಾಳ ಹಾಗೂ ಗುಡಿಹಳ್ಳಿಗಳೆಂದು ಗುರುತಿಸಲಾಗಿತ್ತು.

ಮಕ್ಖಲಿ ಘೋಷಾಲ್ ಸಾವಿನ ನಂತರದ ೨೦೦ ವರ್ಷಗಳಗೂ ಹೆಚ್ಚು ಕಾಲ, ಬಹುಶಃ ಹತ್ತಿರತ್ತಿರ ಮೂನ್ನೂರು ವರ್ಷಗಳವರೆಗೂ ಜೈನ ಧರ್ಮಕ್ಕಿಂತಲೂ ಹೆಚ್ಚು ಪ್ರಬಲವಾಗಿ ಉತ್ತರಭಾರತದ ಗಂಗಾನದಿಯ ಆಚೀಚೆಯ ಪ್ರದೇಶಗಳ ಉದ್ದಗಲಕ್ಕೂ ಅಸ್ತಿತ್ವದಲ್ಲಿದ್ದ ಆಜೀವಿಕ ಧರ್ಮ, ಆನಂತರದ ನೂರಾರು ವರ್ಷಗಳ ಕಳೆದ ಮೇಲೆ ಈಗಿನ ವಿಭಜಿತ ಕೋಲಾರ ಜಿಲ್ಲೆಯಲ್ಲಿ ಕಾಣಿಸಿಕೊಂಡಿತ್ತು. ವಿಚಿತ್ರವೆಂದರೆ ಆ ಶಾಸನಗಳ ಆಜೀವಿಕರಿಗೆ ಹೆಚ್ಚುವರಿಯಾಗಿ ವಿಶೇಷ ತೆರಿಗೆಗಳನ್ನು ವಿಧಿಸಲಾಗಿದೆಯೆಂಬ ಅಂಶವನ್ನು ಒಳಗೊಂಡ ಶಾಸನಗಳಾಗಿದ್ದವು ಕೆಲವನ್ನು ಸ್ಪಷ್ಟತೆಗೆ ಇಲ್ಲಿ ಉಲ್ಲೇಖಿಸಲಾಗಿದೆ.

ಪಲ್ಲವರ ಸಿಂಹವರ್ಮನೆಂಬ ರಾಜನು ವಿಲವಟ್ಟಿ ಎಂಬ ಗ್ರಾಮವನ್ನು ವಿಷ್ಣು ಶರ್ಮ ಎಂಬ ಬ್ರಾಹ್ಮಣನಿಗೆ ದಾನವಾಗಿ ನೀಡಿದಾಗ ಬರೆಸಿದ ಶಾಸನವಿದು. ಕಾಲ ಕ್ರಿ.ಶ ೪೪೬ರಲ್ಲಿ ಉಲ್ಲೇಖಿ. ವಿಷ್ಣ ಶರ್ಮನ್ ಎಂಬ ಬ್ರಾಹ್ಮಣನಿಗೆ ಸಲ್ಲುವ ವಿವಿಧ ತೆರಿಗೆಗಳ ಪಟ್ಟಿಯಲ್ಲಿ ಲೋಹ, ಚರ್ಮಕಾರರು, ಪಟ್ಟಕಾರರು ಬಿಟ್ಟಿನೇಯ್ಗೆ ಮತ್ತು ಮಾರಾಟಗಾರರು ಹಗ್ಗ ಹೊಸೆಯುವವರೊಂದಿಗೆ ಆಜೀವಿಕರಿಗೂ ಹೆಚ್ಚುವರಿ ತೆರಿಗೆಯನ್ನು ಸಲ್ಲಿಸಬೇಕೆಂದು ವಿಧಿಸಲಾಗಿದೆ. ಈ ಶಾಸನದಲ್ಲಿ 'ಅಜೀವಿಕ'ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

- ಆಂದ್ರ ಪ್ರದೇಶದ ಗುಂಟೂರು ಜಿಲ್ಲೆಯ ವಿಜಯವಾಟಿ ಕಾಲ ಕ್ರಿ.ಶ ೯೪೫ ರಿಂದ ೯೭೫ ಆಜುವುಲ ಪರು' ಎಂದು ಉಲ್ಲೇಖಕ ಅಂದ್ರೆ ಆಜೀವಿಕರ ಹಳಿ ಎಂಬ ಅರ್ಥವನ್ನು ಒಳಗೊಂಡಿದೆ.
- ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯ ಕಾಮಗಾತ್ ಎಂಬ ಗ್ರಾಮದಲ್ಲಿ ಲಭ್ಯವಿದೆ.
- ನಾಲ್ಕನೆಯ ಶಾಸನವು ಕರ್ನಾಟಕದ ಕೋಲಾರ ಜಿಲ್ಲೆಯ ಆವಣಿಯಲ್ಲಿ ರಾಜೇಂದ್ರ ಚೋಳದೇವನ ಕ್ರಿ.ಶ ೧೦೭೨ರಲ್ಲಿ ಹಾಕಿಸಿರುವ ಶಾಸನವಾಗಿದೆ. 'ಆಜುವಿಮಕ್ಕಳ್' ಎಂದು ಉಲ್ಲೇಖವಾಗಿದೆ.
- ತಮಿಳುನಾಡಿನ ಪಡವೇಡು ಎಂಬಲ್ಲಿನ ಅಮ್ಮಯ್ಯಪ್ಪೇಶ್ವರ ಎಂಬ ದೇವಾಲಯದಲ್ಲಿ ಕ್ರಿ.ಶ ೧೨೪೫ ರಲ್ಲಿ ರಾಜಗಂಭೀರ ಶಂಭುವರಾಯನ್ ಎಂಬ ದೊರೆಯೊಬ್ಬ ಹಾಕಿಸಿರುವ ಶಾಸನ.
- ಕರ್ನಾಟಕದ ಕೋಲಾರ ಜಿಲ್ಲೆಯ ಮಡಿವಾಳ ಎಂಬ ಗ್ರಾಮದ ಚೆನ್ನಕೇಶವ ದೇವಾಲಯದಲ್ಲಿನ ಶಾಸನದಲ್ಲೂ ಆಜುವ ತೆರಿಗೆಯ ಉಲ್ಲೇಖವಿದೆ.

- ಇದೇ ಕೋಲಾರ ಜಿಲ್ಲೆಯ ಕಲ್ಲು ಹಳ್ಳಿಯಲ್ಲಿ ಹೊಯ್ಸಳರ ರಾಮನಾಥದೇವರ ಮಂತ್ರಿಯೊಬ್ಬ ಕ್ರಿ.ಶ ೧೨೯೪ರಲ್ಲಿ ಧಾರ್ಮಿಕ ದತ್ತಿಯನ್ನು ಘೋಷಿಸಿದ್ದು, ಆ ಶಾಸನದಲ್ಲಿ ಆಜುವ ತೆರಿಗೆಯನ್ನು ಸೇರಿಸಲಾಗಿದೆ.

ಆಜೀವಿಕರಿಗೆ ಸಂಬಂಧ ಪಟ್ಟ ಹದಿನೆಂಟು ಶಾಸನಗಳು ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರ ಪ್ರದೇಶಗಳಲ್ಲೇ ದೊರೆತಿರುವುದು ಅವರ ಪ್ರಾಬಲ್ಯವು ದಕ್ಷಿಣದಲ್ಲಿ ಎಷ್ಟಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಅದರಲ್ಲೂ ಕೋಲಾರ ಜಿಲ್ಲೆಯಲ್ಲಿಯೇ ಎಂಟು ಶಾಸನಗಳು ದೊರೆತಿರುವುದು ಮತ್ತೊಂದು ದಾಖಲೆಯೇ ಸರಿ.

ಕೊನೆಯ ಶಾಸನ ಕೋಲಾರ ಜಿಲ್ಲೆಯ ಗುಡಿಪಲ್ಲಿಯದ್ದಾದ್ದರಿಂದ ಬಹುಶಃ ಆಜೀವಿಕರು ಕೋಲಾರ ಜಿಲ್ಲೆಯಲ್ಲೂ ಹದಿನೈದನೇ ಶತಮಾನದವರೆಗೂ ಜೀವಿಸಿದ್ದರೆಂದೇ ನಾವು ಭಾವಿಸಬಹುದಾಗಿದೆ ಎಂದು ಲಕ್ಷ್ಮೀಪತಿ ಕೋಲಾರ ಅವರು ಅಭಿಪ್ರಾಯ ಪಟ್ಟಿದ್ದಾರೆ.

**ಮಕ್ಖಲಿ ಗೋಸಾಲನಿಗಿಂತಲೂ** ಹಿಂದೆ ಕನಿಷ್ಠ ಎಂದರೂ ಒಂದೂಕಾಲು ಶತಮಾನದಿಂದಲೂ ಆಜೀವಿಕವೆಂಬ ಪ್ರಾಚೀನ ಧಾರ್ಮಿಕ ಪಂಥವೊಂದು ಅಸ್ತಿತ್ವದಲ್ಲಿತ್ತು ಎಂಬ ವಿಚಾರವಂತೂ ಈಗ  ಸ್ಪಷ್ಟವಾಗಿದೆ. ನಂದ ವಚ್ಛ ಮತ್ತು ಕಿಸಾ ಸಂಕಿಚ್ಚ ಎಂಬುವವರು ಅನುಕ್ರಮವಾಗಿ ಆ ಪ್ರಾಚೀನ ಆಜೀವಿಕ ಪಂಥದ ಹಿಂದಿನ ಪ್ರಮುಖ ಗುರುಗಳಾಗಿದ್ದರು. ಅದಲ್ಲದೆ ಆ ಚೇಲಕರಾಗಿ ಅಂದರೆ ಅವಸ್ತ್ರಕ-ನಗ್ನರಾಗಿಯೂ, ಮಸ್ಕರ ಅಥವಾ ದಂಡ ಹಿಡಿದು ಕೂದಲು ಕಿತ್ತುಕೊಂಡು ಬೋಳಾಗಿಯೂ, ಗಂಗಾನದಿಯ ಬಯಲಿನ ಪ್ರದೇಶದ ಉದ್ದಗಲಕ್ಕೂ ಪ್ರಮುಖ ನಗರಗಳನ್ನು ಬಳಗೊಂಡಂತೆಯೂ, ನೂರಾರು ಮಂದಿ ಆಜೀವಿಕರು ಅಸ್ತಿತ್ವದಲ್ಲಿದ್ದರು. ಜನವರಿಗೆ ಕೆಲವೊಮ್ಮ ಬೇರೆ-ಬೇರೆ ಪಂಥಗಳಿಗೂ ಪಾರ್ಶ್ವನಾಥನ ಕಾಲದ ಆದಿ ಜೈನರಿಗೂ ಮತ್ತು ಆಜೀವಿಕರಿಗೂ ಪರಿವ್ರಾಜಕರಿಗೂ ನಡುವೆ ಹೆಚ್ಚಿನ ವ್ಯತ್ಯಾಸಗಳು ಕಾಣಿಸುತ್ತಿರಲಿಲ್ಲವೆಂಬ ಉಲ್ಲೇಖಗಳು ಪಾಲಿ ಸಾಹಿತ್ಯದಲ್ಲಿ ಅಲಲ್ಲಿ ಕಂಡುಬರುವುದರ ಬಗ್ಗೆಯೂ ವಿದ್ವಾಂಸರು ಗಮನ ಸೆಳೆಯುತ್ತಾರೆ.

'ಭಿಕ್ಷುಕ ವೃತ್ತಿಯ ಅಲೆಮಾರಿ ಜನಾಂಗದಿಂದ ಬಂದ, ಬಹುಶಃ ಜೀತಗಾರನೂ ಆಗಿದ್ದಿರಬಹುದಾದ ಹಿನ್ನೆಲೆಯ ಮಕ್ಖಲಿ ಗೋಸಾಲನಂತಹ ವ್ಯಕ್ತಿಯೊಬ್ಬ ಕರ್ಮಠವಾದ ವೈದಿಕ ಧರ್ಮಕ್ಕೆ ಸೆಡ್ಡು ಹೊಡೆದು, ಒಂದು ಹೊಸ ಧರ್ಮವನ್ನೆ ಹುಟ್ಟುಹಾಕಿದ. ಕಾಯಕ ಜೀವಿಗಳಾದ ಕೆಳಜಾತಿಯವರ ನಡುವೆ ಹೆಚ್ಚು ಜನಪ್ರಿಯನಾಗಿ, ತನ್ನ ಗ್ರಹಿಕೆ, ಅನುಭವ ಮತ್ತು ವಿವೇಕ-ನಂಬಿಕೆಗಳ ಪರಿಪಾಕವಾದ ಆಜೀವಿಕ ದರ್ಶನವೊಂದನ್ನು ರೂಪಿಸಿಕೊಟ್ಟನಾದರೂ, ಅವನ ತಾತ್ವಿಕ ಸಾಹಿತ್ಯವನ್ನಿಡೀ ನಾಶಗೊಳಿಸಿದ್ದಲ್ಲದೇ, ಅದರ ದುರ್ಬಲ ಅಂಶಗಳನ್ನಷ್ಟೇ ಹೆಕ್ಕಿ ಮತ್ತು ವಿಕೃತಗೊಳಿಸಿ, ತಮಗೆ ಸರಿಕಂಡ ಧಾಟಿಯಲ್ಲಷ್ಟೇ ಪ್ರತಿಬಿಂಬಿಸಿದ್ದು, ಬಹುಶಃ ಈ ದೇಶದಲ್ಲಿ ಅತ್ಯಂತ ತಳಸ್ತರದಿಂದ ಬಂದವನೊಬ್ಬ ಗಂಭೀರವಾಗಿ ಹುಟ್ಟುಹಾಕುವ ಧರ್ಮ ಆಜೀವಿಕವೊಂದೇ! ಆದರೆ ತಳಸ್ತರದ ಧ್ವನಿ ಹೀನರ ಮತ್ತು ಸಂಖ್ಯಾ ಪ್ರಮಾಣದ ದೃಷ್ಟಿಯಿಂದ ಏನೇನೂ ಬಲಿಷ್ಠವಲ್ಲದ ಜಾತಿ ಹಿನ್ನೆಲೆಯ ವ್ಯಕ್ತಿಯೊಬ್ಬನ ಕಾಣ್ಕೆ ಕನಸು ಮತ್ತು ಮೇಧಾವಿತನಗಳಿಗೆ ಎಂತಹ ನಿಕೃಷ್ಟ ಉಪಚಾರ ಸಿಗಬಲ್ಲದೆಂಬುದಕ್ಕೂ ಮಕ್ಖಲಿ ಗೋಸಾಲ ಅತ್ಯಂತ ಸಮರ್ಥ

ರೂಪಕವಾಗಿ ಎರಡು ದಶಕಗಳಿಂದಲೂ ನನ್ನನ್ನು ಘಾಸಿಗೊಳಿಸಿದ್ದಾನೆ. ಆ ಕಾರಣಕ್ಕೇ ಎಷ್ಟೋ ಬಾರಿ ಮಕ್ಖಲಿ ಗೋಸಾಲ 'ಪೌತ್ತಪರಿಹಾರ'ದ ಮೂಲಕ ದೇಹಾಂತರಗೊಂಡು. ಪರಕಾಯ ಪ್ರವೇಶದಂತೆ ನನ್ನೊಳಗೂ ಜೀವಿಸಿದ್ದಾನೆ" ತೀಕ್ಷ್ಣ ಸಂವೇದನಶೀಲನಾದ ಪ್ರತಿಯೊಬ್ಬರಿಗೂ ಈ ಭಾವನೆ ಅನ್ನಿಸಿದರೂ ಲಕ್ಷ್ಮೀಪತಿ ಕೋಲಾರ ಅವರ ಅಭಿಪ್ರಾಯದಲ್ಲಿ ಇದು ನಿಜವಾಗುತ್ತಿದೆ. ಮುಖ್ಯವಾಗಿ ಗಮನಿಸಬೇಕಾದದ್ದು ಯಾಕೆ? ಮಕ್ಖಲಿ ಗೋಸಾಲನು ಪ್ರಾಮುಖ್ಯತೆ ಪಡೆಯುತ್ತಾನೆ ಎಂದರೆ ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರ ಪಂಚಮ ವರ್ಗ ತಾರತಮ್ಯಗಳ ತಳಹದಿಯ ಮೇಲೆ ಭಾರತದ ಧಾರ್ಮಿಕ ಸಾಮಾಜಿಕ ರಾಜಕೀಯ ವಲಯಗಳು ನಿಂತಿದ್ದರೂ ಅತ್ಯಂತ ತಳಸ್ತರ ವ್ಯಕ್ತಿ ಧರ್ಮ ಸಂಸ್ಥಾಪಕನಾಗಿ ಬೆಳಕಿಗೆ ಸಂಪ್ರದಾಯ ವಾದಿಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಇದು ಆಜೀವಿಕ ಪತನಕ್ಕೆ ಕಾರಣವಾಯಿತ್ತು ಎಂದು ಭಾವಿಸಬಹುದಾಗಿದೆ.

ಲಕ್ಷ್ಮೀಪತಿ ಕೋಲಾರ ಅವರು 'ದಕ್ಷಿಣ ದಂಡಾಜೀವಿಕ' ಸಂಶೋಧನಾ ಕೃತಿಯಲ್ಲಿ ಪ್ರಮುಖವಾಗಿ ಹಲವಾರು ತಾತ್ವಿಕ ಪ್ರಶ್ನೆಗಳನ್ನು ಶೋಧಿಸುತ್ತಾರೆ. ಅಂತಹ ತಾತ್ವಿಕ ಪ್ರಶ್ನೆಗಳ ಒಂದು ಸಂಸ್ಕೃತಿಯ ನೆಲೆಯಾಗಿ ಹೇಗೆ ಶೋಧಿಸುತ್ತವೆ ಮತ್ತು ಅವರ ಬದ್ಧತೆಯನ್ನು ಇಲ್ಲಿ ಪ್ರಮುಖವಾಗಿ ಗುರುತಿಸಬಹುದು ತಾತ್ವಿಕವಾಗಿ ಎತ್ತಿದಂತಹ ಸೃಷ್ಟಿ ಕ್ರಿಯೆಯ ಬಗೆಗಿನ ಪ್ರಶ್ನೆಗಳು ಇಂತಿವೆ

ಕ್ರಿಸ್ತ ಪೂರ್ವದ ೫, ೬ ಮತ್ತು ೭ನೇ ಶತಮಾನಗಳಲ್ಲಿ ಜಗತ್ತಿನ ಬಹುತೇಕ ಭಾಗಗಳಲ್ಲಿ ಹೊಸ ತತ್ವ ಚಿಂತನೆಗಳು, ಪಂಥಗಳು, ಜೀವನ ಹಾಗೂ ವಿಶ್ವ ಸೃಷ್ಟಿಯ ಮೀಮಾಂಸೆಗಳು, ಪಾಂಥಿಕ ಉನ್ಮಾದಗಳು, ಬಿರುಸಿನ ಪ್ರಚಾರ, ದಾರ್ಶನಿಕವಾದ ವಾಗ್ಯುದ್ಧ ಮತ್ತು ಸಂಘರ್ಷಗಳು ಮತ್ತು ಇಂದಿಗೂ ಪ್ರಸ್ತುತವೆನಿಸುವ ತತ್ವ ದರ್ಶನಗಳು ಒಂದಾದ ಮೇಲೆ ಒಂದರಂತೆಯೂ, ಕೆಲವೊಮ್ಮೆ ಸಾಮೂಹಿಕವಾಗಿಯೂ ತಲೆ ಎತ್ತಿದವೆಂಬುದೇ ಅತ್ಯಂತ ಚೋದ್ಯದ ಸಂಗತಿಯಾಗಿದೆ. ಈ ಅಂಶವೇ ಒಂದು ಪ್ರತ್ಯೇಕ ಹಾಗೂ ಗಂಭೀರ ಅಧ್ಯಯನಕ್ಕೆ ವಸ್ತುವಾಗಬಲ್ಲಂತಿದೆ. ಕ್ರಿಸ್ತಪೂರ್ವದ ೭ನೇ ಶತಮಾನಕ್ಕೂ ಹಿಂದೆಯೇ ಇಂತಹ ತಾತ್ವಿಕವಾದ ಹುಲುಸು ಬೆಳೆಗೆ ಅಗತ್ಯವಾಗಿದ್ದ ವಾತಾವರಣ ಮತ್ತು ನೆಲವನ್ನು ಹದಗೊಳಿಸುವ ಚಟುವಟಿಕೆಗಳೂ ಸಾಕುಬೇಕಾದಷ್ಟು ನಡೆದಿದ್ದವೆಂಬುದೂ ಇದಕ್ಕೆ ಒಂದು ಕಾರಣವಾಗಿರಬಹುದು. ವಿಶ್ವಸೃಷ್ಟಿ, ಹುಟ್ಟು, ಬದುಕು, ಸಾವು ಮತ್ತು ಸಾವಿನ ನಂತರದ ನಿಗೂಢತೆಗಳು ಪ್ರಾಚೀನ ತತ್ವವೇತ್ತರನ್ನು ಬೇರಿನ ಸಮೇತ ಹಿಡಿದು ಅಲುಗಾಡಿಸಿಬಿಟ್ಟಂತಿದೆ.

ಈ ವಿಶ್ವದ ಸೃಷ್ಟಿ ಹೇಗಾಯಿತು, ಯಾವಾಗ ಮತ್ತು ಯಾರಿಂದ ಆಯಿತು? ಯಾರ ಹಸ್ತಕ್ಷೇಪವೂ ಇಲ್ಲದೆ ವಿಶ್ವದ ಆರಂಭ ಬಿಂದುವಿನ ಚಲನೆ ತನಗೆ ತಾನೆಂಬಂತೆ ಘಟಿಸಿತೇ? ಅಥವಾ ಈ ವಿಶ್ವಕ್ಕೆ ಆರಂಭದ ಬಿಂದು–ಆದಿಯೆಂಬುದೊಂದು ಇದೆಯೇ? ಆದಿ ಇದ್ದಲ್ಲಿ ತಾರ್ಕಿಕವಾಗ ಅಂತ್ಯವೆಂಬುದೂ ಒಂದು ಇರಲೇಬೇಕಲ್ಲವೇ? ಆದಿಯೇ ಇಲ್ಲವೆಂದಾದಲ್ಲಿ ಅಂತ್ಯವೂ ಇರಲಾರದೆಂದಾಗುತ್ತದಲ್ಲವೇ? ಈ ವಿಶ್ವದ ಸೃಷ್ಟಿ, ಚಲನೆಯ ನಿರಂತರತ್ವದ ನಿಯಮ ಮತ್ತು ಸ್ಥಿತಿಗೂ– ಈ ಜೀವಕೋಟಿಗೂ ನಡುವಿನ ಸಂಬಂಧದ ಸ್ವರೂಪವೆಂತಹುದು? ಈ ನಿಗೂಢತಮವಾದ ಅತಂತವೆಂಬ ಗ್ರಹಿಕೆಗೇ ನಿಲುಕದ ವಿಶ್ವದಲ್ಲಿ ಜೀವಸೃಷ್ಟಿ ಮತ್ತು ಲಯವೆಂಬ ಬದುಕಿನ ಯಾನಕ್ಕೆ ಏನರ್ಥ? ಜೀವಿಗಳ ಹುಟ್ಟಿಗೆ ಎಂಥದ್ದಾದರೂ ನಿರ್ದಿಷ್ಟವಾದ ಉದ್ದೇಶವಿದೆಯೇ? ಇದ್ದಲ್ಲಿ ಆ ಉದ್ದೇಶವನ್ನು ಕಲ್ಪಿಸಿ, ಜೀವಿಗಳಿಗೆ ನಿರ್ದಿಷಪಡಿಸಿದವರು ಯಾರು? ಯಾರಾದರೂ ಹೀಗೆ ಬದುಕಿಗೊಂದು ನಿರ್ದಿಷ್ಟ ಉದ್ದೇಶವೊಂದನ್ನು ನಿಗದಿಪಡಿಸಿದ್ದಾನೆಂಬ ಅಂಶವನ್ನು ಮೊದಲಿಗೆ ಎಂದು ಯಾರು ಯಾರಿಂದ ಹೇಗೆ ಅರಿತರು? ಅದೃಶ್ಯವೂ, ಅಗೋಚರವೂ ಆದ ಸೃಷ್ಟಿಕರ್ತನೊಬ್ಬನ ಮನದಿಂಗಿತವನ್ನು ಅವನೇ ಸಾಕ್ಷಾತ್ತಾಗಿ

ಬಂದು ವಿವರಿಸಿಲ್ಲದಿರುವಾಗಲೂ ಯಾರಾದರೂ ಉಳಿತರಾದರೂ ಹೇಗೆ? ಅಥವ ಉತ್ತರಗಳೇ ಸಿಗದ ಇಂತಹ ಕಠಿಣ ಪ್ರಶ್ನೆಗಳಿಗೇ ಉತ್ತರವೆಂಬಂತೆ ಮತ್ತೊಂದು ವಾಗ್ಝರಿಯೂ ಹರಿದಿದೆ! ಬದುಕಿಗೆ ಯಾವ ಉದ್ದೇಶವೂ ಇಲ್ಲವಷ್ಟೇ ಇಲ್ಲ; ಹಾಗೊಮ್ಮೆ ಸೃಷ್ಟಿಕರ್ತನೆಂಬುವವನು ಒಬ್ಬನಿದ್ದಾನೆಂದೇ ಭಾವಿಸಿದಲ್ಲಿ ಅವನ ಸೃಷ್ಟಿಯನ್ನು ಮಾಡಿದವರಾರು? ಸೃಷ್ಟಿಕರ್ತನು ಸ್ವಯಂಭೂ ಎಂದಾದಲ್ಲಿ ಆ ಸ್ವಯಂಭೂ ಎನ್ನುವುದರ ಪರಿಕಲ್ಪನೆಯೇನು? ಅಂತಹ ಪರಿಕಲ್ಪನೆಯೊಂದು ಅಸ್ತಿತ್ವದಲ್ಲಿರುವುದು ಹೇಗೆ ಸಾಧ್ಯ? ಆ ಪರಿಕಲ್ಪನೆಗೆ ಆ ವಿವೇಚನೆ, ಅಂದರೆ ಸೃಷ್ಟಿಕರ್ತನೊಬ್ಬನನ್ನು ಸೃಷ್ಟಿಸಬೇಕೆಂಬ ತಿಳುವಳಿಕೆ ಬರುವುದಾದರೂ ಹೇಗೆ ಸಾಧ್ಯ? ಸ್ವಯಂಭೂ ಸೃಷ್ಟಿಕರ್ತನ ಹುಟ್ಟಿಗೂ ಮುಂಚೆ ಈ ವಿಶ್ವವೇ ಇರಲಿಲ್ಲವೇ? ಅಂದರೆ ಶೂನ್ಯವನ್ನಾದರೂ ಸೃಷ್ಟಿಸಿದವರು ಯಾರು? ಅಂದರೆ ಸೃಷ್ಟಿಕರ್ತನಿಗೂ ಪೂರ್ವದಲ್ಲಿನ ಅನಂತ ಶೂನ್ಯವನ್ನು ಯಾರೂ ಸೃಷ್ಟಿಕರ್ತನಿಗಿಂತಲೂ ಮಿಗಿಲು ಮತ್ತು ಆದಿ ಎಂದಾಗುತ್ತದಲ್ಲವೇ? ಹಾಗಾದಾಗ ಶೂನ್ಯವನ್ನು ಮೀರಲಾಗದ ಸೃಷ್ಟಿಕರ್ತನ ಅಮಿತ ಶಕ್ತಿಗೇನರ್ಥ ಉಳಿದೀತು? ಅಥವ ಸೃಷ್ಟಿಕರ್ತನಿಗೂ ಹಿಂದೆ ಈ ವಿಶ್ವವು ಈಗಿರುವ ಈ ಅನಂತ ವ್ಯಾಪ್ತಿಯಲ್ಲಿ ಬೇರೆ ಏನಿತ್ತು? ಏನೂ ಇಲ್ಲದೆಯೇ ಇರುವುದೆಂಬ ಮಾತಿಗೇನರ್ಥ ಉಳಿಯುತ್ತದೆ? ಹೀಗೆ ತಾತ್ವಿಕವಾಗಿ ಜಟಿಲವೂ, ಸಂಕೀರ್ಣವೂ ಆದ ಖಭೌತಾತ್ಮಕ ಸಂದೇಹ- ಪ್ರಶ್ನೆಗಳಿಗೆಲ್ಲ ಬರೀ ತತ್ವದ ನೆಲೆಯಿಂದಲೇ ಉತ್ತರಿಸುವುದು ಸಾಧ್ಯವೂ ಅಲ್ಲ; ಸಾಧುವೂ ಅಲ್ಲ. ವೈಜ್ಞಾನಿಕ ವಿವರಣೆಗಳ ನೆರವೂ ಬೇಕಲ್ಲವೇ? ಆದರೆ ಕ್ರಿಸ್ತಪೂರ್ವದ ಕಾಲಘಟ್ಟದಲ್ಲಿ ಖಭೌತ ವಿಜ್ಞಾನವು ಇಂದಿನಷ್ಟು ಪ್ರಬುದ್ಧ ಶಿಸ್ತಾಗಿ ಬೆಳೆದಿರಲಿಲ್ಲವಷ್ಟೇ ಅಲ್ಲ; ವಿಶ್ವದ ನಿಯಮ, ಉದ್ದೇಶ ಹಾಗೂ ಸ್ವಭಾವಗಳನ್ನು ಅರಿಯಲು ಬೇಕಾದ ಸಲಕರಣೆ-ಸಾಧನಗಳಾಗಲೀ, ಅತ್ಯಾಧುನಿಕ ಖಭೌತ ಸಂಶೋಧನೆಗಳ ನೆರವಿನ ಬೆಂಬಲವೂ ಇರಲಿಲ್ಲ.

ಒಟ್ಟಾರೆಯಾಗಿ ಈ ಮೂರು ಶತಮಾನಗಳ ಅವಧಿಯಲ್ಲಿ ಅಂದರೆ ಕ್ರಿ.ಪೂ.೫, ೬ ಮತ್ತು ೭ನೇ ಶತಮಾನದಲ್ಲಿ ಆಗಿಹೋದ ತತ್ವವೇತ್ತರು ಎತ್ತಿದ ಪ್ರಶ್ನೆಗಳಿವು: ವಿಶ್ವದ ಮೂಲ ಅವಸ್ಥೆ ಚೈತನ್ಯದಿಂದಲೇ ವಸ್ತು ಉಗಮವಾಯಿತೋ ಅಥವಾ ಸಂಬಂಧವೇನು? ಸತ್ಯ ಮತ್ತ ಭ್ರಮೆ- ಇವುಗಳನ್ನಳೆಯುವ ಒರೆಗಲ್ಲು ಅಥವ ಮಾನದಂಡ ಯಾವುದು? ನಿಜವಾದ ಜ್ಞಾನದ ವಿಚಾರವೇ ಭೌತಮೂಲದ ಮನುಷ್ಯನ ಪ್ರೇರಕ ಶಕ್ತಿಯೋ? ಇವುಗಳ ವಿವೇಚನೆಯೇ ತತ್ವಶಾಸ್ತ್ರದ ಮೂಲಭೂತ ಜಿಜ್ಞಾಸಾ ಪರಿಕಲ್ಪನೆಗಳು. ವಿಶ್ವಕ್ಕೆ ಆದಿ-ಅಂತ್ಯಗಳೆಂಬುವು ಇದೆಯೇ? ಅಥವಾ ಅನಂತದಂತೆಯೇ ಈ ವಿಶ್ವವು ನಿತ್ಯ ನಿರಂತರ ಪ್ರವಾಹವೇ?'

“ಕ್ರಿ.ಪೂ 6 ಮತ್ತು 7 ನೇ ಶತಮಾನಗಳಲ್ಲಿ ಉಕ್ಕುಕ್ಕಿ ಹರಿದ ಅವೈದಿಕ ದರ್ಶನಗಳಿಗೆಲ್ಲಾ ಮೂಲ ತಾತ್ವಿಕ ಅಭಿಪ್ರಾಯವನ್ನೊದಗಿಸಿದವರು ನಿಸ್ಸಂಶಯವಾಗಿಯೂ ಲೋಕಾಯತರೇ. ಆ ಚಾರಿತ್ರಿಕವಾದ ಘನತೆ ಮತ್ತು ಪ್ರಾಮುಖ್ಯತೆಗಳೆಲ್ಲಾ ಅವರಿಗೇ ಸಲ್ಲಬೇಕು. ಭಾರತದ ಪ್ರಥಮ ಅವೈದಿಕ ಧಾರೆಯೆಂದರೆ ಖಂಡಿತ ಅದು ಲೋಕಾಯತವೇ. ಅದು ಪ್ರಾರಂಭಿಸಿದ ತಾತ್ವಿಕ ದಂಗೆಯೇ ಅನಂತರದ ಪಂಥ ಹಾಗೂ ಧರ್ಮಗಳಿಗೆಲ್ಲಾ ಮೂಲ ಪ್ರೇರಣೆ. ಚಾರ್ವಾಕರ ಪರಂಪರೆಯ ಮುಂದುವರಿದ ಭಾಗವಾಗಿಯೇ ಅನಂತರದ ಶ್ರಮಣ ಧಾರೆಗಳನ್ನು ನಾವು ಪರಿಗಣಿಸುವುದೇ ಹೆಚ್ಚು ಸೂಕ್ತ. ಲೋಕಾಯತೋತ್ತರದ ಪಂಥ-ಧರ್ಮಗಳು ಚಾರ್ವಾಕ ಸಿದ್ಧಾಂತವನ್ನೇ ಯಥಾವತ್ತು ಒಪ್ಪಲಿಲ್ಲವಾದರೂ ಪ್ರತ್ಯಕ್ಷ ಹಾಗೂ ಕೆಲವೊಮ್ಮೆ ಪರೋಕ್ಷವಾಗಿ ಅವರೆಲ್ಲರೂ ಭೌತವಾದವನ್ನೇ ಮುಂದಿಟ್ಟವರು: ಸೃಷ್ಟಿಕರ್ತನೊಬ್ಬನ ಅಸ್ತಿತ್ವವನ್ನು ಸ್ಪಷ್ಟೋಕ್ತಿಗಳಲ್ಲಿ ನಿರಾಕರಿಸಿದವರು. ಅವೈದಿಕ ಪಂಥ-ಧರ್ಮಗಳೆಲ್ಲದರಲ್ಲೂ ಈ ಅಂಶ ಸಾಮಾನ್ಯವೆನ್ನುವಂತಹದು. ಆದರೆ ವಿಶ್ವಸೃಷ್ಟಿಯ ಹಾಗೂ ಚಲನೆಯ ಸಿದ್ಧಾಂತಗಳನ್ನು ಮಂಡಿಸುವಲ್ಲಿ ಬೌದ್ಧ, ಜೈನರಂತಹ ಕೆಲವರಾದರೂ ಚಾರ್ವಾಕರಿಗಿಂತಲೂ ಭಿನ್ನವಾದ

ಗ್ರಹಿಕೆಗಳನ್ನು ಮುಂದಿಟ್ಟರು ಎಂಬುದು ಕೂಡ ಗಮನಾರ್ಹ ಅಂಶವೇ ಆಗಿದೆ. ತನ್ಮೂಲಕ ಅವರು ಭಿನ್ನ ಜೀವನ ಮೀಮಾಂಸೆಗಳತ್ತಲೂ ಜನ ಸಮುದಾಯದ ಗಮನವನ್ನು ಸೆಳೆದರು. ಲೋಕಾಯತರು ಮತ್ತು ಆನಂತರದ ದಾರ್ಶನಿಕರು ಮತ್ತು ಪಂಥಗಳು ವೈದಿಕರ ಲೋಕಸೃಷ್ಟಿಯ ವಾದವನ್ನು ಹೇಗೆ ಪಲ್ಲಟಗೊಳಿಸುತ್ತಿದ್ದರೆಂಬ ಭಿನ್ನ ಭಿನ್ನ ವಾದವೈಖರಿಗಳ ಮೂಲಭೂತ ಪರಿಚಯವಿಲ್ಲದಿದ್ದರೆ ಆನಂತರದ ಶ್ರಮಣ ದರ್ಶನಗಳ ಚಾರಿತ್ರಿಕ ಹಿನ್ನೆಲೆ, ಪ್ರೇರಣೆ ಹಾಗೂ ಚಾರಿತ್ರಿಕ ಪಾತ್ರ–ಸ್ಥಾನಗಳನ್ನು ಸ್ಪಷ್ಟವಾಗಿ ಅರಿಯುವುದು ಕೂಡ ಕಷ್ಟವಾಗುತ್ತದೆ. ಮಕ್ಖಲಿ ಗೋಸಾಲನ ಆಜೀವಿಕ ಧರ್ಮದ ಮೌಲ್ಯಮಾಪನವನ್ನು ಕೂಡ ನಾವು ಸಮರ್ಥ ರೀತಿಯಲ್ಲಿ ನಿರ್ವಹಿಸಲಾಗುವುದಿಲ್ಲ. ಹಾಗಾಗಿ ವಿಶ್ವಸೃಷ್ಟಿ ಮತ್ತು ಚಲನೆಗೆ ಸಂಬಂಧಿಸಿದಂತಹ ಅವೈದಿಕ ಧಾರೆಗಳ ಸಂಕ್ಷಿಪ್ತ ನೋಟವೊಂದನ್ನು ಇಲ್ಲಿ ನೀಡುವುದು ಅನಿವಾರ್ಯವಾಗಿದೆ. ಆಜೀವಿಕ ಧರ್ಮದ ಉಗಮಕ್ಕೆ ಕುದಿನೆಲದ ನಿರ್ಮಾಣವಾದದ್ದಾದರೂ ಹೇಗೆಂಬ ಮಾತಿಗೆ ಈ ಚಾರಿತ್ರಿಕ ಹಿನ್ನೆಲೆ ವಾದಗಳೇ ಸ್ವಯಂ ಕನ್ನಡಿ ಹಿಡಿಯಬಲ್ಲವೆಂಬುದು ನನ್ನ ವಿಶ್ವಾಸ. ಹಿಂದಣ ಹೆಜ್ಜೆಯನರಿಯದೆ ಮುಂದೆ ಹೆಜ್ಜೆ ಇಡುವುದಾದರೂ ಹೇಗೆ?" ಎಂಬ ತಾತ್ವಿಕ ನಿರ್ಧಾರಕ್ಕೆ ಲಕ್ಷ್ಮೀಪತಿ ಕೋಲಾರ ಅವರು ಬರುವುದು ಅವೈದಿಕ ಪಂಥಗಳ ಹಿನ್ನೆಲೆಯಿಂದಲು ಎಚ್ಚರಿಕೆಯ ದಾರಿಯನ್ನು ಹುಡುಕುವಲ್ಲಿ ಚಾರಿತ್ರಿಕ ಮರುಶೋಧನೆ ಸಾಧ್ಯವಾಗಿಸಿದ್ದಾರೆ.

ಅವೈದಿಕ ಪರಂಪರೆಯ ಉಗಮದ ಬಗೆಗೆ ತಾತ್ವಿಕ ಅಭಿಪ್ರಾಯವನ್ನು ಹಾಕಿದವರು. ಈ ಅವೈದಿಕ ದರ್ಶನಗಳಿಗೆಲ್ಲಾ ಮೂಲ ತಾತ್ವಿಕ ಅಭಿಪ್ರಾಯದ ಕುರುಹುಗಳನ್ನು ವಿವರವಾಗಿ ಪ್ರಸ್ತಾಪಿಸಿದ್ದಾರೆ.

## ಮಾಸ್ತೀಕರು ಜನಾಂಗೀಯ ಅಧ್ಯಯನ

ಅಲೆಮಾರಿ ಜನಾಂಗಗಳ ಸಂಸ್ಕೃತಿಯ ನೂರಾರು ಶಾಖೆಗಳಲ್ಲಿ ಮಾಸ್ತೀಕರ ಸಂಸ್ಕೃತಿಯು ಒಂದಾಗಿದೆ. ಸಾಮಾಜಿಕ ಶ್ರೇಣೀಕೃತ ಸಮಾಜದ ಅತ್ಯಂತ ಕೆಳ ಸ್ತರದ ಜನಾಂಗಗಳಾದ ಅಸ್ಪೃಶ್ಯರು ಮತ್ತು ಪರಿಶಿಷ್ಟ ಜಾತಿಗಳಾದ ಹೊಲೆಯ ಮತ್ತು ಮಾದಿಗರಲ್ಲಿನ ಒಂದು ಉಪಜಾತಿಯನ್ನಾಗಿ' ಮಾಸ್ತೀಕ ಜನಾಂಗವನ್ನು ಗುರುತಿಸಬಹುದು. ಇಂತಹ ತಳಸಮುದಾಯಗಳ ಬಗೆಗೆ ಜನಾಂಗೀಯ ಅಧ್ಯಯನವನ್ನು ಮಾಡಿರುವ ಲಕ್ಷ್ಮೀಪತಿ ಕೋಲಾರ ಅವರು ತಳ ಸಂಸ್ಕೃತಿಯ ಸೂಕ್ಷ್ಮತೆಗಳನ್ನು ಬಲವರಾಗಿರೆ. ಭಾಷಿಕವಾಗಿ ಒಂದು ಜನಾಂಗ ಸಂಸ್ಕೃತಿಯನ್ನು ಶೋಧಿಸುವುದು ಅತ್ಯಂತ ತ್ರಾಸದ ಕೆಲಸವಾದರು ತಮ್ಮ ಕಾಳಜಿ ಕಳಕಳಿಯಿಂದ "ಮಾಸ್ತೀಕರು ಒಂದು ಅಧ್ಯಯನ" ಎಂಬ ಜನಾಂಗಿಯ ಅಧ್ಯಯನದ ಶೋಧ ನಡೆಸಿದ್ದಾರೆ.

"ಪರಿಶಿಷ್ಟ ಜಾತಿಗಳಾದ ಹೊಲೆಯ ಮತ್ತು ಮಾದಿಗರಲ್ಲಿನ ಒಂದು ಉಪಜಾತಿಯನ್ನಾಗಿ "ಮಾಸ್ತೀಕ" ಜನಾಂಗವನ್ನು ಗುರುತಿಸಲಾಗುತ್ತದೆ. ಆಂಧ್ರ ಮತ್ತು ಕರ್ನಾಟಕದ ಬೇರೆ–ಬೇರೆ ಭಾಗಗಳಲ್ಲಿ ಇವರನ್ನು 'ಮಾಸ್ತೀನ್' 'ಮಾಸ್ತೀ' 'ಮಾಲಮಾಸ್ತೀ' ಮತ್ತು ಮಾಷಾಲೋಳ್ಳು" ಎಂಬುದಾಗಿಯೂ ಕರೆಯುವುದುಂಟು. ಕಿಟ್ಟೆಲ್ ನಿಘಂಟಿನ ಪ್ರಕಾರ 'ಮಾಸ್ತೀಡು' ಎಂದರೆ ಕುಸ್ತಿಪಟು ಶೂರ ಎಂದರ್ಥ. ಆದರೆ ಮಾಸ್ತೀಕರ ಐತಿಹ್ಯಗಳ ಪ್ರಕಾರ ಹೂತು ಹೋಗಿದ್ದ ಕಂಚಿಯ ತೇರೆತ್ತಿ ಎಳೆದದ್ದರಿಂದ ಹನುಮಂತರಾವು ಎಂಬ ಪರಿಶಿಷ್ಟ ಜಾತಿಯವರೊಬ್ಬರಿಗೆ ಗೊಲ್ಲರ ಯಯಾತಿರಾಜ ಕೊಟ್ಟ ಬಿರುದು 'ಮಹಾವೀರ್' ಎಂದು. ಈ ಮಹಾವೀರ್ ಎಂಬ ಬಿರುದೇ ಮುಂದೆ ಬಳಕೆಯಲ್ಲಿ 'ಮಾಸ್ತೀಕ್' ಎಂದಾಯಿತೆಂಬುದು ಅವರ ವ್ಯಾಖ್ಯಾನ. ಮತ್ತೊಂದು ವ್ಯಾಖ್ಯಾನದ ಸಾಧ್ಯತೆ ಹೀಗಿದೆ. 'ಮಾಸು' ಎಂದರೆ ಗರ್ಭ ಕಸ ಎಂಬರ್ಥವಿದೆ.

ಜೆಷ್ಟಮುನಿ ಎಂಬುವವರ ಕರಳು ಕಲ್ಪತಗಳ ಮಾಸಿನಲ್ಲಿ ಮಾದಿಗ ಮಾಸ್ತೀಕರೂ, ಪಾರ್ವತಿಯ ಮುಟ್ಟು ಬಟ್ಟೆಯ ಮಾಸಿನಲ್ಲಿ ಹೊಲೆಯ ಮಾಸ್ತೀಕರೂ ಹುಟ್ಟಿದ್ದೆಂಬ ಐತಿಹ್ಯಗಳ ಹಿನ್ನೆಲೆಯಲ್ಲಿ ಮಾಸಿನಿಂದ ಜನಿಸಿದವರು ಮಾಸ್ತೀಗಳಾಗಿರಬಹುದಾದ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಇದಕ್ಕೆ ಪೂರಕವಾಗಿ ಎಂಬಂತೆ ಮಾಸ್ತೀಕರು ತಮ್ಮ ರಹಸ್ಯ ಭಾಷೆಯಲ್ಲಿ ತಮ್ಮನ್ನು ಕರೆದುಕೊಳ್ಳುವುದು ಕೂಡ 'ಮಾಷಾಲೋಳ್ಳು' ಎಂದೇ (ಮಾಸು–ಮಾಷಾಲ ಎಂದಾಗಿರಬಹುದು) ಇವರೊಂದಿಗೆ ಮಾಸ್ತೀಕರು ವೃತ್ತಿಪರವಾಗಿ ಭಿಕ್ಷೆ ಬೇಡುವುದರಿಂದ 'ಮುಷ್ಟಿ' (ಭಿಕ್ಷೆ) ಎತ್ತುವವರು ಮಾಸ್ತೀಕರೆಂಬ ವಿಶ್ಲೇಷಣೆಯೂ ಇದೆ. ಆದರೆ ಇದು ಕೆಳಜಾತಿಗಳನ್ನು ಕೇವಲ ಕೀಳರ್ಥಗಳಲ್ಲೇ ಪರಿಭಾಷಿಸುವ ಒಂದು ಜಾತ್ಯಂಧ ಗ್ರಹಿಕೆಯಷ್ಟೇ ಆಗಿದೆ.ಎಂದು ಲಕ್ಷ್ಮೀಪತಿ ಕೋಲಾರ ಅವರು ಅಭಿಪ್ರಾಯ ಪಟ್ಟಿದ್ದಾರೆ." ಭಾಷಿಕ ಹಿನ್ನೆಲೆಯಿಂದ ಭಾಷಾವ್ಯತ್ಯಾಸಗಳ ಮೂಲಕ ಈ ಕುಲಗಳಿಗೆ ಹೀಗೆ ಐತಿಹ್ಯಗಳ ಹಿನ್ನೆಲೆಯಿಂದ ಶೋಧಿಸುವರು ಲಕ್ಷ್ಮೀಪತಿ ಕೋಲಾರ ಅವರು ತಳಸಂಸ್ಕೃತಿಗಳ ಆದಿಮತೆಯನ್ನು ಅರಿಯುವ ಪರಿಯಾಗಿದೆ.

ಮಾಸ್ತೀಕರು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಕಂಡು ಬರುತ್ತಾರೆ. ಇವರು ಭಾಷೆ ಮತ್ತು ನಡಾವಳಿಗಳಲ್ಲಿ ತೆಲುಗಿನರನ್ನು ಅಂದರೆ ಆಂಧ್ರದವರನ್ನು ಹೋಲುತ್ತಾರೆ ಎಂದು ಹೇಳಬಹುದಾಗಿದೆ. ಮಾಸ್ತೀಕರು ಕಿನ್ನರಿ ನುಡಿಸುತ್ತಾ ತಲೆಮಾರು ಪೋಷಕರನ್ನು ಹೊಗಳಿ, ಹರಸಿ ಗಂಗ ಭಾರತವೆಂಬ ಗೇಯ ಕಥೆಗಳನ್ನು ಹಾಡುತ್ತಾರೆ. ಮಾಸ್ತೀಕರ ಸಂಸ್ಕೃತಿಯ ಕೆಲವು ಮುಖ್ಯ ಅಂಶಗಳನ್ನು ಲಕ್ಷ್ಮೀಪತಿಯವರು ಹೀಗೆ ಕ್ರೋಢೀಕರಿಸಿ ಕೊಟ್ಟಿದ್ದಾರೆ.

೧) ಮಾಸ್ತೀಕರು ಹೊಲೆಯ ಮತ್ತು ಮಾದಿಗರ ಅನೈತಿಕ ಸಂತಾನವೆಂಬ ಅಭಿಪ್ರಾಯವಿದೆ. ಅದೇ ಗ್ರಹಿಕೆಯ ಅಂತಿಮವೆಂದೇನೂ ಭಾವಿಸಬೇಕಾದ್ದಿಲ್ಲ. ಅವರು ತಂತ್ರಪಂಥವೊಂದರ ಅತಿಮಾರ್ಗಿಗಳಾದ್ದರಿಂದಲೂ ಅವರ ಮೂಲ ಸಮಾಜದಿಂದ ಬಹಿಷ್ಕೃತರಾಗಿ ಪುನಃ ಮಾತೃಧರ್ಮಕ್ಕೆ ಮರಳಿದಾಗ ಎರಡನೇ ದರ್ಜೆಯಲ್ಲಿ ನೆಲೆ ನಿಂತಿರಬಹುದು.

೨) ಕಂಚಿ ಮಾಸ್ತೀಕರ ಮೂಲ ಸಾಂಸ್ಕೃತಿಕ ಕೇಂದ್ರ. ಮಾಸ್ತೀಕರ ಮೂಲ ಕೂಡ ತಂತ್ರಪಂಥವೊಂದರಲ್ಲಿದೆಯೆಂಬುದು ಸೂರ್ಯಸ್ಪಷ್ಟ. ಆದರೆ ತಂತ್ರಪಂಥ ಶೈವ ಶಾಕ್ತರದೋ, ವಜ್ರಾಯನವೋ ಅಥವಾ ದಂಡಾಜೀವಿಕವೋ ಬಗೆಹರಿಯುವುದಿಲ್ಲ.

೩) ಮಾಸ್ತೀಕರಲ್ಲಿ 'ಜಾತಿ' ಎಂಬ ಪದವಿಲ್ಲ. ಬದಲಿಗೆ 'ಬಂಧು' ಎಂಬ ಪದವನ್ನು ಪ್ರಯೋಗಿಸುತ್ತಾರೆ. ನೆಂಟರಿಷ್ಟರು ಒಗ್ಗಟ್ಟಿಗೆ ಸೇರುವುದನ್ನು 'ಬಂಧು' ನಡೆಸುವುದು ಎನ್ನುತ್ತಾರೆ. ಬಹುಶಃ ಈ 'ಬಂಧು ಸಮಾಜ' ಜಾತಿಪದ್ಧತಿಗೆ ಆಚೆಗಿನ ಮೂಲ ಪರಿಶಿಷ್ಟ ಪರಿಕಲ್ಪನೆಯೇ ಆಗಿದೆ.

೪) ಮಾದಿಗ ಮಾಸ್ತೀಕರು ಕುಸ್ತಿ ಪ್ರಧಾನ ಕಸುಬಿನವರೂ ಹೊಲೆಯ ಮಾಸ್ತೀಕರು ಮಾವುತ ಪ್ರಧಾನ ಕಸುಬಿನವರೂ ಆಗಿದ್ದರು. ಆದರೂ ಇಬ್ಬರಿಗೂ ಎರಡು ವೃತ್ತಿಗಳ ಪರಿಚಯವೂ ಇದ್ದಿತ್ತು. ಮಾದಿಗ ಮಾಸ್ತೀಕರನ್ನೂ ಅಲ್ಲಿ ಇಲ್ಲಿ ಭಿಕ್ಷೆ ಪಡೆಯುತ್ತಿರುವರಾದರೂ ಹೊಲೆಯ ಮಾಸ್ತೀಕರು ಸಂಪೂರ್ಣ ತೊರೆದಂತಿದೆ. ಹೊಲೆಯ ಮಾಸ್ತೀಕರು ಮಾದಿಗ ಮಾಸ್ತೀಕರಿಗಿಂತ ಬೇಗ ಆಧುನಿಕ ಬದುಕಿಗೆ ಸ್ಪಂದಿಸತೊಡಗಿದ್ದಾರೆ.

೫) ಮಾಸ್ತೀಕರು ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದರೂ, ದಕ್ಕಲರು ಅಸ್ಪೃಶ್ಯ ಜಾತಿಗಳಲ್ಲಿನ ಕಟ್ಟಕಡೆಯ ಕುಲವಾಗಿದೆ. ಹಾಗಿದ್ದರೂ ಮಾದಿಗ ಮಾಸ್ತೀಕರಿಗೆ ದಕ್ಕಲರು ಮತ್ತು ಸಿಂದ್ ಮಾದಿಗರು ಸಾಂಸ್ಕೃತಿಕವಾಗಿ ತುಂಬಾ ಸಮೀಪದವರು.

೬) ಎಡಗೈ, ಬಲಗೈಗಳ ಪಣಸಮಾಜ ಈಗ ನಾಶವಾಗಿದ್ದರೂ, ಆ ಪಟ್ಟಿಯಲ್ಲಿನ ಕಟ್ಟಕಡೆಯ ಕುಲಗಳಾದ ಹೊಲೆಯ ಮತ್ತು ಮಾದಿಗ ಕುಲಗಳಿಗೆ ಮಾತ್ರ ಎಡಬಲಗಳು ಗಟ್ಟಿಯಾಗಿ ಅಂಟಿಕೊಂಡವು. ಅದರ ಪ್ರತಿಫಲನಗಳೆಂಬಂತೆಯೇ ಹೊಲೆಯ ಮತ್ತು ಮಾದಿಗ ಮಾಸ್ತೀಕರ ಪುರಾಣಗಳಲ್ಲೂ ತೀವ್ರ ಸ್ವರೂಪದ ಪಣಕೇಂದ್ರಿತ ಸಂಘರ್ಷಾತ್ಮಕ ಸ್ಥಿತಿಯಿದೆ. ಅದು ಪಣಸಮಾಜದ ಮೇಲ್ಜಾತಿಗಳಲ್ಲಿ ಕಣ್ಮರೆಯಾಗಿದ್ದರೂ ಮಾಸ್ತೀಕರಲ್ಲಿ ದಾಯಾದಿ ಮತ್ಸರವೆಂಬಂತೆ ಉಳಿದುಕೊಂಡೇ ಬಂದಿದೆ.

೭) ಮಾಸ್ತೀಕರಲ್ಲಿ ಅಂತರ್ ಪಣ ವಿವಾಹಕ್ಕೆ ಅವಕಾಶವೇ ಇಲ್ಲ. ಅಕಸ್ಮಾತ್ ಹಾಗೇನಾದರೂ ಆದರಲ್ಲಿ ಎರಡು ಗುಂಪುಗಳಿಂದಲೂ ಪಣಕಟ್ಟು ಮುರಿದವರಿಗೆ ಕುಲ ಬಹಿಷ್ಕಾರ ಕಾದಿಟ್ಟ ಶಿಕ್ಷೆ.

೮) ಪಣಕಟ್ಟಿನ ಮೂಲ ಸತ್ಯಗಳು ಕತ್ತಲಲ್ಲಿ ಹೂತು ಹೋಗಿವೆ. ಆದರೂ ಅವರ ಲಭ್ಯ ಸ್ವರೂಪವನ್ನು ಹೀಗೆ ಗ್ರಹಿಸಬಹುದಾಗಿದೆ. ೧೮ ಜಾತಿಗಳ ೧೮ ಪಣಕಟ್ಟು ಬಲಗೈ ಗುಂಪಾದರೆ, ೯ ಜಾತಿಗಳ ೯ ಪಣಕಟ್ಟು ಎಡಗೈ ಗುಂಪಾಗಿದೆ. ಈ ವಿಂಗಡಣೆಯೇ ಪಣಸಮಾಜದ ಕೇಂದ್ರ ತಿರುಳಾಗಿದೆ. ಈ ಪಣಸಮಾಜದ ಎಡಗೈ, ಬಲಗೈ ಗುಂಪುಗಳು ತಮ್ಮ ಮೂಲವನ್ನು ಕಾಳಿಯ ಶಕ್ತಿ ಉಪಾಸಕರ ಎಡಗೈ ಮತ್ತು ಬಲಗೈ ವಿಧಾನವನ್ನನುಸರಿಸಿದ್ದರಲ್ಲಿಯೇ ಕಂಡುಕೊಳ್ಳುತ್ತಾರೆ.

೯) ಮಾಸ್ತೀಕ ಎಂಬ ಪದಕ್ಕೆ ಮಾವುತ ಮತ್ತು ಮಲ್ಲ ಎಂಬ ಎರಡು ಅರ್ಥಗಳೂ ಇರುವುದನ್ನು ಗಮನಿಸಿದರೆ ಮಾಸ್ತೀಕ ಜನಾಂಗ ಮಾಡುತ್ತಿದ್ದ ಈ ವೃತ್ತಿಗಳಿಗೇ ಆ ಜಾತಿಯ ಹೆಸರು ಪದವಿಶೇಷವಾಗಿ ಅಂಟಿಕೊಂಡಂತಿದೆ. ಹಾಗಲ್ಲದೆಯೂ 'ಮಾಸ್ತೀಕ' ಎಂದರೆ ಮಹಾಲೀಕಾ'ಗಿ ಇರುವವನು ಎಂದಾಗಿದೆ. ಪುರಾಣ ಹಿನ್ನೆಲೆಯಲ್ಲಿ ಗರ್ಭಕವಾದ 'ಮಾಸು'ವಿನಲ್ಲಿ ಜನಿಸಿದವನು ಎಂಬರ್ಥ ಹೊರಡುತ್ತದೆ.

೧೦) ಮಾಸ್ತೀಕರಲ್ಲೀಗ ಏಕಕಾಲದಲ್ಲಿಯೇ ಕನ್ಯಾಶುಲ್ಕ ಮತ್ತು ವರದಕ್ಷಿಣೆ ಪದ್ಧತಿಗಳೆರಡೂ ಚಾಲ್ತಿಯಲ್ಲಿವೆ. ಇದು ಮಾತೃಪ್ರಧಾನ ಸಂಸ್ಕೃತಿಯೊಂದು ಪಿತೃಪ್ರಧಾನ ಸಂಸ್ಕೃತಿಯ ದಾಳಿಗೆ ತುತ್ತಾಗುತ್ತಿರುವುದರ ಕುರುಹಾಗಿದೆ.

೧೧) ಸಾವಿನ ಸಂದರ್ಭದಲ್ಲಿ ಹೆಣ ಸಂಸ್ಕಾರಕ್ಕೆ ಮುಂಚೆಯೇ ಬಂಧುಗಳೆಲ್ಲ ನೆರೆದು ಗುರು ಕಲೆಸಿದ ಅನ್ನದ ರಾಶಿಯಿಂದ ಎಲ್ಲರೂ ಕೈಹಾಕಿ ಮುಟ್ಟಿ ಅನ್ನ ತೆಗೆದು ತಿನ್ನುವುದು ಪ್ರಾಚೀನ ಬುಡಕಟ್ಟುಗಳ ಸಂಪ್ರದಾಯವೊಂದನ್ನು ಹೋಲುವಂತಿದೆ. ಆದರೂ, ಮಾದಿಗ ಮಾಸ್ತೀಕ ಸಂಸ್ಕೃತಿ ಹೊಲೆಯ ಮಾಸ್ತೀಕರಿಗಿಂತಲೂ ಅತ್ಯಂತ ಪ್ರಾಚೀನವಾದದ್ದಾಗಿದೆಯೆಂಬುದು ಮಾತ್ರ ಕುತೂಹಲದ ಸಂಗತಿಯಾಗಿದೆ.

೧೨) ಪಂಚ ಜಾಂಬುಕುಲಕ್ಕೆ ಮಾತ್ರ ವಿಶೇಷವೆನ್ನುವಂತಹ 'ತಂಗಡಿದ್ಯಾವರ' ಮತ್ತು 'ಕಮ್ಮಾಲದ್ಯಾವರ' (ನೇರಳೆ ಕಂಬದ ದ್ಯಾವರ)ವನ್ನು ಮಾದಿಗ ಮಾಸ್ತೀಕರು ತಮ್ಮ ಸಾಂಸ್ಕೃತಿಕ ಬದುಕಿನ ಬಹುಮುಖ್ಯ ಆಚರಣೆಯನ್ನಾಗಿಸಿಕೊಂಡಿದ್ದಾರೆ. ಈ ತಂಗಡಿ ದ್ಯಾವರದ ಕಥೆ ಮತ್ತು ಪದ ಜಾಂಬುಕುಲದ ಬೈಬಲ್ ಎನ್ನುವಂತಿದೆ.

೧೩) ಪರಿಶಿಷ್ಟ ಜಾತಿಗಳಲ್ಲಿಯೇ ಬಹುಶಃ ಮಾಸ್ಟೀಕರೊಬ್ಬರೇ ಮಾವುತರಾಗಿ, ಪೈಲ್ವಾನರಾಗಿ, ಚಮತ್ಕಾರಿ ಸರ್ಕಸ್ ಕಲಾವಿದರಾಗಿ, ತಮ್ಮ ಸಾಹಸ, ಪರಾಕ್ರಮಗಳಿಂದ ರಾಜರಂತಹವರಿಂದೆಲ್ಲ ಹೊಗಳಿಸಿಕೊಂಡು, ಅಂಬಾರಿ ಮೆರವಣಿಗೆಯ ಗೌರವಕ್ಕೆ ಪಾತ್ರರಾದಂತಹ ವೃತ್ತಿಪರಂಪರೆಯನ್ನು ಹೊಂದಿರುವವರು.

೧೪) ಮಾಸ್ಟೀಕರು ಪರಿಶಿಷ್ಟ ಜಾತಿಗಳಲ್ಲಿನ ಉಪಪಂಗಡವೇ ಆಗಿದ್ದರೂ ಅವರಲ್ಲಿ ಇಂದಿಗೂ ಒಬ್ಬರೂ ಪದವೀಧರರಾಗಿಲ್ಲದಿರುವುದು ಪರಿಶಿಷ್ಟ ಮೇಲ್ಜಾತಿಗಳಿಗೂ ಮತ್ತು ಮಾಸ್ಟೀಕರಿಗೂ ನಡುವಿನ ಅಗಾಧ ಅಂತರವನ್ನು ಕಾಣಿಸಬಲ್ಲದು.

೧೫) ಮಾಸ್ಟೀಕರ ಪುರಾಣ ಜಗತ್ತು ಮುಗ್ಧ ಪ್ರಪಂಚವಾಗಿರುವಂತೆಯೇ ಅದು ಶಿಷ್ಟ ಪುರಾಣಗಳಲ್ಲಿನ ಅಸಾಂಸ್ಕೃತಿಕ ಅಂಶಗಳನ್ನೆಲ್ಲ ಮಾನವೀಯ ಸ್ತರಗಳಲ್ಲಿ ಅಪಮೌಲ್ಯಗೊಳಿಸಿಬಿಡುತ್ತದೆ. ದುರಂತವೆಂದರೆ, ಮಾಸ್ಟೀಕ ಸಂಸ್ಕೃತಿಯ ಜೀವಧಾತುವಾಗಿರುವ ಈ ಆದಿಮೂಲದ ಶಾಖವನ್ನು ಉಳಿಸಿಕೊಂಡೂ, ಆ ಜನಾಂಗಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಸ್ಥಿರತೆ ಒದಗಿಸುವುದು ಈ ತತ್ ಕ್ಷಣದ ಸವಾಲಾಗಿದ್ದರೂ, ಅದನ್ನು ಗುರುತಿಸಬಲ್ಲ ಹೃದಯವಂತ ವ್ಯವಸ್ಥೆ ಇಲ್ಲದಿರುವುದು.

೧೬) ಮಾದಿಗ ಮಾಸ್ಟೀಕರು 'ತಾಂಬ್ರಾ' ಎನ್ನುವ ಅಲಿಪಿ ರಹಸ್ಯ ಭಾಷೆಯೊಂದನ್ನು ತಮ್ಮೊಳಗೆ ಮಾತ್ರ ಬಳಸುತ್ತಾರೆ. ಕನ್ನಡ ಮತ್ತು ತೆಲುಗಿನ ಗಾಢ ಪ್ರಭಾವದ ಈ ಮಿಶ್ರ ದ್ರಾವಿಡ ಉಪಭಾಷೆಯ ಪ್ರಸ್ತಾಪ ಕೂಡ ಎಲ್ಲೂ ಬಂದಂತಿಲ್ಲ. ದ್ರಾವಿಡ ಭಾಷಾ ವಂಶವೃಕ್ಷದಲ್ಲೂ ಸೇರ್ಪಡೆಯಾದಂತಿಲ್ಲ. ಈ ಭಾಷೆಯ ಗೌಪ್ಯತೆ ಶಕ್ತ ಮೂಲದ್ದಾಗಿರುವುದರಿಂದ, ಆ ಭಾಷೆಯಲ್ಲಿ ಮಾಸ್ಟೀಕರ ಪುರಾಣ ಸಾಹಿತ್ಯಗಳ ಸೃಷ್ಟಿ ಆಗಿಯೇ ಇಲ್ಲ.

೧೭) ಕಂಚಿಯ ತೇರೆಳೆವ ಮಾದಿಗ ಮಾಸ್ಟೀಕರ ಕಥೆಯೊಂದಿಗೆ ಮೋಟಾ ಇದ್ದಿರಬಹುದೆಂದು ನಿರ್ಧರಿಸಲಾಗಿರುವ ತಾಮ್ರಪಟದ ಶಾಸನವೊಂದರಲ್ಲಿನ ವೃತ್ತಾಂತಗಳು ತದ್ವತ್ತಾಗಿ ಹೋಲುವುದರಿಂದ–ಈ ಐತಿಹ್ಯಕ್ಕೂ ಮತ್ತು ಆ ಶಾಸನಕ್ಕೂ ಸಂಬಂಧವಿದ್ದಿರಬಹುದೆಂದು ತರ್ಕಿಸಬಹುದಾಗಿದೆ.

೧೮) ಪಣಸಮಾಜ ಕ್ಷೀಣಿಸಿರುವಂತೆಯೇ, ಮಾಸ್ಟೀಕರ ಸಾಂಸ್ಕೃತಿಕ ಸಂಸ್ಥಾನಗಳೂ ನಾಶವಾಗಿವೆ. ಮಾಸ್ಟೀಕರೀಗ ತಮ್ಮ ಜಂಗಮ ಸಂಸ್ಕೃತಿಗೆ ಶಾಶ್ವತ ವಿದಾಯ ಹೇಳತೊಡಗಿದ್ದಾರೆ. ಮಾಸ್ಟೀಕರ ಸಂಸ್ಕೃತಿ ನಾಶವಾಗುತ್ತ ಬಂದಿರುವಷ್ಟು ವೇಗದಲ್ಲಿ ಅವರ ಬದುಕು ಆಧುನಿಕವಾಗಿಯೂ ಇಲ್ಲ; ಆರ್ಥಿಕ, ಸಾಮಾಜಿಕವಾದ ಪ್ರಗತಿಯೂ ಆಗಿಲ್ಲ. ಬದಲಿಗೆ ಹಿಂದೆ ಇದ್ದ ಕನಿಷ್ಠ ನೆಲೆಯನ್ನು ಕಳೆದುಕೊಂಡು ತತ್ ಕ್ಷಣದ ಪರ್ಯಾಯವಿಲ್ಲದ ಅತಂತ್ರ ಸ್ಥಿತಿಗೆ ದೂಡಲ್ಪಟ್ಟಿದ್ದಾರೆ.

೧೯) ತಮ್ಮ ವೃತ್ತಿಗಳಿಂದಾಗಿಯೇ ಹಿಂದೊಮ್ಮೆ ರಾಜಸತ್ತೆಗೆ ಹತ್ತಿರವಾಗಿದ್ದ ಮಾಸ್ಟೀಕರಿಗೆ ಇಂದಿನ ರಾಜಕಾರಣದ ಮರ್ಮವಾಗಲೀ ತಳಬುಡವಾಗಲೀ ತಿಳಿಯುವಂತೆಯೇ ಇಲ್ಲ.

೨೦) ಮಾಸ್ಟೀಕರ ಗಾಢ ನಂಬಿಕೆಯ ಬೇರುಗಳು ಪರಿಶಿಷ್ಟ ಸಂಸ್ಕೃತಿಯಲ್ಲೇ ಹುದುಗಿದ್ದರೂ, ವಿಚಿತ್ರವೆನ್ನುವಂತೆ–ಸಮಕಾಲೀನ ಸಮಾಜದ ಪ್ರಭಾವದಿಂದಾಗಿ ವೈದಿಕ ಸಂಸ್ಕೃತಿಯ ದೈವಗಳನ್ನು ಆರಾಧಿಸುತ್ತಾರಾದರೂ ಈ ಎರಡೂ ಸಂಸ್ಕೃತಿಗಳ ನಡುವಿನ ವೈರುಧ್ಯವೆಲ್ಲೂ ಹೇಗೂ ಸಂಘರ್ಷಾತ್ಮಕ ಸ್ಥಿತಿ ತಲುಪುವುದೇ ಇಲ್ಲ.

೨೧) ಆದಿಮೂಲ ಸಂಸ್ಕೃತಿಯ ಕೇಂದ್ರ ನೆಲೆಯಿಂದ ಆಯಾ ಜನಾಂಗಗಳು ದೂರ ಸರಿದಷ್ಟೂ ಅವರ ಆರ್ಥಿಕ, ಸಾಮಾಜಿಕ ಉನ್ನತಿ ಸಾಧ್ಯವೆಂಬ ಗ್ರಹಿಕೆಯನ್ನೇ ಈ ಆಕ್ರಮಣಶೀಲ ಸಂಸ್ಕೃತಿ ಉಣಿಸುತ್ತ–ಆ ವಿಲಕ್ಷಣವಾದ ಮಿಥ್ಯ ದ್ವಂದ್ವಮಾನದ ಕಚ್ಚಾ ತಿಳುವಳಿಕೆಯೊಂದನ್ನು ಮಾಸ್ತೀಕರಂತಹ ಅನಕ್ಷರಸ್ಥ ಮುಗ್ಧ ಸಮೂಹದ ಆಲೋಚನಾ ವಿಧಾನಗಳವರೆಗೂ ತಲುಪಿಸುತ್ತಿದೆ. ಇಂತಹ ದಾಸ್ಯ ಮನೋಭಾವದ ತತ್ವವನ್ನು ಅತ್ಯಂತ ಯಶಸ್ವಿಯಾಗಿ ಜನಾಂಗದಿಂದ ಜನಾಂಗಕ್ಕೆ ದಾಟಿಸುತ್ತಿರುವ ಯಜಮಾನ ಸಂಸ್ಕೃತಿಯು ಆಕ್ರಮಣಶೀಲಕ್ಕೆ- ಖಿಲವಾಗುತ್ತಿರುವ ಮಾಸ್ತೀಕರ ಸಂಸ್ಕೃತಿಯು ಈ ಅಧ್ಯಯನವೇ ಜೀವಂತ ಸಾಕ್ಷಿಯೊದಗಿಸಬಲ್ಲದು.

೨೨) ಮಾಸ್ತೀಕರ ಸಂಸ್ಕೃತಿಯ ಬಗ್ಗೆ ಥರ್ ಸ್ಟನ್ ಟಿಪ್ಪಣಿ ಬಿಟ್ಟರೆ ಬೇರೆ ಅಧ್ಯಯನವೇ ನಡೆದಿಲ್ಲ.[೨೨]

ಜನಾಂಗೀಯ ಅಧ್ಯಯನವು ಆದಿಮ ಸಂಸ್ಕೃತಿಯ ಅನಾವರಣ ಮಾಡುವುದರ ಜೊತೆಗೆ ಪ್ರಸ್ತುತ ಸ್ಥಿತಿಗತಿಗಳ ಬಗೆಗೆ ಅರಿವು ಮೂಡಿಸುತ್ತದೆ. ಸಾಂಸ್ಕೃತಿಕ ರಾಜಕಾರಣವು ಹೇಗೆ ಹಂತ ಹಂತವಾಗಿ ಪಲ್ಲಟವಾಗಿದೆ ಎಂಬುದನ್ನು ಈ ಅಧ್ಯಯನದ ಮೂಲಕ ತಿಳಿಯಬಹುದಾಗಿದೆ.

## ಆದಿಮ ಶಿವ ರಹಸ್ಯ

ಭಾರತೀಯ ಸಂಸ್ಕೃತಿಯ ಚಹರೆಗಳನ್ನು ಇದುವರೆಗೂ ಗ್ರಹಿಸಿದ ಏಕರೂಪಿ ದೃಷ್ಟಿಕೋನದ ಬಗೆಗೆ ತೀರ ಭಿನ್ನಾಭಿಪ್ರಾಯ ತಳೆದ ಜನಪದೀಯ ಹಿನ್ನೆಲೆಯಿಂದ ಆದಿಮ ಶಿವರಹಸ್ಯಗಳನ್ನು ಅನ್ವೇಷಿಸುತ್ತಾ ಭಾರತೀಯ ಸಾಂಸ್ಕೃತಿಕ ಚರಿತ್ರೆಯನ್ನು ಅವೈದಿಕ ನೆಲೆಗಳಿಂದ ಗ್ರಹಿಸಿ ನಿರ್ವಹಿಸುವ ಹೊಣೆಗಾರಿಕೆಯನ್ನು ಯಾವುದೇ ಶೈಕ್ಷಣಿಕ ಪದವಿಗಳನ್ನು ಪಡೆಯದಿದ್ದರೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಇದರ ಅಂತಿಮ ರೂಪವೇ ಸಂಶೋಧನೆಯಲ್ಲಿ "ಆದಿಮ ಶಿವ ರಹಸ್ಯ" (ಜೇನುಕುರುಬ ಬುಡಕಟ್ಟು ಮೂಲದ ಆಚರಣಾ ಪ್ರಧಾನ ಅಧ್ಯಯನ)

ಲಕ್ಷ್ಮೀಪತಿ ಕೋಲಾರ ಅವರು ಜನಪದೀಯ ಹಿನ್ನೆಲೆಯಿಂದ ಸಂಸ್ಕೃತಿ ಶೋಧ ನಡೆಸುವುದೇ ಭಿನ್ನವಾದ ಒಂದು ಸಂಶೋಧನಾ ಮಾರ್ಗವಾಗಿದೆ. ಜೇನುಕುರುಬ ಬುಡಕಟ್ಟು ಮೂಲದ ಆಚರಣಾ ಪ್ರಧಾನ ಅಧ್ಯಯನದ ಮೂಲಕ ಆದಿಮ ಅವರ ರಹಸ್ಯ ಬೇಧಿಸುವಂತಹ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದಾರೆ. ದೇಶೀ ಆಕರಗಳೆಂದು ಭಾವಿಸಿದ ಬುಡಕಟ್ಟು ನಂಬಿಕೆ ಮತ್ತು ಆಚಾರಗಳಿಂದ ಶಿವನ ಆದಿಮ ರಹಸ್ಯವನ್ನು ಕಂಡು ಕೊಳ್ಳುವ ಅತ್ಯಂತ ವಿರಳ ಪ್ರಯತ್ನಗಳ ನಡೆದಿರಬಹುದಾದರು ಈ ದಿಟ್ಟಿನಲ್ಲಿ ಲಕ್ಷ್ಮೀಪತಿಯವರು ಅಧ್ಯಯನ ಕೈಗೊಂಡಿದ್ದಾರೆ. ಅಕಾಡೆಮಿಕ್ ಶಿಸ್ತಿಗೆ ಅಂಟಿದ ಸಂಶೋಧನೆಗಳು ಕೇವಲ ವೇದಗಳು, ಉಪನಿಷತ್ತುಗಳು, ಪುರಣಾಧಿ ಧಾರ್ಮಿಕ ಸಾಹಿತ್ಯ, ತಂತ್ರಪಂಥಗಳು, ಶಾಸನಗಳು, ಭಾಷಾ ವಿಜ್ಞಾನದ ಪ್ರಕಾರಗಳು ತಿರುಚಲ್ಪಟ್ಟಿರುವ ಸಾಂಸ್ಕೃತಿಕ ಚರಿತ್ರೆ, ಪುರಾತತ್ವ, ಶೋಧನೆಗಳು, ಶಿಲ್ಪಕಲೆಯಾದಿ ಇನ್ನಿತರ ಸೃಜನಶೀಲ ಅಭಿವ್ಯಕ್ತಿಗಳ ದಾಖಲೆಗಳನ್ನೆ ಬಹುಮುಖ್ಯ ಆಕರಗಳನ್ನಾಗಿಸಿ ಕೊಂಡಿದ್ದರೆ. ಹೆಚ್ಚು ಅದೇ ಹಾದಿಯಲ್ಲಿ ಸಂಶೋಧನೆಗಳು ನಡೆದಿವೆ. ಆದರೆ ಬುಡುಕಟ್ಟು ತಲೆಮಾರುಗಳ ಆಚಾರಣೆಗಳ ನಂಬಿಕೆಗಳ ಮೂಲಕ ಶಿವನ ಆದಿಮತೆಯನ್ನು ಗ್ರಹಿಸಲು ಸಹಾಯಕವಾಗುವ ಸೂಕ್ತ ಆಕರಗಳನ್ನಗಿ ಬಳಸಿಕೊಂಡು ಶೋಧನೆ ನಡೆಸುವುದು ವಿಶಿಷ್ಟವಾಗಿದೆ.

ಬುಡುಕಟ್ಟು ಜನಾಂಗಗಳಾದ ಜೇನು ಕುರುಬರು, ಕಾಡು ಹಾಗೂ ಬೆಟ್ಟ ಕುರುಬರು, ಚೆಂಚುಗಳು, ಸೋಲಿಗರು ಮತ್ತು ಶ್ರೀಲಂಕಾದ ವೆಡ್ಡ ಬುಡಕಟ್ಟುಗಳ ಆಚರಣೆ ಮತ್ತು ನಂಬಿಕೆಗಳನ್ನು ಪ್ರಧಾನವಾಗಿ ಬಳಸಿಕೊಂಡು ಅಧ್ಯಯನ ನಡೆಸಿದ್ದಾರೆ.

ಜೇನು ಕುರುಬರು ಕರ್ನಾಟಕ ಮತ್ತು ತಮಿಳುನಾಡು ಕೇರಳ ಪ್ರಾಂತ್ಯಗಳಲ್ಲಿ ಕಂಡುಬಂದರು, ಪ್ರಮುಖವಾಗಿ ಮೈಸೂರು ಮತ್ತು ತಮಿಳುನಾಡಿನ ಗಡಿಭಾಗದ ಕಾಡುಗಳಲ್ಲಿ ಕಂಡು ಬರುತ್ತಾರೆ ಈ ಪ್ರದೇಶದ ಬುಡಕಟ್ಟು ಜನಾಂಗವನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ.

ಭಾರತದ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ರಚಿಸುವುದು ಭಾರತೀಯ ತಾತ್ವಿಕ ಪ್ರಪಂಚದ ತುರ್ತಾಗಿದೆ. ಎಂದು ಭಾವಿಸಬಹುದು ಬುಡಕಟ್ಟು ಜನರಲ್ಲಿ ವಿಶೇಷವಾಗಿ ಜೇನು ಕುರುಬರು ಆಚರಿಸುವ ವಸಂತ ಋತುವಿನಲ್ಲಿ ನಡೆಸುವ ಕೊಂಟು ಪೂಜೆ ೪೦ ದಿನಗಳ ಕಾಲ ನಡೆಯುತ್ತದೆ ಇದರ ವಿಶಿಷ್ಟ ಕೊಂಟು ಪೂಜೆ ಮತ್ತು ಆಗಾದೆ ಸೂರಾಟೊಂಡಿಯ ಆಚರಣೆಗಳಲ್ಲಿ ಶಿವನ ಆದಿಮದ ಚಹರೆಗಳನ್ನು ಗುರುತಿಸುತ್ತಾರೆ. ಇದರಿಂದಾಗಿ ಶಿವನ ಆದಿಮತೆಯನ್ನು ಬುಡಕಟ್ಟು ಜನಾಂಗದ ಆಚರಣೆಗಳ ಮೂಲಕ ಹೆಕ್ಕಿ ತರುವಂತಹ ಪ್ರಯತ್ನ ಮಾಡಿದ್ದಾರೆ.

ಆ ಮೂಲಕ ಸಾವಿರಾರು ವರ್ಷಗಳ ಕಾಲ ನಡೆದ ಪಲ್ಲಟಗಳಿಂದ ಶಿವನ ಸಾಕ್ಷಾತ್ಕಾರ ನಿರಂತರ ಬದಲಾವಣೆಗಳಿಗೆ ಒಳಗಾಗಿ ಸಂಸ್ಕೃತಿಯ ಚಲನೆಯ ಮೂಲಕ ಬೃಹತ್ ಜೀವನ ದರ್ಶನವನ್ನೂ ಮಾಡಿಸಿದ್ದಾರೆ. ಶಿಷ್ಟ ಪರಿಕಲ್ಪನೆಯ ಶಿವನಿಗೂ ಮತ್ತು ಬುಡಕಟ್ಟು ಜನಾಂಗಗಳ ಆಚರಣೆಯಲ್ಲಿ ಬರುವ ಶಿವನಿಗೂ ತುಂಬಾ ವ್ಯತ್ಯಾಸ ಕಂಡುಬರುತ್ತದೆ. ಇಂದಿಗೂ ಬುಡಕಟ್ಟು ಜನಾಂಗಗಳ ಶಿವನು ಶಿಷ್ಟ ಪರಿಕಲ್ಪನೆಯ ಸಂಸ್ಕೃತಿಯಲ್ಲಿ ಜೀವಂತವಾಗಿದ್ದಾನೆ. ಶಿವನನ್ನು ಸಾದಾರಣವಾಗಿ ದೈವತ್ವದ ಹಿನ್ನೆಲೆಯಿಂದ ಗಮನಿಸಿದ್ದಾರೆ. ಲಕ್ಷ್ಮೀಪತಿ ಕೋಲಾರ ಅವರು ಪಿತೃಪರಿಕಲ್ಪನೆಯ ಸಿದ್ಧಾಂತದ ಮೂಲಕ ಮಂಡಿಸಿದ್ದಾರೆ. ಇದು ಅವರ ಸಂಸ್ಕೃತಿಯನ್ನು ಮರು ವ್ಯಾಖ್ಯಾನಿಸುವ ಕ್ರಿಯಾಶೀಲ ಶೋಧವಾಗಿ ಗುರುತಿಸಬಹುದು.

ಭಾಷಿಕ ವ್ಯತ್ಯಾಸಗಳ ಮೂಲಕ ಬುಡಕಟ್ಟು ಜನಾಂಗದ ಸಾಂಸ್ಕೃತಿಕ ಚಲನೆಯನ್ನು ಗುರುತಿಸುವುದು ಸಹಾ ಈ ಅಧ್ಯಯನದ ಮೂಲಕ ಸಾಧ್ಯವಾಗಿದೆ ಶಿವನ ವಿವಿಧ ರೂಪಗಳಾದ ಲಿಂಗ, ಶಿವ, ರುದ್ರ, ನಟರಾಜ, ಇವುಗಳ ಪರಿಕಲ್ಪನೆಯನ್ನು ಭಾಷಿಕ ಹಿನ್ನೆಲೆಯಿಂದ ಶೋಧಿಸುವುದು ಮತ್ತು ಆ ಮೂಲಕ ಆದಿಮ ಶಿವನ ರಹಸ್ಯವನ್ನು ಸವಿವರವಾಗಿ ಮಂಡಿಸುತ್ತಾರೆ.

ಶಿವ ಪರಂಪರೆಯ ಅಜ್ಞಾತ ಆಯಾಮಗಳನ್ನು ಜೀವ ಪರವಾದ ಆದಿ ಭೌತಿಕವಾದ ಸಹಜವಾದ ಗ್ರಹಿಕೆಯ ಮೂಲಕ ಪರಿಶೀಲಿಸಿ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ರೂಪಿಸುವ ಹಾದಿಯಲ್ಲಿ ಸಂಶೋಧನೆ ನಡೆಸಿದ್ದಾರೆ. ಪ್ರಾಚೀನ ಸಂಸ್ಕೃತಿಯೊಂದರ ಚಹರೆಗಳನ್ನು ಹಿಡಿದು ಮೂಲ ಸ್ವರೂಪದ ಸಂಸ್ಕೃತಿಯನ್ನು ಮರು ಜೋಡಿಸುವ ಹೊಣೆಗಾರಿಕೆಯನ್ನು ತಮ್ಮ ತೆಕ್ಕೆಗೆ ಹಾಕಿಕೊಂಡಿದ್ದಾರೆ.

‘ಭಾರತದಲ್ಲಿ ಶಿಶ್ನಾರಾಧನೆ ಮತ್ತು ಋಗ್ವೇದದಲ್ಲಿ ತೀಕ್ಷ್ಣ ವಿಡಂಬನೆ ಮತ್ತು ವಿರೋಧಗಳಿಗೆ ಒಳಗಾಗಿರುವ ‘ಶಿಶ್ನೋದೇವಾ’ ಇಂದಿಗೂ ಬುಡಕಟ್ಟುಗಳ ವಲಯದಲ್ಲಾದರೂ ಜೀವಂತವಾಗಿದೆ. ಅದರೊಂದಿಗೆ ಶಿವನ ಲಿಂಗವಾಗಿ ಪರಿವರ್ತನೆಗೊಂಡು ಮುಂದುವರೆಯಿತು. ಎಂಬಂತಹ ವಿಚಾರಗಳನ್ನು ಮತ್ತು ಆಚರಣೆಗಳ ಮೂಲಕ ಸಾಬೀತು ಮಾಡಿದ್ದಾರೆ.

ಒಟ್ಟಾರೆಯಾಗಿ ಸಂಸ್ಕೃತಿನಿಷ್ಠ ಸಂಶೋಧಕರಾದ ಲಕ್ಷ್ಮೀಪತಿ ಕೋಲಾರ ಅವರು ಜೇನುಕುರುಬರ ಕೊಂಟು ಪೂಜೆಯ ಆಚರಣೆ ಮತ್ತು ಅಣಿವೆ ಸೂರಾಳೊಡೆಯನ ಹಿಂದಿರುವ ಅತ್ಯಂತ ಸರಳವು ಸುಂದರವೂ ಆದ ಆದಿಮ ಅದ್ವೈತ ತತ್ವವೇ ನಿಜವಾದ ಮೂಲ ಶಿವಾದ್ವೈತವು. ಈ ಅದ್ವೈತ ತತ್ವದ ಹಿಂದಿರುವುದು ಜೀವ ಕೌತುಕದ ಗ್ರಹಿಕೆಗಳೇ. ಈ ಅದ್ವೈತ ತತ್ವವನ್ನೇ ಮಾದರಿಯಾಗಿಸಿಕೊಂಡ ಶೈವ ಮೂಲದ ತಂತ್ರಪಂಥಗಳು ಅದ್ವೈತದ ಆದ ವಿನ್ಯಾಸಗಳನ್ನು ರೂಪಿಸಿ ಸ್ತ್ರೀ-ಪುರುಷ ಸಮಾಗಮ, ನಾದ ಹಾಗೂ ನಾಟ್ಯಗಳ ತುರೀಯಾವಸ್ಥೆಯ ನಾದಬಿಂದು ತತ್ವದ ಮೂಲ ಮಾದರಿಯನ್ನು ಆಚರಣೆಗೆ ತರುವುದರ ಮೂಲಕವೇ ಬಹುಶಃ ಜೇನುಕುರುಬರ ಶಿಶ್ನಾರಾಧನೆ ಮತ್ತು ಶೈವ ಪಂಥಗಳ ನಡುವೆ ಸಾಂಸ್ಕೃತಿಕ ಸಂಪರ್ಕ ಸೇತುವೆಯಾಗಿ ಮಾರ್ಪಾಡಾದರು” ಎಂಬ ನಿರ್ಧಾರಕ್ಕೆ ಅಧ್ಯಯನದ ಮುಖೇನ ಬರಲಾಗಿದೆ. ಇಲ್ಲಿ ಶಿಷ್ಟ ಮತ್ತು ದೇಸಿ ಸಂಸ್ಕೃತಿಗಳ ಕೊಂಡಿಯ ಸಮಾಗಮದ ಚಹರೆಗಳನ್ನು ತೋಧಿಸಿದ್ದಾರೆ.

## ಅಡಿ ಟಿಪ್ಪಣಿ

೧ ಸಂಸ್ಕೃತಿ :ಶ್ರಮ ಮತ್ತು ಸೃಜನಶೀಲ ಪುಟ ೧೬೪ ಬರಗೂರು ರಾಮಚಂದ್ರಪ್ಪ

೨ ಅದೇ ಪುಟ – ೧೬೩

೩ ಅದೇ ಪುಟ – ೧೬೩

೪ ಅದೇ ಪುಟ – ೧೬೫

೫ ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ–ಬರಗೂರು ರಾಮಚಂದ್ರಪ್ಪ– ಪುಟ ೧೭೦–೧೭೧

೬ ಅದೇ ಪುಟ ೧೭೪

೭ ದಕ್ಷಿಣ ದಂಡಾಜೇಪಿಕ ಪುಟ–೧೮ಂದ೨ ಲಕ್ಷ್ಮೀಪತಿ ಕೋಲಾರ.

೮ ದಕ್ಷಿಣ ದಂಡಾಜೇಪಿಕ ಪುಟ ೨೦೦

೯ ದಕ್ಷಿಣ ದಂಡಾಜೇಪಿಕ ಪುಟ ೮.೯.೧೦

೧೦ ದಕ್ಷಿಣ ದಂಡಾಜೇಪಿಕ ಪುಟ ೧೪

೧೧ 'ಕಾಲುದಾರಿ' ಪುಟ–೪೩, ಲಕ್ಷ್ಮೀಪತಿ ಕೋಲಾರ

೧೨ ಕಾಲು ದಾರಿ ಪುಟ–೫೪

೧೩ ಪುಟ ೧೦೩, ಆದಿಮ ಶಿವ ರಹಸ್ಯ, ಲಕ್ಷ್ಮೀಪತಿ ಕೋಲಾರ.

## ಅಧ್ಯಾಯ:೦೪

## "ಸೃಜನಶೀಲ ಬರವಣಿಗೆಗಳ ಸೈದ್ಧಾಂತಿಕ ಹಾಗೂ ತಾತ್ವಿಕ ಆಯಾಮಗಳು"

ಸಾಹಿತ್ಯದಲ್ಲಿ ತಾತ್ವಿಕತೆಯನ್ನು ಹುಡುಕುವ ಮತ್ತು ಸಂಬಂಧಾಂತರಗಳನ್ನು ಶೋಧಿಸುವ ಪ್ರಯತ್ನ ಹೊಸದೇನೂ ಅಲ್ಲ. ಆದರೂ ಅದು ಹಳೆಯದಾಗಿಲ್ಲ' ಸಾಹಿತ್ಯ ಮತ್ತು ತಾತ್ವಿಕತೆಯ ಸಂಬಂಧವನ್ನು ಕುರಿತು ಪ್ರಶ್ನೆ, ಜೀವಂತವಾಗಿರುವಂತೆ ನೋಡಿಕೊಳ್ಳುತ್ತಿರುವುದೇ ಇದಕ್ಕೆ ಕಾರಣ."[೧]

ಇತ್ತೀಚಿನ ಒಂದೂವರೆ ದಶಕದ ಸಾಹಿತ್ಯದಲ್ಲಿ ಅಥವಾ ಸಾಹಿತಿಗಳಲ್ಲಿ ತಾತ್ವಿಕ ಬದ್ಧತೆಯನ್ನು ಕಾಣುತ್ತ ಬಂದ ಬೌದ್ಧಿಕ ವಲಯಕ್ಕೆ ತಾತ್ವಿಕತೆಯ ಪ್ರಶ್ನೆ ಎದುರಾದರೆ, ಸಾಹಿತ್ಯದ ಅನನ್ಯತೆಯ ಬಗ್ಗೆ ಅಕ್ಕರೆ ಮೂಡಿದರೆ ಯಾಕೆ ಬೇಡವೆನ್ನೋಣ?[೨]

ತಾತ್ವಿಕತೆವೆನ್ನುವುದು ಅಕ್ಷರದ ಮೂಲಕ ಬಂದ ಆಲೋಚನೆ ಮಾತ್ರವೇ ಆಗಬೇಕಾಗಿಲ್ಲ. ಯಾಕೆಂದರೆ ಸಂಸ್ಕೃತಿಯಲ್ಲಿ ಶ್ರೇಣಿಗಳನ್ನು 'ಸೃಷ್ಟಿಸಿ' ಉನ್ನತ ಶ್ರೇಣಿಯ ನೆಲೆಯಿಂದ ಕಂಡುಕೊಂಡ 'ಸತ್ಯಗಳೂ ಅಭಿವ್ಯಕ್ತಿಗೊಂಡ' ಆಕೃತಿಗಳೂ' ಈ ನಾಡಿನ ಅಂತಿಮ ಮಾರ್ಗ ಸರಾಜೌಗಳಲ್ಲವೆನ್ನುವುದು ನನಗಿಲ್ಲಿ ಮುಖ್ಯ. 'ಉನ್ನತ ಶ್ರೇಣಿ'ಯ ಸಂಸ್ಕೃತಿ ತಳಸಂಸ್ಕೃತಿಯ ಮನಸ್ಸನ್ನು ಮನ್ನಿಸದ ಹೊರತು ಅದಕ್ಕೆ ಔನತ್ಯವಾಗಲಿ ಔಚಿತ್ಯವಾಗಲಿ ಲಭ್ಯವಾಗುವುದಿಲ್ಲ: ಸಾಂಪ್ರದಾಯಿಕವಾಗಿ ಉನ್ನತವೆನ್ನಿಸಿಕೊಂಡು ಸುಖಲೋಲುಪ್ತಿಯಲಿ ಕಲಾ ಪ್ರಕಾರಗಳಿಗೆ, ತಾತ್ವಿಕ ನೆಲೆಗಳಿಗೆ ಇದಮಿತ್ಥಂ ಮುದ್ರೆಯನ್ನು ಒತ್ತುವುದು. ಯಾವತ್ತೂ ಸರಿಯಲ್ಲ.[೩] ತಾತ್ವಿಕತೆ ಎನ್ನುವುದು ಸಮಗ್ರ ಸಾಮಾಜಿಕ ಸಂವೇದನೆಯನ್ನು ಒಳಗೊಂಡ ಚಿಂತನೆಯ ಸಾರವಾಗಿ ರೂಪುಗೊಳ್ಳುತ್ತದೆ. "ಲೇಖಕನೊಬ್ಬ ತಾತ್ವಿಕ ನೆಲೆಗೆ ತಲುಪುವುದೆಂದರೆ ವೈರುಧ್ಯಗಳನ್ನು ಮೀರುವ ಒಳಹೋರಾಟದಲ್ಲಿ ಕಂಡುಕೊಳ್ಳುವ ಉತ್ತರವೆಂದು ನನಗನ್ನಿಸುತ್ತದೆ"[೪]

ತಾತ್ವಿಕತೆಯು ಕೃತಿಯೊಂದರಲ್ಲಿ ಅಂತರ್ಗತವಾಗುವುದು ಎಂದರೇನು?'

ಯಾವುದೇ ತಾತ್ವಿಕತೆ ಹೊರಗಡೆಯಿಂದ ಹೇರಲ್ಪಡಬಾರದೆಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದರೆ ಬದ್ಧಸಾಹಿತಿಗಳೆಂದು ಕರೆದುಕೊಂಡವರ ಬರವಣಿಗೆಯನ್ನೆಲ್ಲ ತಾತ್ವಿಕ ಹೇರಿಕೆಯ ಸರಕನ್ನಾಗಿ ನೋಡುವ ಸಂಶಯವನ್ನೇ ಸಂಸ್ಕೃತಿಯಾಗಿಸಿ ಕೊಂಡವರ ಬಗ್ಗೆ ನನ್ನ ತಕರಾರು ಇದ್ದೇ ಇದೆ. ಅದೇ ರೀತಿಯಲ್ಲಿ ಘೋಷಣೆಗಳೇ ತಾತ್ವಿಕತೆಯಲ್ಲ ಎಂಬ ಎಚ್ಚರವೂ ಇದೆ. ನನ್ನ ದೃಷ್ಟಿಯಲ್ಲಿ ಎಲ್ಲ ಪ್ರಮುಖ ಲೇಖಕರೂ-ತಾತ್ವಿಕ ಬದ್ಧತೆಯನ್ನು ಘೋಷಿಸಿ ಕೊಂಡಿರಲಿ, ಇಲ್ಲದಿರಲಿ-ದರ್ಶನಾತ್ಮಕ ತಾತ್ವಿಕತೆಯೊಂದನ್ನು ಪಡೆದು ಕೊಂಡಿರುತ್ತದೆ. ಬದುಕಿನ ವಿವರಗಳ ಕ್ರಮಬದ್ಧ ಸಂಯೋಜನೆಯೇ ಉತ್ತಮ ಕಲೆಯಲ್ಲ. ಸಂಯೋಜನೆಯಲ್ಲಿ ತಲಸ್ಪರ್ಶಿಯಾಗಿ ಸೇರಿಕೊಳ್ಳುವ ಸಂವೇದನೆ ಮತ್ತು ಚಿಂತನೆಗಳು ಕಲೆಯನ್ನು ಉತ್ತಮ ನೆಲೆಗೆ ಕೊಂಡೊಯ್ಯುತ್ತವೆ. ಪ್ರಬುದ್ಧ ಸಂವೇದನೆ ಮತ್ತು ಚಿಂತನೆಗಳಿಲ್ಲದವರು ಉತ್ತಮ ಲೇಖಕರಾಗಲಿ. ಕಲಾವಿದ ಆಗಲು ಹೇಗೆ ಸಾಧ್ಯ? ಪ್ರಬುದ್ಧ ಸಂವೇದನೆ ಮತ್ತು ಚಿಂತನೆಗಳು ನಿಜಕ್ಕೂ ಪ್ರಬುದ್ಧವಾಗಿದ್ದಲ್ಲಿ ತಾತ್ವಿಕ ರೂಪವನ್ನು ಪಡೆಯದೆ ಇರಲು ಹೇಗೆ ಸಾಧ್ಯ? ಈ ದೃಷ್ಟಿಯಿಂದಲೇ ನಾನು ಹೇಳಿದ್ದು-ಪ್ರಮುಖ ಲೇಖಕರು ಒಂದಲ್ಲ ಒಂದು ರೀತಿಯ ತಾತ್ವಿಕತೆಯನ್ನು ಒಳಗೊಂಡಿರುತ್ತಾರೆ.

ಸಾಹಿತ್ಯಕೃತಿಯೊಂದರಲ್ಲಿ ತಾತ್ವಿಕತೆಯನ್ನು "ಒಳಗೊಳ್ಳುವುದು ಹೇಗೆ? ಕೃತಿಯೊಂದರಲ್ಲಿ ಕಟ್ಟಿಕೊಳ್ಳುವ ವಿವರಗಳು ಹೊರ ಮುಖಿಯಾಗುತ್ತ ಹೋಗುತ್ತದೆ. ಅಂದರೆ ಕೃತಿಯ ವಿವರಗಳು

ಹೊರ ಉಕ್ಕುತ್ತಿರುವಾಗ ರೂಪುಗೊಳ್ಳುವ ತಾತ್ವಿಕತೆ ಒಳ ಇಳಿಯುತ್ತಾ ಹೋಗಿ ಕಂಡೂ ಕಾಣದ ಕೇಂದ್ರ ಸ್ಥಾನವನ್ನು ಪಡೆಯುತ್ತದೆ. ಹೊರಮುಖಿ ಮತ್ತು ಒಳಮುಖಿ ಯಾಗುವ ಪ್ರಕ್ರಿಯೆಯಲ್ಲಿ ಸಂವೇದನಾಶೀಲ ಸಂಯೋಜನೆಯ ವಿವರಗಳು ಮತ್ತು ಚಿಂತನೆಗಳು ಒಂದರೊಳಗೊಂದು ನೇಯ್ದುಕೊಳ್ಳುತ್ತ ಅಭೇದವಾಗುತ್ತದೆ. ಈ ರೀತಿಯಲ್ಲಿನ ತಾತ್ವಿಕತೆಯನ್ನು ಕಂಡುಕೊಳ್ಳುವ ವಿಮರ್ಶೆಯ ಕೆಲಸವೂ ಸುಲಭವಲ್ಲ. ಕೃತಿಯೊಂದರ ಹೊರ ಆವರಣವನ್ನು ಅನಾವರಣಗೊಳಿಸುತ್ತಲೇ ಒಳತುದಿಗೆ ತಲುಪುವ ಶೋಧದ ಕೆಲಸವನ್ನು ವಿಮರ್ಶೆಯು ನಿರ್ವಹಿಸ ಬೇಕಾಗುತ್ತದೆ.[೩]

ಲಕ್ಷ್ಮೀಪತಿಯವರ ಸೃಜನಶೀಲ ಬರವಣಿಗೆಗಳ ಸೈದ್ಧಾಂತಿಕ ನಿಲುವು ಹಾಗೂ ತಾತ್ವಿಕ ಆಯಾಮಗಳನ್ನುಕವನ ಸಂಕಲನಗಳಾದ ಅ) ನವಿಲು ಕಿನ್ನರಿ, ಆ) ನೀಲಿಶತ್ತಿ, ಮತ್ತು ಇ) ನೀರಚಿಗುರು (ಕವನ ಸಂಕಲನಗಳು), ಇವುಗಳ ಹಿನ್ನೆಲೆಯಿಂದ ಶೋಧಿಸುವುದು ಈ ಅಧ್ಯಾಯದ ಮುಖ್ಯ ಉದ್ದೇಶವಾಗಿದೆ

## ನವಿಲು ಕಿನ್ನರಿ

'ನವಿಲುಕಿನ್ನರಿ' ಕವನ ಸಂಕಲನದ ಪ್ರಾಮುಖ್ಯತೆಯನ್ನು ಕೆ.ವಿ.ನಾರಾಯಣ ಅವರು ವಿವರಿಸಿದ ರೀತಿಯನ್ನು ಚಂದ್ರಶೇಖರ್ ನಂಗಲಿ ಅವರು ತಮ್ಮ ವಿಮರ್ಶಾ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. 'ನವಿಲು ಕಿನ್ನರಿ' ಪ್ರಥಮ ಆವೃತ್ತಿಯು (೧೯೯೮) ಬಿಡುಗಡೆ ಸಂದರ್ಭದಲ್ಲಿ ಕನ್ನಡ ಕಾವ್ಯಲೋಕಕ್ಕೆ ಕೃತಿಯನ್ನು ಪರಿಚಯಿಸುತ್ತಾ ಡಾ.ಕೆ.ವಿನಾರಾಯಣ ಅವರು ಕ್ರಿಯೆ-ಕಾಲ ದೇಶಗಳ ಅಪೂರ್ವ ಬೆಸುಗೆಯನ್ನು ತಮ್ಮ ಕವಿತೆಗಳಲ್ಲಿ ಕಟ್ಟಿಕೊಡುವ ಲಕ್ಷ್ಮೀಪತಿಯ ಸಂಯೋಜಕ ಶಕ್ತಿಯ ಬಗ್ಗೆ ಮುಕ್ತ ಮನಸ್ಸಿನಿಂದ ಮಾತನಾಡಿದ್ದರು. ಕುಮಾರವ್ಯಾಸ, ಬೇಂದ್ರೆ ಅವರಲ್ಲಿ ಕಾಣುಬರುವ ಸಂಯೋಜಕ ಪ್ರತಿಭೆಯು' ಚೊಚ್ಚಲು' ಕವನಸಂಕಲವಾಗಿರುವ ನವಿಲು ಕಿನ್ನರಿ'ಯ ಯಾವುದೇ ಪುಟ ತೆರೆದರೂ ಕಂಡು ಬರುತ್ತವೆ. ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು"[೪]

ಲಕ್ಷ್ಮೀಪತಿಯವರ ಕಾವ್ಯ ಪ್ರೀತಿ ಸ್ವಚ್ಛಂದವಾಗಿ ಬೆಳೆದ ಅರಣ್ಯದಂತೆ ಹಚ್ಚ ಹಸಿರಾಗಿ, ನಿತ್ಯಸುಂದರವಾಗಿ ತಾನೇ ತಾನಾಗಿ ರಾರಾಜಿಸುತ್ತದೆ. ಕೃತಕತೆ ಇಲ್ಲದೆ ಸ್ವಾಭಾವಿಕ ಅಭಿವ್ಯಕ್ತಿಯಾಗಿದೆ. ನಗರ ಪ್ರದೇಶದ ಕೃತಕ ಉದ್ಯಾನವನಗಳಂತಹ ಮುಕ್ತ ಸೌಂದರ್ಯವನ್ನು ಮನಸ್ಸಿಗೆ ತಂದು ಕೊಡುತ್ತದೆ. "ನನ್ನ ಗುಪ್ತ ಮನದೊಳಗೆ ನನಗೆ ಗೊತ್ತಿಲ್ಲದಂತೆ ಗರಿಗಟ್ಟಿಕೊಂಡ ಕಾಡು ಎಂದಿನಿಂದ ನನ್ನನ್ನು ಪಿಸುಮಾತಲ್ಲಿ ಕರೆಯುತ್ತಿದೆಯೋ ಗೊತ್ತಿಲ್ಲ"[೫]

ಕವಿಯ ಮನದಾಳದಲ್ಲಿ ಕಾಡುತ್ತಿರುವ ಕಾನನ "ಪ್ರೀತಿ ಕೇವಲ ವನ್ಯತಾಣಗಳನ್ನು ಸಂದರ್ಶಿಸಿ ಬರುವ ಮೋಜಿನಲ್ಲಿ ಪರ್ಯಾವಸಾನಗೊಳ್ಳದೆ ನಿಸರ್ಗ ಮತ್ತು ಸಂಸ್ಕೃತಿಗಳ ಸಹ ಸಂಬಂಧ ಪರಸ್ಪರ ವೈರುಧ್ಯಗಳ ಗ್ರಹಿಕೆಯತ್ತ ಸಾಗಿದ್ದು ಲಕ್ಷ್ಮೀಪತಿ ಕೋಲಾರ ಅವರ ಹಸಿರು ಕಾಳಜಿಗೊಂದು ಸಾಕ್ಷಿಯಾಗಿದೆ."ಈ ಸಂಬಂಧ ಪ್ರಬುದ್ಧ ಮನಸ್ಸಿನ ಹಲವು ಒಳನೋಟಗಳನ್ನು 'ನವಿಲು ಕಿನ್ನರಿ'ಯ ಕವಿತೆಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು."[೬]

ಕವನ ಸಂಕಲನದ ಶೀರ್ಷಿಕೆಯು ತಳಸಮುದಾಯಗಳಾದ ದಕ್ಕಲಿರು ಮತ್ತು ಮಾಸ್ತೀಕರು ಜಲಜಾಂಬವಂತ, ಆರಂಜ್ಯೋತಿ ಇತ್ಯಾದಿ ಕಥೆಗಳನ್ನು ಹೇಳಿಕೊಂಡು ತಂತಿವಾದ್ಯ, ಕಿನ್ನರಿ ನುಡಿಸುತ್ತ ಒಟ್ಟೊಟ್ಟಿಗೇ ಕೀಲು ನವಿಲಿನ ಮೂಲಕ ಕುಣಿಯಲು ಬಳಸುವ ಒಂದು ತಂತಿವಾದ್ಯದ

ಹೆಸರೇ, 'ನವಿಲು ಕಿನ್ನರಿ' ಈ ನವಿಲು ಕಿನ್ನರಿಯನ್ನೇ ತಮ್ಮ ಮೊದಲ ಚೊಚ್ಚಲ ಕವನ ಸಂಕಲನಕ್ಕೆ ಶೀರ್ಷಿಕೆಯಾಗಿ ಇಟ್ಟಿದ್ದು ಲಕ್ಷ್ಮೀಪತಿ ಕೋಲಾರ ಅವರ ತಳ ಸ್ಪರ್ಶಿ ಸಮುದಾಯಗಳ ಬಗೆಗಿನ ಸಂವೇದನಕ್ಕೆ ಒಂದು ಉತ್ತಮ ನಿರ್ದಶನವಾಗಿದೆ.

"ನಮ್ಮ ದೇಶದ, ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಿಗಿಂಥ ಹೀನಾಯಕರವಾಗಿ ಬದುಕುತ್ತಾ ಅಲೆಮಾರಿಗಳಾಗಿ ಜೀವಿಸುತ್ತಿರುವ ದಕ್ಕಲಿಗರು ಬಹಿಷ್ಕಾರ, ಅನಕ್ಷರತೆ, ದಾರಿದ್ರ್ಯ, ಅಜ್ಞಾನಗಳಲ್ಲೆ ಮುಳಾಗಿ ಹೋಗಿದ್ದರೂ ಇದಾವುದರ ಪರಿವೆಯೂ ಇಲ್ಲದಂತೆ ನವಿಲು ಕಿನ್ನರಿಯನ್ನು ನುಡಿಸುತ್ತಾ. ಪುರಾಣ ಕಾಲದ ರಂಗುರಂಗಿನ ಕಥೆಗಳ ಮೂಲಕ ಸ್ವಪ್ನಲೋಕದ ದಾರಿಗೊಯ್ಯುವ ಪರಿ ಲಕ್ಷ್ಮೀಪತಿಯ ಕಣ್ಣುಗಳಿಗೆ ಬದುಕಿನ ಒಂದು ವಿರೋಧಾಭಾಸವಾಗಿ ಕಾಣುತ್ತದೆ. ನಮ್ಮ ಸಮಾಜದ ರಚನೆಯಲ್ಲೇ ಹಾಸು ಹೊಕ್ಕಾಗಿರುವ ಇಂಥ ವಿರೋಧಾಭಾಸಗಳನ್ನು ಪರಿಹರಿಸಬೇಕಾದ ಆಶಯದಿಂದಲೇ ನವಿಲು ಕಿನ್ನರಿ ಆರಂಭವಾಗಿದೆ." ನವಿಲು ನಮ್ಮ ಆಧುನಿಕ ಭಾರತದ ರಾಷ್ಟ್ರೀಯ ಪಕ್ಷಿಯಾಗಿದ್ದು, ನವಿಲು ಕಿನ್ನರಿಯು ದಕ್ಕಲರು ಮತ್ತು ಮಾಸ್ತೀಕರು ನುಡಿಸುವ ಜನಪದ ತಂತಿವಾದ್ಯವಾಗಿದ್ದು ಆದಿಮ ಸಂಸ್ಕೃತಿಯನ್ನು ಪ್ರತಿನಿಧಿಸುವಂತಿದೆ.

ಗಂಡು ನವಿಲು ಬಹಳ ಸುಂದರವಾಗಿದ್ದು, ಹೆಣ್ಣು ನವಿಲು ಗಂಡನ್ನು ಪ್ರಣಯಕ್ಕೆ ಆಹ್ವಾನಿಸುತ್ತದೆ. ಗಂಡು ನವಿಲು ಕಾಮನ ಬಿಲ್ಲಿನ ಬಣ್ಣಗಳಂತೆ ಆಕರ್ಷಕವಾದ ಗರಿಗಳನ್ನು ಹೊಂದಿರುತ್ತದೆ. ಭರತನಾಟ್ಯ ನೃತ್ಯದಲ್ಲಿ ಬರುವ ಮಯೂರ ಮುದ್ರಾ:- ಹಸ್ತದಲ್ಲಿನ ಅನಾಮಿಕಾ ಉಂಗುರದ ಬೆರಳಿನ ತುದಿಯನ್ನು ಅಂಗುಷ್ಠದ ತುದಿಯನ್ನು ಸ್ಪರ್ಶಿಸುತ್ತ ಮಿಕ್ಕೆಲ್ಲ ಬೆರಳುಗಳನ್ನು ನೇರವಾಗಿ ಇಟ್ಟು ವಿನ್ಯಾಸ ಮಾಡುವುದೇ 'ಮಯೂರ ಮುದ್ರಾ' ಮಯೂರ ಎಂದರೆ ನವಿಲು ಅಂತೇಯೇ ಈ ಮುದ್ರೆ ನವಿಲಿನ ಮುಖವನ್ನು ಹೋಲುತ್ತಿದೆ. ಈ ಮುದ್ರೆ ಮುಂಗುರುಳನ್ನು ಭವಿಷ್ಯವನ್ನು ನವಿಲು ಹಕ್ಕಿ, ಗುಂಗುರು ಹಣೆ, ಜಿಂದಿ ಕಣ್ಣೀರು, ಪ್ರಸಿದ್ಧ ಭವಿಷ್ಯ ಇವುಗಳನ್ನು ಪ್ರತಿಪಾದಿಸುತ್ತದೆ.*

ಭೂತವನ್ನು ಪ್ರಶ್ನಿಸುತ್ತಾ, ವರ್ತಮಾನ ಸಹಿಸುತ್ತಾ, ಭವಿಷ್ಯವನ್ನ ಪ್ರತಿನಿಧಿಸುವ ಪರಿಯಾಗಿದೆ. 'ನವಿಲು ಕಿನ್ನರಿ ಕವಿತೆಯ ಸಾಲುಗಳು, ಮತ್ತಿನ ಗಾಳಿಗೋಪುರದಲ್ಲಿ ನರ್ತಿಸುತ್ತಿರುವ ನವಿಲನ್ನು, ನೆಲ ಸಂಸ್ಕೃತಿಯ ತಳವನ್ನು ಸ್ಪರ್ಶಿಸುವ "ಇದ ಮಿತ್ತಂ" ಎಂದು ಆಹ್ವಾನ ಕೊಡುತ್ತಿದ್ದಾರೆ. ಅಲೌಕಿಕ ಬದುಕಿಗೆ ಸೆಡ್ಡು ಹೊಡೆದು ಲೌಕಿಕ ಬದುಕಿನ ಕಡೆ ಒಲವು ತೋರಿಸುವ ನಿಜವಾದ ಮೋಕ್ಷ ಇಲ್ಲಿಯೇ ಪ್ರಾಪ್ತವಾಗುತ್ತದೆ ಎಂದು ಹೇಳುತ್ತಾರೆ.

"ಕಿನ್ನರಿಯೇರಿ ಕನ್ನೆಯಂತೆ ಕನಸುವುದು ಸೊಗಸಲ್ಲ
ನೆಲಕ್ಕಿಳಿದು ನರ್ತಿಸೆಲೆ ನಾದ ಮತ್ತ ನವಿಲೆ
ನಿನ್ನ ರಂಗು ಗುರಿಯೊಂದೊಂದೂ
ಗುಂಗು ಕನಸ ಭಿನ್ನವತ್ತಳೆ"

"ಕನಸುವುದು ಸೊಗಸಲ್ಲ' ಎಂಬ ನಿಷೇಧದ ಮೂಲಕ 'ಕನಸುಣಿತನ'ವನ್ನು ನಿರಾಕರಿಸುವ ಕವಿ "ನೆಲಕ್ಕಿಳಿದು ನರ್ತಿಸಲೆ" ಎಂಬ ಆಶಯ ವ್ಯಕ್ತಿಪಡಿಸಿ ನೆಲಕ್ಕಿಳಿಯಬೇಕಾದ ಅನಿವಾರ್ಯತೆಯನ್ನು ಮನದಟ್ಟು ಮಾಡಿಕೊಟ್ಟಿದಾರೆ. ಕನಸು ಭ್ರಮೆಗಳನ್ನ ಸೂಚಿಸುತ್ತಿದ್ದಾರೆ. ನೆಲ

ವಾಸ್ತವಗಳನ್ನು ಸೂಚಿಸಿದೆ. ನಿನ್ನ ರಂಗು ರಂಗಿನ ಗರಿಯೊಂದೊಂದು ಕನಸಿನ ಯಾನ ಪತ್ರವಾಗಿದೆ. ಭ್ರಮಾ ಲೋಕದ ಕನಸು ಸಲ್ಲದು ವಾಸ್ತವದ ಕಡು ಸತ್ಯಗಳನ್ನು ಅರಿಯುವುದರ ಪ್ರಾಮುಖ್ಯತೆಯನ್ನು ಕಟ್ಟಿಕೊಟ್ಟಿದ್ದಾರೆ.

ಅಲ್ಲದೆ ಕ್ಷಣ-ಕ್ಷಣದ ಕನಸುಗಳಿಂದ ನಾನು ತತ್ತರಿಸಿ ಹೋಗುತ್ತಿದ್ದೇನೆ. ವಾಸ್ತವಕ್ಕಿಂತ ಕಣ್ಣು ಬೆದರಿಸುವ ಈ ಕನಸುಗಳಲ್ಲಿ ಬದುಕಿದ್ದೇ ಹೆಚ್ಚು ನಾನು ಗೊಗ್ಗರಿಸಿ ಹೇಳಿದ ಮಾತು. ಕನಸಿನ ಅವಾಸ್ತವಿಕತೆಯನ್ನು ಅದರ ಮಾರ್ಮಿಕತೆಯನ್ನು ವಿವರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ನಾಗಜ್ಜ ನೀಡುವ ಉತ್ತರ ಕನಸಿನ ನಿರಾಕರಣೆಯನ್ನು ವ್ಯಕ್ತಪಡಿಸುತ್ತದೆ.

ನಾಗಜ್ಜ-"ಬೆಳಕಿನ ಕಾಯಕ್ಕೆ ನನ್ನ ಮುಂದೆ ಕನಸುಗಳ ಹಂಗಿರುವುದಿಲ್ಲ"
ಕನಸಿನ ನಿರಾಕರಣೆ
'ಬಯಲು ನಿದ್ರಿಸುವುದುಂಟೆ?

"ಬಗೆ ಬಗೆಯ ಭ್ರಮೆಗಳ ನಮ್ಮನ್ನು ಆವರಿಸಿಕೊಂಡು ಬಿಟ್ಟರೆ ವಾಸ್ತವನ್ನು ಗ್ರಹಿಸುವುದು ಹೇಗೆ? ಆದ್ದರಿಂದ ನಮ್ಮನ್ನು ಜಡತ್ವಕ್ಕೆ ತಳ್ಳಿ ಬಿಡುವ ಕನಸುಗಳ ಭ್ರಮೆಗಳಿಂದ ಬಿಡಿಸಿಕೊಂಡು ಹೊಸದಾರಿಯಲ್ಲಿ ಹೊಸ ಹೆಜ್ಜೆಗಳನ್ನಿಡಬೇಕೆಂಬುದನ್ನು" ಜಡತ್ವದಿಂದ ಬಿಡಿಸಿಕೊಂಡು ಕ್ರಿಯಾಶೀಲರಾಗಲು ಹೊಸ ದಾರಿಯಲ್ಲಿ ಹೊಸ ಹೆಜ್ಜೆಗಳ ಗುರುತು ಮೂಡಿಸಲು ಕಣ್ಣಿಗೆ ಅಂಧತ್ವ ಇದ್ದರೂ ಎದೆಯೊಳಗೆ ಭರವಸೆಯ ಸೂರ್ಯನ ಹಚ್ಚೆಯು ಮಹತ್ವ ಲಕ್ಷ್ಮೀಪತಿ ಕೋಲಾರ ಹೀಗೆ ಹೇಳಿದ್ದಾರೆ.

"ಹೊಚ್ಚ ಹೊಸ ದಾರಿಗೊಂದು ಹೊಸ ಹೆಜ್ಜೆ
ಕುಟ್ಟು ಕುರುಡನೆದೆಯಲೊಂದು ಸೂರ್ಯ ಹಚ್ಚೆ
ತೊತ್ತಳದುಳಿವಾತ್ಮಗಳು ತಲ್ಲಣದಲಿ ತಂಗುವಂತೆ
ಕೆಂಡ ನುಂಗಿ ಕೇಕೆ ಹೊಡೆದು ಕಥಕ್ಕಳಿಸೆ ಕಾಡು ನವಿಲೆ"

ಹಳೆ ಗೊಡ್ಡು ಸಂಪ್ರದಾಯಗಳಿಂದ ಮುಕ್ತಾಯ ಹೊಂದಿ ಹೊಸ ಚಿಂತನೆಗಳಿಗೆ ತೆರೆದುಕೊಳ್ಳುವಂತೆ ದುರುಳ ಆತ್ಮಗಳನ್ನು ಅಜಿಗಿಜಿಯಾಗುವಂತೆ ತುಳಿ. ತಳಮಳದ ಹೆದರಿಕೆ ಯಾಗುವಂತೆ. ಕೆಂಡವನ್ನು ನುಂಗಿ ಕೇಕೆ ಹೊಡೆದು ರುದ್ರ ನರ್ತನ ಮಾಡು ಕಾಡುನವಿಲೆ/ಕಾಡಿಸುವ ನವಿಲೆ ಎಂದು ಈ ವ್ಯವಸ್ಥೆಯ ಬಗ್ಗೆ, ಸಂಪ್ರದಾಯಗಳ ಷಡ್ಯಂತ್ರಗಳ ಬಗ್ಗೆ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಸ್ವಾಭಾವಿಕತನಕ್ಕೆ ಕಾಡು ರೂಪಕವಾದರೆ, ಕೃತಕತೆಗೆ ಮಾನವ ನಿರ್ಮಿತ ಉದ್ಯಾನವನಗಳು ಮಾದರಿಯಾಗಿದೆ. ಕವಿಗೆ ಕಾಡುತ್ತಿರುವ ಸಂವೇದ ಭಾವವು ಕಾಡಾಗಿ ಗೋಚರವಾಗಿದೆ. ಕವಿಯಾಗಲಿ ಸಮಾಜವಾಗಲಿ ಬದಲಾವಣೆಗೆ ಒಳಗಾಗಬೇಕು ಆದು ಬದಲಾವಣೆಯ ಭರವಸೆಯನ್ನು ಬೆಳಗುವ ಸೂರ್ಯನ ಹಚ್ಚೆ ಯಾವಾಗಲೂ ಎದೆಯೊಳಗೆ ಬೆಳಗಬೇಕು ಎಂದು ಕವಿ ಅಗ್ರಹಿಸಿದ್ದಾರೆ.

ಶೋಷಕರನ್ನು ರಾಕ್ಷಸರಂತೆ ಕಾಣದೆ ಅವರಲ್ಲೂ ಹೃದಯದ ಮಿಡಿತವನ್ನು ಕಾಣುವ ಲಕ್ಷ್ಮೀಪತಿ ಕೋಲಾರ ಅವರ ಕ್ಷಮಾದೃಷ್ಟಿ, ಬದುಕಿನಲ್ಲಿ ನಂಜನ್ನುಂಡು ನಗಬೇಕಾದ ನೆಲೆಗೆ. ಕೆಂಡ ನುಂಗಿ ಕೇಕೆ ಹೊಡೆದು ಕಥಕ್ಕಳಿಸುವ ಎತ್ತರಕ್ಕೆ ತಲುಪಿ ಬಿಡುತ್ತದೆ ಎಂದು ಪ್ರೊ.ವಿ.ಚಂದ್ರಶೇಖರ ನಂಗಲಿ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ತೀರ ಕೆಳಸ್ತರದಲ್ಲಿದ್ದು ಪಡುವ ಅಪಮಾನ ಅನುಭವಿಸುವ ಸಂಕಟ ಹೃದಯ ಬೋಧಕವಾದುದು. ಈ ಅಪಮಾನವು ಲಕ್ಷ್ಮೀಪತಿ ಕೋಲಾರ ಅವರು ಪತ್ರಿಕದಿಂದ ಕಂಡವರು ಯಾರಾದರೂ ಜಾತಿ ಯಾವುದೆಂದು ಕೇಳಿದರೆ ನಿಂತನೆಲ ಬಾಯ್ದೆರೆದು ನುಂಗಬಾರದೆ ಎನಿಸಿಬಿಡುತ್ತದೆ." ಇದು ಜಾತಿಯ ಅಪಮಾನ ನಿಂದನೆಗೆ ಗುರಿಯಾದ ಸಾಮಾಜಿಕ ನೆಲದಲ್ಲಿ ತುಳಿತಕ್ಕೆ ಒಳಗಾದ ಜನರು ಪಡುವ ನೋವಿನ ಅನುಭವ ಇಂತಹ ಸಾಕಷ್ಟು ಅನುಭವಗಳನ್ನು ದಲಿತ ಮಕ್ಕಳ ತೆಕ್ಕೆಯಲ್ಲಿ ಇದ್ದುಕೊಂಡು ತಾವು ಸಹ ಇಂತಹ ಅಪಮಾನಗಳಿಗೆ ಒಳಗಾಗಿದ್ದಾರೆ. ಜಾತಿಯು ಯಾರನ್ನು ಬಿಡುವುದಿಲ್ಲ, ಅದು ಎಲ್ಲರನ್ನೂ ಸೂರೆಗೊಳ್ಳುತ್ತದೆ.

ಸಮಾಜದಲ್ಲಿ ಕೆಳಸ್ತರದ ಜನಾಂಗಗಳಿಗೆ ಆಗುವ ನೋವನ್ನು ನವಿಲು ನಾಟವಾಡಬೇಕೆಂಬ ಮತ್ತು ಅತ್ಯಂತ ರುದ್ರವಾದ ಕಥಕ್ಕಳಿ ನರ್ತನ ಮಾಡಬೇಕು ಎಂದು ಕವಿ ಅಭಿಪ್ರಾಯ ಪಟ್ಟಿದ್ದಾರೆ.

ಕಾಲು ಬುಡದ ಖಿನ್ನತೆಯನು ಕೀಲು ಕೀಲಿನಲ್ಲೊತ್ತಿ
ಕೋಟಿಯಾಮದಾದಿಯ ಸುಡುಸೊಲ್ಲಾಗಿ
ಬಿಚೆಯೆತ್ತಿ ನರ್ತಿಸೆಲೆ ಸಮ್ಮೋಹಕ ದೈತ್ಯ ನವಿಲೆ

ತುಳಿತಕ್ಕೆ ಒಳಗಾದ ಜನರು ಪಡುವ ಖಿನ್ನತೆಯನ್ನು ಅಲ್ಲಿಂದ ಪಾತಳಕ್ಕೆ ತುಳಿದು ಗೌರವದಿಂದ ತಲೆಎತ್ತಿ ಬಾಳು ಎಂಬುದಾಗಿ ಕವಿ ಅಭಿಪ್ರಾಯ ಪಟ್ಟಿದ್ದಾರೆ.

ನನ್ನಿಯಿಂಚು ನೆಲವನಿಂಚು ಕೊಯಿದು ತೂಗೊ ಸಂತೆಯಲ್ಲಿ
ಬೆಳಕ ಕಣ್ಣು ಕುರುಡು ಲೋಕ ಮೂಕ
ಹಿಡಿ ಮನಸನು ಹಿಡಿದು ನೀನು ಮಣ್ಣದಾರಿ ತುಳಿಸೆಲೆ
ವಿಶ್ವಶಾಂತಿ ತೂಣೀರದ ವಂದ್ಯಾಸ್ತ್ರ ನವಿಲೆ

ಆಧುನಿಕ ನಾಗರಿಕತೆ, ಯಂತ್ರ ಸಂಸ್ಕೃತಿಗಳ ಮೂಲಕ ಹಾಯ್ದು ಬಂದಿರುವ ಜನಗಳ ದೃಷ್ಟಿ ದೋಷಗಳೇನೆಂಬುದನ್ನು ಮೊದಲೆರಡು ಸಾಲುಗಳು ಹೇಳುತ್ತಿವೆ. 'ನನ್ನಿ' ಎಂದರೆ 'ಸತ್ಯ'=(ದೇವರು) ಇದರ ಗ್ರಹಿಕೆ ಸಾಪೇಕ್ಷ ಮತ್ತು ಅಮೂರ್ತ. ನೆಲವು ಮೂರ್ತ. ನಾವಿಂದು ಬದುಕುತ್ತಿರುವ ಜಗತ್ತು ಒಂದು ಕಾಳ ಸಂತೆಯಾಗಿದೆ. ಈ ಸಂತೆಯಲ್ಲಿ ಮೂರ್ತ-ಅಮೂರ್ತ. ಸಾಪೇಕ್ಷ-ನಿರಪೇಕ್ಷ ಎಲ್ಲವನ್ನು ಇಂಚು ಇಂಚಾಗಿ ಕತ್ತರಿಸಿ ಮಾರಾಟ ಮಾಡಲಾಗುತ್ತದೆ. ಇದರಿಂದಾಗಿಯೆ ಬೆಳಕಿನ ಕಣ್ಣು ಕುರುಡಾಗಿ ಲೋಕದ ಮಾತು ಬಿದ್ದು ಹೋಗಿದೆ. ಈ ಸ್ಥಿತಿಯಲ್ಲಿ ಜನತೆಯ ಹಿಡಿ ಮನಸ್ಸನ್ನು (=ತಡೆಹಿಡಿದ ಮನಸು) ಹಿಡಿದು 'ಮಣ್ಣದಾರಿ'ಯನ್ನು ತುಳಿಸಲು ಕವಿ ನವಿಲನ್ನು ಕೇಳಿಕೊಂಡಿದ್ದಾರೆ. ಇದರ ಜೊತೆಗೆ ವಿಶ್ವ ಶಾಂತಿಯ ಬತ್ತಳಿಕೆಯಲ್ಲಿ ನಮಿಸಲರ್ಹವಾದ ಅಸ್ತ್ರವಾಗಿ ನವಿಲು ನೆಲೆಗೊಳ್ಳಬೇಕೆಂಬ ಅಭಿಲಾಷೆಯೂ ವ್ಯಕ್ತವಾಗಿದೆ. ಲಕ್ಷ್ಮೀಪತಿಯ ಕಾವ್ಯಭಾಷೆಯ ಸೂಕ್ಷ್ಮಗಳಿಗೆ ಈ ಭಾಗದಲ್ಲಿ ಹೆಚ್ಚು ವ್ಯಾಖ್ಯಾನಗಳಿಗೆ ಅವಕಾಶವಿದೆ.[22]

ಬೆಳಕು ಜ್ಞಾನದ ಸಂಕೇತವಾಗಿ ಬಳಸಿದರೆ. ಜ್ಞಾನದ ಕಣ್ಣಿಂದ ಅಂಧಕಾರದ ಲೋಕವನ್ನು ನೋಡಿದಾಗ ಆಗ ಕುರುಡು ಲೋಕ ಮೂಕವಾಗುತ್ತದೆ. ಜಾಣ ಕುರುಡುತನ ಮರೆಯುವ ಜನ ಬುದ್ಧಿಕಲಿಯಲಿಕ್ಕೆ ಸಾಧ್ಯ ಎಂದು "ಹಿಡಿ ಮನಸು ಹಿಡಿದು ನೀನು ಮಣ್ಣದಾರಿ ತುಳಿಸೆಲೆ" ಈ

ಸಾಲಿನ ಓಡಿ=ಸಂಕುಚಿತ ಅರ್ಥಕ್ಕಿಂತ ವಿಶಾಲ ಅರ್ಥವನ್ನು ಪಡೆಯುತ್ತದೆ. ಮನಸ್ಸಿನ ಓಡಿತವನ್ನೂ ಸಾಧಿಸಿ ಜೀವ ಮೂಲ ಸುಗ್ಗದಾರಿ ತುಳಿಸು ನೀನು ಎಂದು ಕವಿ ನವಿಲನ್ನು ಭಿನ್ನವಿಸಿಕೊಂಡಿದ್ದಾರೆ.

ನವಿಲು ಕೇವಲ ಒಂದು ಪಕ್ಷಿಯಾಗದೆ ಆಟನ್ನು ಮೀರಿ ನಿಲುತ್ತದೆ. ಸಮಾನತೆ ಮತ್ತು ಸಹಬಾಳ್ವೆಯನ್ನು ಕೊಟ್ಟಿರುವ ಸಂವಿಧಾನವನ್ನು ಪ್ರತಿನಿಧಿಸುತ್ತದೆ. ಷಡ್ಯಂತ್ರಗಳಿಂದ ತುಂಬಿದ ಸಾಂಪ್ರದಾಯಿಕ ಜಗತ್ತಿಗೆ ಪೆಟ್ಟು ಹೊಡೆಯುವ ಸಂದೇಶದನೆಯ ರೂಪಕವಾಗಿದೆ. ಇಡೀ ಸಮಾಜವನ್ನು ಮುನ್ನಡೆಸುವ ಹೊಸದಾರಿ ನಿರ್ಮಾಣಕ್ಕೆ ದಾರಿ ತೋರುವ ಮಾರ್ಗದರ್ಶಿಯಾಗಿ ಕಾಣುತ್ತದೆ. ಇಂತಹ ನವಿಲನ್ನು ಕಿನ್ನರಿಯಾಗಿ ನಡೆಸುವವನು ಅದೇ ಸಮಾಜದ ಕೆಳಸ್ತರದ ವ್ಯಕ್ತಿಯೇ ಎಂಬುದು ಇಲ್ಲಿ ಮರೆಯುವಂತಿಲ್ಲ. ಲಕ್ಷ್ಮೀಪತಿ ಕೋಲಾರ ಅವರ ಸಂಶೋಧದ 'ದಕ್ಷಿಣ ದಂಡಾಜೀವಿಕ' ಕೃತಿಯಲ್ಲಿನ ಆಜೀವಿಕರನ್ನು ನೆನೆಪಿಸುತ್ತದೆ. ಆಜೀವಿಕರು ಶ್ರಮಿಕ ವರ್ಗ ಮತ್ತು ತಳ ಸಮುದಾಯಗಳನ್ನು ಪ್ರತಿನಿಧಿಸುವರು. ಬಹುಶಃ ನವಿಲು ಕಿನ್ನರಿ ನುಡಿಸುವವರು ತಳಸಮುದಾಗಳಾದ ದಕ್ಕಲರು, ಮಾಸ್ತೀಕರು, ತಿಮ್ಮನ್ನು ಮಾದಿಗರ ಮಕ್ಕಳೆಂದು ಕರೆದು ಕೊಳ್ಳುತ್ತಾ ಆದಿಮ ಕಥೆಗಳನ್ನು ಹೇಳುವರು ಸೂಕ್ಷ್ಮ ಗ್ರಹಿಕೆಗೆ ನಿಲುಕುವಂತಹುದು 'ನವಿಲು' ಇಡಾದ ಸಮಾಜವನ್ನು ಪ್ರತಿನಿಧಿಸುತ್ತೆ ಎಂಬ ಅರಿವಿಗೆ ಬರುತ್ತದೆ.

ಕೂಸು ಹಿಡಿದ ಚುಕ್ಕಾಣಿಗೆ ಸಾವೆ ರೇವು ಆಗದಿರಲಿ
ಹಕ್ಕಿಗೂ ಹನಿಯಿರದ ರಣಮೆಟ್ಟುವ ಹಾದಿಯಲ್ಲು
ಗರಿಗರಿಯಲು ಶಂಕುವರಳಿ ಧವಳ ಧಾರೆ ಧರೆಯಲಿ

ಮೊದಲ ತಲೆಮಾರಿನವರು ಅಧಿಕಾರವನ್ನು ಹಿಡಿದರೆ, ಜಡತ್ವದ ವ್ಯವಹಾರದಿಂದ ಮುಕ್ತಿ ಸಿಗಲಿ. ಜೀವದ ಕೊಡಲಿಲ್ಲ, ಹಕ್ಕಿ ಮರಿಗೂ ಒಂದು ಹನಿನೀರಿಲ್ಲದ ಹಾದಿಯಲ್ಲಿ ನವಿಲಿನ ಗರಿಗಳಲ್ಲಿ ಶಂಕುವರಳಿ ಮಕ್ಕಳ ಬಾಳು ಮೌಲ್ಯಗಳು ತುಂಬಿ ಈ ಜಗತ್ತನ್ನು ಬೆಳಗಲಿ ಎಂದು ಕವಿ ಹಾರೈಸಿದ್ದಾರೆ.

"ಸಂಕ್ರಾಂತಿಯ ಬೂದಿಯಲ್ಲೂ ಕೆಂಪು ಅಣಬೆ ಹೊಡೆಚಾಚಿ
ಖಿಲವಾದ ಕನಸುಗಳ ಅಖಿಲ ಜನಕೆ ಚಿತ್ತ ನವಿಲೆ
ಹಸಿವಿನ ಉರಿಗಣ್ಣೊಳಗೆ ಎಷ್ಟು ಕಣಜ ಕಕ್ಕುಲತೆ
ದೀನಾರದೆ ದೀನ ಬದುಕು ದಿವಿನಾದ ವ್ಯೋಮಲತೆ"

ಕ್ರಾಂತಿಯ ಚಹರೆಗಳನ್ನು ಒಳಗೊಂಡ ಸಾಲುಗಳು ಇವಾಗಿವೆ. ಹಸಿವಿನ ಉರಿಗಣ್ಣಿಗೆ ಎಷ್ಟು ಕಣಜ ಕಕ್ಕುಲತೆ ಎಂದು ಪ್ರಶ್ನಿಸುವ ಮೂಲಕ ಹಸಿದವರ ನೋವಿನ ಪ್ರಮಾಣವನ್ನು ತಿಳಿಸಿದ್ದಾರೆ.

"ಕಂದು ಚಿಟ್ಟೆ ಕುಡಿಯೊಡೆಯುವ ಕುಂದರನಾಡಲ್ಲಿ" ಕೋಲಾರದಲ್ಲಿ ಚಿನ್ನದ ಗಣಿಯಿದ್ದು ಅನೇಕ ಕುಂದು ಕೊರತೆಗಳನ್ನು ನೀಗಿಸಲಾಗಿಲ್ಲದೆ. ಇದು ಕುಂದರ ಕುಂದುಕೊರತೆಗಳ ನಾಡಗಿದೆ ಇಂತಹ ವಿಷಕಾರಿ ಮನಸ್ಸುಗಳನ್ನು ಮೆಟ್ಟಿ ನಿಲ್ಲು ನವಿಲೆ ಎಂದು ಸಮಸ್ಯೆಗಳನ್ನು ಪರಿಹರಿಸುವ ಮಾರ್ಗ ಹೇಳಿದ್ದಾರೆ.

ವಿಷದ ಹಾವ ಮೆಟ್ಟು ನವಿಲೆ
ಹೆಡೆ ಹೆಡೆಗಳೆಡೆದು ಪೂತ್ಕಾರವ ಹೆಡೆಮುರಿ ಕಟ್ಟಿ

ಹೆಡೆ ಹೆಡೆಗೂ ನಾದಗಲಿಯ ನಾಟ್ಯ ಕಟ್ಟು ನಾಗನವಿಲೆ

-ನವಿಲು ಕಿನ್ನರಿ

'ಕಾಳಿಂಗ ಮರ್ದನ'ವನ್ನು ನೆನಪಿಗೆ ತರುವ ಈ ಸಾಲುಗಳಲ್ಲಿರುವ ಶಬ್ದಶಕ್ತಿ,ಮಾಂತ್ರಿಕತೆ ಸಹೃದಯರನ್ನ ಕ್ಷಣ ದಿಗ್ಭ್ರಮೆಗೊಳಿಸಿಬಿಡುತ್ತದೆ. ಕೃಷ್ಣನ ಹೆಸರೆತ್ತದೆಯೆ ಇಲ್ಲಿ ಮೂಡಿ ಬಂದಿರುವ ಪುರಾಣ ಮತ್ತು ಪ್ರಸ್ತುತಗಳ ಸಮನ್ವಯ-ಸಂಘರ್ಷಗಳ ಮನಸೆಳೆಯುವಾಗಿದೆ. 'ತೊತ್ತಳದುಳಿದಾತ್ಮಗಳು ತಲ್ಲಣದಲಿ ತಂಗುವಂತೆ. ಕಿಂಡ ನುಂಗಿ ಕೇಕೆ ಹೊಡೆದು ಕಥಕ್ಕಳಿಸಿ ಕಾಡು ನವಿಲೆ' ಎಂಬ ನುಡಿಗಳನ್ನು ನೆನಪಿಗೆ ತರುವ ಈ ಭಾಗದಲ್ಲಿ ಶೋಷಕ-ಶೋಷಿತ ಸಂಬಂಧವನ್ನು ಕ್ಷಮಾದೃಷ್ಟಿಯಿಂದ ಕಾಣುವ ಕೃಷ್ಣನ ವಿವರಗಳು ಸಂಕೇತ ರೆಂಬಂತೆ ಮೂಡಿ ಬಂದಿದೆ. 'ಶಬ್ದದೊಳಗಣ ನಿಶ್ಶಬ್ದದಂತೆ' ಎಂಬ ಅಲ್ಲಮ ಪ್ರಭುವಿನ ವಚನಕ್ಕೆ ಮೇಲಿನ ಸಾಲುಗಳು ಮಾತ್ರವಲ್ಲ. ಇಡಿ ಕವಿತೆಯು ಒಂದು ಉದಾಹರಣೆಯಾಗಿ ನಿಲ್ಲುತ್ತದೆ"

"ನಿಸರ್ಗ ಭಾಷೆ'ಯ ಮೂಲಕವೇ ವೈಯಕ್ತಿಕ ಮತ್ತು ಸಾಮೂಹಿಕ ನೆಲೆಗಳ ಸಂಬಂಧ, ಸಂಘರ್ಷ ಮತ್ತು ಹೋರಾಟಗಳನ್ನು ಬಿಂಬಿಸುವ ಕಲೆಗಾರಿಕೆ ಲಕ್ಷ್ಮೀಪತಿಗೆ ಕರಗತವಾಗಿದೆ.ಸಾಮಾಜಿಕ ಹೋರಾಟ, ಸ್ವಾತಂತ್ರ್ಯದ ಅಭೀಪ್ಸೆ ಮತ್ತು ದಾಸ್ಯ ವಿಮೋಚನೆಗಳಂಥ ಸಂಗತಿಗಳನ್ನು ನಿಸರ್ಗದೊಂದಿಗೆ ಸಂಯೋಜನೆ ಮಾಡುವ ಕ್ರಮ 'ಧ್ಯಾನಸ್ಥ' ಮನಸ್ಸಿನಿಂದ ಮಾತ್ರ ಹುಟ್ಟಬಲ್ಲುದು'. ಎಂದು ಚಂದ್ರಶೇಖರ ನಂಗಲಿಯವರು ನಿಸರ್ಗ ಭಾಷೆಯಲ್ಲಿ ಸಾಮಾಜಿಕ ಹೋರಾಟವನ್ನು ಚಿತ್ರಿಸಿರುವ ಬಗ್ಗೆ ಗುರುತಿಸಿದ್ದಾರೆ.

೨

'ಇತಿಹಾಸಮುದ್ರಕ್ಕೊ ಸೋಲು ಉಣ್ಣುತ್ತಲೇ ಬಂದಿರುವ ಮಾನವ ಘನತೆ ಮತ್ತು ನೈತಿಕತೆಗೆ ಇನ್ನಾದರೂ ಗೆಲುವು ಸಿಗಲೆಂಬ ಆಶಯವಿದೆ. ಎಂಬ ಸಮಾಜಮುಖಿ ಕಾಳಜಿಯ ದೃಷ್ಟಿಯಿಂದಲಕ್ಷ್ಮೀಪತಿ ಕೋಲಾರ ಅವರ ಬರಹಗಳು ಪ್ರಸ್ತುತ ಜೀವಪರ ಎಂಬ ಅಂಶಗಳು ತಿಳಿದು ಬರುತ್ತದೆ.

ಸಾಮಾಜಿಕ ಪಿಡುಗಾದ ಜಾತಿ ವ್ಯವಸ್ಥೆಯ ಬೇರುಗಳು ಭದ್ರವಾಗಿರುವ ನಮ್ಮ ಸಮಾಜದಲ್ಲಿ ಜಾತ್ಯಾತೀತ ಮನೋಭಾವನೆ ತಾಳಿದಅವರು, ಯಾವುದು ಜಾತಿವಾದ? ಎಂಬ ನೈತಿಕ ಪ್ರಶ್ನೆಗೆ ಉತ್ತರಿಸುವ ರೀತಿ ಜಾತಿವಾದಿಗಳಿಗೆ ಸ್ವವಿಮರ್ಶೆ ಮಾಡಿಕೊಳ್ಳವಂತಿದೆ. "ತಮ್ಮ-ತಮ್ಮ ಜಾತಿಯ ಜನರನ್ನು ತಮ್ಮ ನಿಲುವುಗಳ ಪರವಾಗಿರುವಂತೆ ಜಾತಿ ರಾಜಕಾರಣ ಮಾಡುವುದಷ್ಟೇ. ಜಾತಿವಾದವಲ್ಲ, ತಮ್ಮ-ತಮ್ಮ ನೆಲೆಗಳಿಂದ ಹುಟ್ಟುವ ಆಯಾ ಜಾತಿಗೇ ಅಂಟಿಕೊಂಡಂತಹ ಗುಣಗಳನ್ನು ಅವರು ಇತರರ ಮೇಲೆ ಪ್ರಯೋಗಿಸುವುದೇ ಅಂತಹವರು ನಿಜವಾದ ಜಾತಿವಾದವಾಗಿದೆ" ಎಂಬುದಾಗಿ ಜಾತಿಯ ಪೋಷಕ ಮಹಾಶಯರ ಬಗ್ಗೆ ಕೀಡಿಕಾರುವ ಜಾಯಮಾನದವರಾಗಿದ್ದರೆ. ಇಂತವರನ್ನು ನಾಜೂಕ. ಜಾತಿವಾದಿಗಳೆಂದಿದ್ದಾರೆ.

ನಿಸರ್ಗ ಪ್ರವಾಹ ಕಾಲ ಪ್ರತಾತದೊಳನಿಂದು
ಅರಗಳಿಗೆ, ನಿನ್ನೊಳು ನೀನೆಂದೆ
ಅಮೃತ ಕಡೆವವರೇನು ಸಾವ ಕುಡಿದಿದ್ದವರು?
ಅನಿಮಿಷವಾದಾಲೋಚನೆಗಳ ಸುಟ್ಟರೇನೋ
ನುಡಲಿಲ್ಲ ಜೀವೋನ್ಮಾದ ಭಗೀರಥ ಚಿಂತ ಸೆಲೆಗಳ
ಹೊಕ್ಕ ಕಾಡುಗಳಲ್ಲಿ ಬೇರಿ ಬಿಟ್ಟ ದಾಡಿಗಳು

ಗುಕ್ಕಡದ ಗುಹೆಗಳಲ್ಲಿ ಗುಹ್ಯ ಬದುಕುಗಳೊಡದು
ಮೌನ ನಂಗೆಯ ಗರ್ಭದಲ್ಲಿ
ತಬ್ಬಲಿಯು ತಲ್ಲೀನ ತಾನೊಡಂ ತಪಸ್ಸಲಿ ಲೀನ

-ಮಕ್ಕಲಿ ಘೊಷಾಲ್

ನಿಸರ್ಗರೂಪಕದಲ್ಲಿ ಸಂಸ್ಕೃತಿಯ ಚಹರೆಗಳನ್ನು ಹಿಡಿದಿಡುವ ಸಾಮರ್ಥ್ಯಶೀಲ ಲಕ್ಷ್ಮೀಪತಿ ಕೋಲಾರ ಅವರ ಸೃಜನಶೀಲ ಕಾವ್ಯಕ್ಕಿ ಇದೆ. ಎಂಬುವುದನ್ನು ಗುರುತಿಸಬಹುದು ಶ್ರೀಮಂತಿಕೆ ಇರುವ ತಳ ಸಂಸ್ಕೃತಿಗಳನ್ನು ನಿಸರ್ಗದ ನೈಜ್ಯ ಸೌಂದರ್ಯಕ್ಕೆ ರೂಪಕವಾಗಿ ಬಳಸಿರುವುದು ಕವಿಯ ಅಂತಸ್ಥ ಭಾವವನ್ನು ಅರಿಯಲು ಸಾಧ್ಯವಾಗುತ್ತದೆ.

“ನವಿಲು ಕಿನ್ನರಿ’ಯ ಕವನ ಸಂಕಲನದಲ್ಲಿ ಮೂಡಿಬಂದಿರುವ ಮತ್ತೊಂದು ಸಂಸ್ಕೃತಿಯನ್ನು ಅನಾವರಣ ಗೊಳಿಸುವ ಮತ್ತು ಆದಿಮ ಸಂಸ್ಕೃತಿಯ ಚಹರೆಗಳನ್ನು ಗುರುತಿಸುವ ಮಕ್ಕಳ ಘೋಷಾಲ ಪ್ರಾಮುಖ್ಯತೆ ಪಡೆದು ಕೊಂಡಿದೆ. ಮಕ್ಕಲಿ ಘೋಷಾಲ್ ಮಹಾವೀರನ ಸಮಕಾಲೀನ ಹಾಗೂ ಕೆಲದಿನಗಳ ಒಡನಾಡಿ. ಪ್ರಾಚೀನ ಭೌತವಾದಿ ಆಜೀವಿಕ ಪಂಥದ ಪ್ರಾರಂಭಿಕನೆಂದು ಗುರುತಿಸಲಾಗುತ್ತದೆ. ಗೋಶಾಲೆಯೊಂದರಲ್ಲಿ ಹುಟ್ಟಿ ಅನಾಥವಾದ ಮಕ್ಖಲಿ ಗುಲಾಮನಾಗಿದ್ದು ನಂತರ ಕಾಡು ಮೇಡುಗಳಲ್ಲಿ ಅಲೆಯುತ್ತ ತತ್ವಜ್ಞಾನಿಯಾದ ಸಂಗೀತವನ್ನ ಅದಮ್ಯವಾಗಿ ಇಷ್ಟ ಪಡುತ್ತಿದ್ದ ಮಕ್ಕಲಿ ಗುಹೆಯೊಂದರಲ್ಲಿ ಸಂಗೀತಕ್ಕೆ ಕುಣಿಯುತ್ತಿದ್ದಾಗಲೇ ಕುಸಿದು ಸತ್ತನೆಂಬ ಮಾತೂ ಇದೆ.” (ನವಿಲು ಕಿನ್ನರಿ’ ಕವನಕ್ಕೆ ಸಂಕಲನದಲ್ಲಿ ಮಕ್ಕಲಿ ಘೋಷಾಲ್ ಕವನ ಅಡಿ ಟಿಪ್ಪಣಿಯಲ್ಲಿ ಮಾಹಿತಿ ಕೊಡಲಾಗಿದೆ.)

ಮರೆಸಲಾಗಿರುವ ಆಜೀವಿಕ ಸಂಸ್ಕೃತಿಯ ಪ್ರವರ್ತಕರು ಭಾರತದಲ್ಲಿ ಕ್ರಿ.ಪೂ.೬ನೇ ಶತಮಾನದ ಹಿಡಿದು ಕ್ರಿ.ಶ ೧೫೦೦ ರವರೆಗೂ ಬದುಕುಳಿದು ಧರ್ಮದ ಸಂಸ್ಕೃತಿಯನ್ನು ಎತ್ತಿಹಿಡಿಯುವ ದಕ್ಷಿಣ ದಂಡಾಜೀವಿಕ ಸಂಶೋಧನಾ ಸಂಪ್ರಬಂಧ ಕಾಣಬಹುದು. ಮಕ್ಖಲಿ ಘೋಷಾಲ್‌ನಿಗೂ ಮತ್ತು ವೈದಿಕರಿಗೂ ಧರ್ಮ ಸಂಘರ್ಷಣೆ ನಡೆದ ಕಾಲ ಘಟ್ಟದಲ್ಲಿ ಗೋಸಾಲನ ನಿಯತಿವಾದವನು ಭಿನ್ನ ರೀತಿಯಲ್ಲಿ ಪ್ರವೇಶಿಸಲು ಇರುವ ಸಾಧ್ಯತೆಗಳನ್ನು, ಈಗೆ ಲಕ್ಷ್ಮೀಪತಿಯವರು ಪರಿಶೀಲಿಸಿದ್ದಾರೆ. “ವೈದಿಕ ದರ್ಶನವು ಪುರುಷಾರ್ಥವೆಂಬುದಕ್ಕೆ ಬಹಳ ಗಂಭೀರವಾದ ಅರ್ಥಗಳನ್ನೇ ಆರೋಪಿಸಿದೆಯಷ್ಟೇ. ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥಗಳೆಂದು ಕರೆಯಲಾಗುತ್ತದೆಯಷ್ಟೆ, ಗೋಸಾಲನನ್ನು ಭಿಕ್ಷುಕ ವ್ಯಕ್ತಿಯು ಗುಲಾಮತನದ ಹಿನ್ನೆಲೆಯಲ್ಲಿ ಅತ್ಯಂತ ತಳಸ್ತರದ ಜಾತಿಯವನೆಂದೆ ಚಿತ್ರಿಸಲಾಗಿದೆ. ಈ ತಳಸ್ತರದ ಜಾತಿ ಹಿನ್ನೆಲೆಯವನಿಗೆ ಧರ್ಮದ ಹಕ್ಕು ಅಧಿಕಾರಿಗಳಿಲ್ಲ. ಅರ್ಥ ವೆಂಬುದು ಭಿಕ್ಷುಕನಾದ ಆತನ ಪಾಲಿಗೆ ಅರ್ಥವೇ ಇಲ್ಲದ್ದು. ಕೊನೆಯದಾದ ಮೋಕ್ಷವೆಂಬ ಪರಿಕಲ್ಪನೆಯಲ್ಲಿ ನಂಬಿಕೆಯೇ ಇಲ್ಲ. ಇದ್ದರೂ ಆ ಅವಕಾಶ ಈ ಹೀನ ಜನ್ಮಕ್ಕಿಲ್ಲವೆಂದು ಶಾಸ್ತ್ರ ಸ್ಮೃತಿಗಳು ನಿರ್ಬಂಧಿಸಿದೆ. ಹೀಗಾಗಿ ಕೊನೆಗೆ ಉಳಿವ ಕಾಮವೆಂಬುದು ಎಂದಿಗೂ ಯಾರ ನಿರ್ಬಂಧನಕ್ಕೂ ಒಳಪಡದ ನಿಸರ್ಗ ಸಹಜವಾದ ಬದುಕಾಗಿದೆ. ಅದನ್ನು ವೈದಿಕ ಪ್ರಕಾರದ ಪುರುಷಾರ್ಥವೆಂದೇ ಸ್ವೀಕರಿಸಬೇಕೆಂದೇನು ನಿಯಮವಿಲ್ಲವಾದ್ದರಿಂದ ಗೋಸಾಲನು ಪುರುಷ ಪ್ರಯತ್ನಗಳೆಲ್ಲವೂ ನಿಷ್ಫಲವೆಂದಿರಲಿಕ್ಕೂ ಸಾಧ್ಯ”[19] ವೈದಿಕ ಧರ್ಮವು ತಮ್ಮ ಮೂಗಿನ ನೇರಕ್ಕೆ ಆಜೀವಿಕ ಧರ್ಮವನ್ನು ವಿಮರ್ಶೆ ಮಾಡಿದೆ. ಇದು ಆಜೀವಿಕರ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಹಂತ ಹಂತವಾಗಿ ಆಜೀವಕರನ್ನು ಇಲ್ಲವಾಗಿಸುವ ಹುನ್ನಾರವೂ! ಇದರ ಹಿಂದಿದೆ.

ವೇದ ದುಂಡೆಗಳನ್ನು ಕೆಂಡಗಳಂತೆ ಸೆರಗಲ್ಲಿ
ಪುರಷದಾಡೆಗಳನ್ನು ಕತ್ತಲ್ಲಿ ಕಟ್ಟಿಕೊಂಡು

ತಾಳೆಗರಿಗಳು ತಮ್ಮನ್ನು ತಾವೇ ಪುನಃ ಓದಿಕೊಳ್ಳುವಂತೆ
– ಮಕ್ಕಲಿ ಘೋಷಾಲ್

ವೈದಿಕ ಧರ್ಮದ ಸೂತ್ರಗಳಲ್ಲಡಗಿರುವ ವೇದ, ಪುರುಷಾರ್ಥ, ತಾಳೆಗರಿ ಇವುಗಳನ್ನು ಆಜೀವಿಕರು ಬಳಸಿದ ರೀತಿಯನ್ನು ಕವಿ 'ಕೆಂಡಗಳಂತೆ' ಎಂಬ ರೂಪಕಕ್ಕೆ ಹೋಲಿಸಿದ್ದಾರೆ.

ಛಿದ್ರೀಕೃತ ಸಂಸ್ಕೃತಿಯ ಮರು ವ್ಯಾಖ್ಯಾನದ ಮುಖೇನ ನಾಗರೀಕತೆಯ ನಿರ್ಮಾಣ ನಿಂತಿದೆ. ಈ ನಾಗರೀಕತೆ ಏಕತೆ ಅಖಂಡತೆ ಮತ್ತು ಸಮಾಜ ಸೃಷ್ಟಿ ಕಾಪಾಡುವಂತಹ ಶೋಧ ನಡೆಸುವುದು ಲಕ್ಷ್ಮೀಪತಿಯವರ ಬರಹಗಳಲ್ಲಿ ಕಾಣಬಹುದು. ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು, ಕನಸುಗಳಿಲ್ಲದ ದಾರಿಯಲ್ಲಿ ಹೋಗಲಾಗುವುದೆ?

ನಿತ್ಯ ನಿರಂತರ ಜೀವನ ಸಂಘರ್ಷದ ಅಭಿವ್ಯಕ್ತಿಯನ್ನು ಕಾವ್ಯವಾಗಿಸಿರುವುದು, ಸೃಜನ ಶೀಲ ಬರವಣಿಗೆಯಲ್ಲಿನ ತಾತ್ವಿಕ ಆಕೃತಿಯನ್ನು ಕಟ್ಟುವುದು ಲಕ್ಷ್ಮೀಪತಿ ಕೋಲಾರ ಅವರ ಸೃಜನಶೀಲತೆಯನ್ನು ಕಾಣಬಹುದಾಗಿದೆ.

ಆಧುನಿಕ ಕನ್ನಡ ಕಾವ್ಯದ ಹಣೆಪಟ್ಟಿಗಳಾಗಿ ಪರಿಗಣಿತವಾಗುತ್ತಿರು ನವೋದಯ, ನವ್ಯ, ಬಂಡಾಯ ದಲಿತ ಎಂಬ ವಿಭಾಗ ಕ್ರಮಗಳು ಒಂದು ನಿರ್ದಿಷ್ಟ ಸಿದ್ಧಾಂತದ ಕುರುಹುಗಳಾಗಿದ್ದು ಯಜಮಾನ ಸಂಸ್ಕೃತಿಯ ಪ್ರತೀಕಗಳೇ ಆಗಿವೆ. ಲಕ್ಷ್ಮೀಪತಿಯು ಇಂಥ ಯಜಮಾನ ಸಂಸ್ಕೃತಿಯ ಕುರುಹುಗಳ ಅಡಿಯಾಳಾಗದೆ. ಜನಸಂಸ್ಕೃತಿಯ ಹರಿಕಾರನಾಗಿ ಕವಿತೆಗಳನ್ನು ರಚಿಸಿದ್ದಾರೆ.

## ನೀಲಿತತ್ತಿ

ಕವಿಯೊಳಗಿನ ಭಾವನೆಗಳು ಹೇಗೆ ಕಾಡಿ ಕಾವ್ಯ ಉಗಮವಾಗುತ್ತದೆ. ಎಂಬುದನ್ನು ಸ್ವತಃ ಲಕ್ಷ್ಮೀಪತಿ ಕೋಲಾರ ಅವರು 'ನೀಲಿತತ್ತಿ' ಕವನಸಂಕಲನದಲ್ಲಿ ವ್ಯಕ್ತ ಪಡಿಸಿದ್ದಾರೆ. "ಕಾವ್ಯ ನನ್ನ ಕಲ್ಪನೆಯ ಕಮ್ಮಾರಿಕೆಯಲ್ಲಿ, ಕಾವ್ಯಾತ್ಮಕವಾಗಿ ನಾನು ಬಲವಂತಗಳನ್ನು ಕಲ್ಪಿಸಿಕೊಳ್ಳುತ್ತಾ ಕೂರುವುದಿಲ್ಲ. ಹಾಗೆ ಕೂತು ಬರೆದ ಪದ್ಯಗಳು ಎರಡನೆಯ ಬಾರಿ ಕೂಡ ನನ್ನಿಂದ ಓದಿಸಿಕೊಂಡಿಲ್ಲ. ಅವು ಸಹಜ ಸ್ಪರ್ಶದಿಂದ ವಂಚಿತವಾದ ಭಾವ ಹಾಗೂ ಭಾಷಾ ದುಂದಿನ ಅಲ್ಪಮುಷ್ಟಿಗಳು ಮಾತ್ರ. ಅಲ್ಲಿ ಲವಲವಿಕೆಯಾಗಲೀ, ಜೀವ ಧ್ವನಿಯಾಗಲೀ ಖಂಡಿತಾ ಕೇಳಿಸುವುದಿಲ್ಲ. ಇಂತಹ ಕೆಲವಾದರೂ ರಚನೆಗಳ ಸಂದರ್ಭದಲ್ಲಿ ಮತ್ತು ಅನಂತರದಲ್ಲಿ ಕಾವ್ಯ ನನ್ನನ್ನು ದೂರೀಕರಿಸಿದೆ. ನನ್ನನ್ನಿಡೀ ಜಿಗುಪ್ಸೆಯ ವಿಚಿತ್ರ ಜಿಡ್ಡು ಆವರಿಸಿಕೊಂಡು ನರಳಿಸಿದೆ. ಇದು ಕಾವ್ಯದೊಂದಿಗಿನ ನನ್ನ ಆಗೀಗಲ ವಿರಸಾತ್ಮಕ ಸಂಬಂಧದ ಘಳಿಗೆಗಳು. ಕಾವ್ಯದೊಂದಿಗಿನ ನನ್ನ ಸೋಲಿನ ಸಂಯಮರಾಹಿತ್ಯದ ಮುಖವಿದು." ಕಾವ್ಯಕ್ಕಾಗಿ ಕಾವ್ಯವನ್ನು ಸೃಷ್ಟಿಸುವುದರಲ್ಲಿ ನೈಜ್ಯತೆ ಮರೆಯಾಗಿ ಕೃತಕತೆ ತಲೆಎತ್ತಿರುತ್ತೆ ಎನ್ನುವುದು ಮೇಲ್ನೋಟಕ್ಕೆ ನಮಗೆ ಕಾಣಸಿಗುತ್ತದೆ. ಕಾವ್ಯವೆಂಬುದು ಕೇವಲ ಕಲ್ಪನೆಗಳ ಕನವರಿಕೆಯಲ್ಲಿ ಹದಗೊಂಡ ಭಾವನೆಗಳ ಲಹರಿಯೆಂದು ಸ್ಪಷ್ಟವಾಗುತ್ತದೆ.

ಕಾವ್ಯದ ಮತ್ತೊಂದು ಮುಖ ದರ್ಶನ. 'ನೀಲಿತತ್ತಿ'ಯ ಕವನ ಸಂಕಲನದಲ್ಲಿ ತಾವೇ ಪ್ರಸ್ತಾಪಿಸಿದಂತೆ. ಕಾವ್ಯದೊಂದಿಗಿನ ಇನ್ನೊಂದು ತುದಿಯ ಸಂಬಂಧವೇ ನನಗೆ ಎಲ್ಲಕ್ಕಿಂತಲು ಪ್ರಿಯವಾದುದು. ನಾನು ಹೆಚ್ಚು ತೀವ್ರವಾಗಿ ಬದುಕುತ್ತಿದ್ದೇನೆಂದು. ನನ್ನ ಅಸ್ತಿತ್ವದ ಹರ್ಷೋತ್ಕಟ ಲಹರಿಯೊಂದು ಕಾವ್ಯದೆಳೆಯಾಗಿ ನನ್ನೊಳಗೆ ಹರಿಯುತ್ತಿರುವಂತೆಲ್ಲಾ ವಿಭ್ರಮ ಅನುಭವಗಳು ಅಲ್ಲಿ ಮೈದಳೆಯುತ್ತವೆ. ಈ ಉಲ್ಲಾಸದ ಕ್ಷಣಗಳಲ್ಲಿ ಕಲ್ಪನೆ ಕೇವಲ ಸಾಪೇಕ್ಷಕ್ಕೆ ಅಗತ್ಯವಾದ

ಗಜಕಡ್ಡಿಯಾಗಿ ಮಾತ್ರ ಬಳಕೆಯಾಗುತ್ತದೆ. ಬೆಚ್ಚಿಬೀಳಿಸುವ ಕಾಣ್ಕೆಗಳು, ಜಗ್ಗುವ ಪ್ರಾಚೀನ ನೆನಪುಗಳು, ಯಾವುದೋ ಚಿರಪರಿಚಯದ ಪ್ರಶಾಂತ ಲೋಕ, ಸಾದೃಶ್ಯಗೊಳ್ಳುವ ನಾದ, ದೇಹಮೂಲಕ ಪ್ರಶ್ನೆಗಳಿಗೆಲ್ಲ ಉದಾತ್ತ ಉತ್ತರಗಳೆಂಬಂತೆ ಹರಿದು ನಮ್ಮೊಳಗೆ ಇಳಿದ ಖುಷಿಯ ಪರಿಮಳಗಳು ಪ್ರಕೃತಿ ಮತ್ತು ಹೆಣ್ಣು ಪುಟದೆಬ್ಬಿಸುವ ಮಧುರಾನುಭೂತಿಗಳು ತಮಗೆ ತಾವೆಂಬಂತೆ ವಿಲಾಸದ ಕ್ಯಾನವಾಸಿನ ಮೇಲೆ ಮೂಡಿ ಮಾಯವಾಗುತ್ತಿರುತ್ತವೆ. ಇದು ಒಬ್ಬ ಸೃಜನಶೀಲ ಕವಿಯನ್ನು ಕಾಡುವ ಕಾವ್ಯಪ್ರಜ್ಞೆ, ಸದಾ ಸಾರ್ಥಕತೆಗಾಗಿ ಹಾತೊರೆಯುವ ಆಲೋಚನೆಗಳು. ಇವರು ನಡೆಸಿದ ಕಾವ್ಯ ಲೋಕದ ಪಯಣದಲ್ಲಿ ಕಂಡುಂಡ ಭಾವಗಳನ್ನು ತನ್ನ ಅನುಭವಗಳನ್ನು ಚಿತ್ರಿಸುವ ರೀತಿ ಇದಾಗಿದೆ. ಮನಸ್ಸಿನ ತುಮುಲಗಳನ್ನು ಗ್ರಹಿಸಿ ಹಿಡಿದಿಡುವ ಸೃಜನಶೀಲ ಸಾಹಿತಿ ಇವರಾಗಿದ್ದಾರೆ.

ಕವಿತೆಯ ಹಲವು ಸಾಧ್ಯತೆಗಳಾದ ವರ್ಣನಾತ್ಮಕತೆ, ಭಾವನಿರ್ಭರತೆ, ವೈಚಾರಿಕತೆ, ಲಯಗಾರಿಕೆ, ಅಲಂಕಾರಿಕತೆ, ಮುಂತಾದವನ್ನು ಬೇರೆ ಬೇರೆ ಘಟಕಗಳಾಗಿ ತೆಗೆದುಕೊಂಡರೆ, "ಸಾರ್ಥಕ ಕವಿತೆಯೊಂದರಲ್ಲಿ ಇವೆಲ್ಲ ಅಂಶಗಳ ಅರ್ಥಪೂರ್ಣ ಸಂಯೋಜನೆ ಇರಬಹುದು" ಇವೆಲ್ಲಾ ಅಂಶಗಳನ್ನು ಲಕ್ಷ್ಮೀಪತಿ ಕೋಲಾರ ಅವರ ಕವಿತೆಗಳಲ್ಲಿ ಕಾಣಬಹುದಾಗಿದೆ.

"ಕಾಯುತ್ತಿರುವ ಮುಷ್ಟಿಗಳು" ಕವನವು ಲೇಖಕರ ಬಾಲ್ಯವನ್ನು ಹೇಳುವಂತಿದೆ ಹಾವಿನ ನರಳಾಟ, ಮುಗ್ಧ ಮನಸ್ಸಿನ ಬಾಲಕನ ಕಣ್ಣ ಮುಂದೆ ಘೋರ ನಡೆದರು ಪ್ರತಿಭಟಿಸದ ಹುಡುಗ, ಸಾವಿನ ಮುಷ್ಟಿಯಿಂದ ಪಾರಾಗಲಾಗದ ಹಾವೂ ಇಬ್ಬರ ಪರಿಸ್ಥಿತಿ ಒಂದೇ ಎಂಬಂತೆ ಭಾಸವಾಗುವ ಭಯದಿಂದಲೇ ತನ್ನ ತಾಣ ಸುಳಿಸಿ ಕೊಂಡು ಜೀವತೆತ್ತ ಹಾವೂ, ಭಯದಿಂದಲೇ ಬದುಕುತ್ತಿರುವ ಜೀವ. ಇಲ್ಲಿ ಹಾವೂ ಒಂದು ಜೀವಿಯಾಗಿ, ಬಾಲ್ಯದ ಹುಡುಗನೂ ಒಂದು ಜೀವಿಯಾಗಿ, ಅನಾಮಿಕನೂ ಒಂದು ಜೀವಿಯಾಗಿ ಕಂಡಾಗ ಒಂದು ಜೀವಿ ಇನ್ನೊಂದು ಜೀವಿಯ ನೋವನ್ನು ಕಂಡು ಮರುಗುವುದು ಮತ್ತೊಂದು ಜೀವ ತೆತ್ತುವುದು ಮಗದೊಂದು ಜೀವ ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳುವುದು, ಈ ವಿಶಿಷ್ಟ ಲಕ್ಷಣವನ್ನು ಲಕ್ಷ್ಮೀಪತಿಯವರು ಭಿನ್ನರೂಪಕಗಳನ್ನು ಬಳಸಿ ಹೋಲಿಕೆ ಕೊಟ್ಟಿದ್ದಾರೆ.

"ನಾನು ಹಾವಾದೇನೇ? ಎಂದು, ಎಲ್ಲೋ ಮುಷ್ಟಿಯೊಂದು ಕಾಯುತ್ತಿಲೇ ಇರುವುದೆಂಬಂತೆ "ಭಯದ ವಾತಾವರಣವನ್ನು ಸೃಷ್ಟಿಸಿರುವ ಲೋಕವು, ಸೃಷ್ಟಿನಿಯಮವನ್ನು ಮೀರುವ ಕಾರ್ಯ ಮನುಷ್ಯನದಾಗಿದೆ.

"ಆದರೂ ಕಟ್ಟುತ್ತಲೇ ಇದ್ದೇನೆ ಜೀವ ಸ್ವಪ್ನಗಳ ಹೊಸ ಲೋಕವೊಂದನ್ನು
ಪೂರ್ಣಗೊಳ್ಳುವ ಮುನ್ನಲೇ ಅವು ತಮ್ಮಿಂತಾವೇ ಕೆಡವಿ ಬೀಳುತ್ತಿದ್ದರೂ–

ಇವರು ಚಿಂತಕರು ಬರಹಗಾರರಾಗಿ ಮಾತ್ರವಲ್ಲದೆ ಒಬ್ಬ ಅಧ್ಯಾತ್ಮದ ಸಂತರಾಗಿಯು ಬಿಂಬಿತರಾಗುತ್ತಾರೆ ಕಾರಣ. ಅವರ ಮೂರು ಕವನ ಸಂಕಲನಗಳ ಮುನ್ನುಡಿಯ ಭಾಗಗಳನ್ನು ಗಮನಿಸಿದಾಗ ಇವರು ಹೆಚ್ಚು ಮನಸ್ಸಿಗೆ ಮಾರ್ಮಿಕತೆಯನ್ನು ಪ್ರಶ್ನಿಸುವ ಮತ್ತು ಮನಸ್ಸಿನೊಂದಿಗೆ ಸಂವಾದ ಮಾಡುವ ಅಧ್ಯಾತ್ಮ ಪಂಡಿತರಾಗಿ ಕಾಣಿಸುತ್ತಾರೆ. "ಆದರೂ ನಾನು ತಾನೇ ಅವನ ಮಾಧ್ಯಮ." ಕವಿ ಬೇರೆ ಕಾವ್ಯ ಬೇರೆ ಬರೆಯುವವರೆಗಷ್ಟೆ ಕವಿಯ ಕೆಲಸ ಬರೆದು ಲೋಕಾರ್ಪಣೆಮಾಡಿದ ಮೇಲೆ ಅದು ಓದುಗ ಸಹೃದಯನಿಗೆ ಬಿಟ್ಟದ್ದು" ಈ ರೀತಿಯ ನಿಲುವನ್ನು ಅವರ ಮೂರು ಕವನ ಸಂಕಲನಗಳ ಮುನ್ನುಡಿಯಲ್ಲಿ ಲೇಖಕರು ತಮ್ಮ ಅನಿಸಿಕೆಗಳನೂ ಹೇಳಿಕೊಂಡಿದ್ದಾರೆ.

ತಾನು ಮತ್ತು ತನ್ನಲ್ಲಿರುವ ಸುಪ್ತಪ್ರಜ್ಞೆಯೊಂದಿಗೆ ವಾಕ್ಸಮರ ನಡೆಸುವ ಲಕ್ಷ್ಮೀಪತಿ ಕೋಲಾರ ಅವರ ಕುರಿತು 'ಅವರು ಅವರೊಳಗೂ ಅವರನ್ನು ಹುಡುಕುವ ಯಾನದ ಬೆರಗೇ ನಮ್ಮನ್ನು ಹಿಂಬಾಲಿಸುವಂತೆ ಮಾಡಿದೆ' ಎಂದು 'ಕೋ' ಸಂಸ್ಕೃತಿ ಪ್ರಕಾಶನ ಈ ಬಗ್ಗೆ ಪ್ರಸ್ತಾಪಿಸಿದೆ.

ಸೃಜನಶೀಲ ವ್ಯಕ್ತಿಯ ಮನಸ್ಸಿನಲ್ಲಿ ಕಾವ್ಯ ಹೇಗೆ ಸಕ್ರಿಯವಾಗುತ್ತದೆ? ಕನಸುಗಾರಿಕೆಗೆ ಪದಗಳ ಪಲ್ಲಕ್ಕಿ ಹೇಗೆ ಸಿದ್ಧವಾಗುತ್ತದೆ? ಮನದ ಮಾಯಾ ಲೋಕದಲ್ಲಿ ಭಾವನೆಗಳು ಹೇಗೆ ಟಿಸಿಲೊಡೆದು ಹೆಮ್ಮರವಾಗುತ್ತದೋ ಎನ್ನುವ ಲಕ್ಷ್ಮೀಪತಿ ಅವರು ತಾವಾಗಿ ತಮ್ಮನ್ನು ತಾವು ಮಾತನಾಡುವ ಸ್ವಕೀಯ ಪ್ರಜ್ಞೆಯನ್ನು ರೂಢಿಸಿಕೊಂಡಿದ್ದಾರೆ.

“ತನ್ನ ತಾನರಿವುದೆಂದರೆ ಪ್ರತಿಕ್ಷಣದ ಹೊಸ ಹುಟ್ಟು ಪಡೆದಂತೆಯೆ” ಎಂಬ ನೀತಿ ಇವರ ಮೇಲೆ ಗಾಢ ಪ್ರಭಾವ ಬೀರಿದೆ. ಸದಾ ಅಂತರಮುಖಿಯಾಗಿ ಹೊರ ಜಗತ್ತಿನ ಬದುಕಿನೊಟ್ಟಿಗೆ ಹೋರಾಟ ಮಾಡುತ್ತಿರುತ್ತಾರೆ ಎಂದು ಇವರ ಬರಹದಿಂದಾಗಿ ತಿಳಿಯಬಹುದಾಗಿದೆ.

ನಮಗೆಲ್ಲಾ ಗೊತ್ತಿರುವಂತೆ ಸಾಹಿತ್ಯವೆನ್ನುವುದು ಭಾಷೆಯಲ್ಲಿ ಅಭಿವ್ಯಕ್ತ ಗೊಳ್ಳುವ ಸಂವೇದನೆ. ವಿವಿಧ ಅನುಭವ ಹಾಗೂ ಅರಿವಿನಿಂದ ಸಂಯೋಜನೆಗೊಂಡ ಸಂವೇದನೆ ಮೂಲತಃ ಭಾವ ವಲಯದ ನೆಲೆಯಾದ ಸಂವೇದನೆಯು ನಿಜವಾದ ರೂಪವನ್ನು ತಾಳುತ್ತ, ದೃಷ್ಟಿಕೋನದ ನಿರ್ದಿಷ್ಟತೆಗೆ ತಲುಪುತ್ತ, ದರ್ಶನಾತ್ಮಕ ಪ್ರಕ್ರಿಯೆಯನ್ನು ಪಡೆಯುತ್ತ ಹೋದಂತೆ, ತಾತ್ವಿಕತೆಯನ್ನು ಒಳಗೊಳ್ಳುತ್ತದೆಯೆಂದು ಅರ್ಥೈಸಬಹುದು. ಕೇವಲ ಭಾವನಾತ್ಮಕವಾಗದೆ ಭಾವ ಸಂಯೋಜನೆಯ ಸಂದರ್ಭದಲ್ಲಿ ಒಳ ಎಳೆಯಾಗಿ ಬೆಳೆಯುವ ಬೌದ್ಧಿಕತೆಯು ಸಾಹಿತ್ಯ ಕೃತಿಯೊಂದಕ್ಕೆ ತಾತ್ವಿಕ ನೆಲೆಯನ್ನು ತಂದು ಕೊಡುತ್ತದೆ. ಕೃತಿಯೊಂದು ತಾತ್ವಿಕ ನೆಲೆಯನ್ನು ಪಡೆಯಬೇಕಾದರೆ, ನಿರ್ದಿಷ್ಟ ದೃಷ್ಟಿಕೋನವಿದ್ದರೆ ಸಾಲದು. ದೃಷ್ಟಿಯು ದರ್ಶನವಾಗುವ ಪ್ರಕ್ರಿಯಾ ಪರಂಪರೆಯು ತಾತ್ವಿಕತೆಯೆನಿಸಿ ಕೊಳ್ಳುತ್ತದೆ ಅಂದರೆ ಕೃತಿಯೊಂದು ಕಂಡುಕೊಳ್ಳುವ ದರ್ಶನದ ಅಂತರ್ಗತ ತಿರುಳನ್ನು ತಾತ್ವಿಕತೆ ಎನ್ನಬಹುದು ಮತ್ತು ಸ್ಪಷ್ಟಪಡಿಸುವುದಾದರೆ ದರ್ಶನದ ವಿಸ್ತಾರಕ್ಕೆ ಬದುಕುವ ಕೇಂದ್ರಪ್ರಜ್ಞೆಯೇ ತಾತ್ವಿಕತೆ.[೧೯]

ತಾತ್ವಿಕತೆಯಿರುವ ಸಾಹಿತ್ಯವು ಕೇವಲ ಭಾವನಾತ್ಮಕವಾಗಿರುವುದಿಲ್ಲ ಅಥವಾ ಕೇವಲ ಬೌದ್ಧಿಕವಾಗಿರುವುದಿಲ್ಲ. ಕೇವಲ ಭಾವನಾತ್ಮಕತೆಯು ವಿವೇಕದಿಂದ ವಂಚಿತವಾದ ಅತಿಭಾವುಕತೆಯೊ, ಭಾವೋದ್ರೇಕವೊ ಆಗುವ ಅಪಾಯವಿರುತ್ತದೆ. ಕೇವಲ ಬೌದ್ಧಿಕತೆಯು ಸೃಜನಶೀಲವಲ್ಲದ ಒಣವರದಿ ಯಾಗುವ ಆತಂಕವನ್ನು ಹುಟ್ಟಿಸುತ್ತದೆ.[೨೦]

ನಮ್ಮ ತಾತ್ವಿಕ ನೋಟಗಳು ಒಳಗೊಳ್ಳಬೇಕಾದ ಇನ್ನೊಂದು ಅಂಶವನ್ನು ಈ ಸಂದರ್ಭದಲ್ಲಿ ಗಮನಿಸಬಹುದು ಬರೆಯದ ಬರಹಗಾರರು, ಹಾಡಲಾಗದ ಹಾಡುಗಾರರು, ಅಭಿನಯಿಸಲಾಗದ ಕಲಾವಿದರು, ಚಿತ್ರಿಸಲಾಗದ ಚಿತ್ರ ಕಲಾವಿದರು, ನಮ್ಮ ನಡುವೆ ಬದುಕುತ್ತಿದ್ದಾರೆಂಬುದನ್ನು ಬರಹಗಾರರು, ಹಾಡುಗಾರರು, ಕಲಾವಿದರು ಚಿತ್ರಕಲಾವಿದರು ಸದಾ ನೆನಪಿನಲ್ಲಿಟ್ಟು ಅವರೊಂದಿಗೆ ಅಂತರ್ ಸಂಬಂಧವನ್ನು ಸ್ಥಾಪಿಸುವ ಮನೋಧರ್ಮವನ್ನು ರೂಪಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ. “(ಅಕ್ಷರಗಳಲ್ಲಿ ಅಭಿವ್ಯಕ್ತಿಸುವ ಬರಹಗಾರರ ಕೃತಿಗಳಲ್ಲಿ ದಾಖಲುಗೊಂಡ ಬದುಕಾಗಿ ಸಂಬಂಧಿಸಿದ ಅಸಂಖ್ಯಾತ ಜನಸಮುದಾಯದ ಎದೆಯಾಳದಲ್ಲಿ ನೂರಾರು ಕೃತಿಗಳು ಕೂತಿವೆ) ಕಾಡಿಸುತ್ತಿವೆ. ಅನುಭವ ದ್ರವ್ಯ ಅಪಾರವಾಗಿದ್ದು ಅಕ್ಷರಗಳಲ್ಲಿ ಅಭಿವ್ಯಕ್ತಗೊಳ್ಳಲಾಗದೆ ಅಂತರಂಗದ ಆಕೃತಿ ಮಾತ್ರವಾಗಿ ಉಳಿಯುತ್ತಿದೆ. ಅಂಥ ಅಸಂಖ್ಯಾತ ಆಕೃತಿಗಳೊಂದಿಗೆ ಅಂತರ್ ಸಂಬಂಧ ಸಾಧಿಸುವ ಬರಹಗಾರರ ಜೊತೆ ತಾತ್ವಿಕತೆಗೆ ಹೊಸ ಆಯಾಮ ಒದಗುತ್ತದೆ.[೨೧]

ಮನುಷ್ಯನ ಸಮಸ್ತ ಅನುಭವಗಳನ್ನು ಶಿವರಾಮ ಕಾರಂತರು 'ಬಿಂಬ' ಮತ್ತು 'ಶಬ್ದ' ಎಂಬ ಎರಡು ನೆಲೆಗಳಿಂದ ವ್ಯಾಖ್ಯಾನಿಸಬಹುದೆಂದು ಹೇಳಿದ್ದಾರೆ. ನಮ್ಮ ಇಂದ್ರಿಯಾನುಭವದ ವ್ಯಾಪ್ತಿಗೊಳಪಡುವ ವಸ್ತು ವಿಷಯಗಳೆಲ್ಲವೂ 'ಬಿಂಬ'ಗಳೆನ್ನಬಹುದು. ಇಂದ್ರಿಯಾ ತೀತವಾದ ವಸ್ತು ವಿಷಯಗಳೇ 'ಶಬ್ದ' ವೆನಿಸಿಕೊಳ್ಳುತ್ತವೆ. ಕಾರಂತರ ಪ್ರಕಾರ 'ದೇವರು' ಎಂಬುದೊಂದು ಶಬ್ದ. ಇದು ಚಿತ್ತವೇದ್ಯವಾಗುವುದು ನಮಗೆ ಪರಿಚಿತವಾದ 'ಬಿಂಬ'ಗಳ ಮೂಲಕ ಮಾತ್ರ! ಇದಕ್ಕೆ ಮತ್ತೊಂದು ವಿಚಾರವನ್ನು ಸೇರಿಸುವುದಾದರೆ 'ಮೀನು' ಎಂಬ ಬಿಂಬಾತ್ಮಕ ಅಭಿವ್ಯಕ್ತಿಯನ್ನು ನಿಸರ್ಗದಲ್ಲಿರುವ ಅಗಣಿತ ಮೀನ-ಬಿಂಬಗಳೊಂದಿಗೆ ಹೋಲಿಸಿದಾಗ ಮೀನು 'ಬಿಂಬ'ವಾಗಿ ಉಳಿಯದೆ.

'ವಾರ್ಗಿಕ'ವೆನ್ನಬಹುದಾದ 'ಶಬ್ದ' ಮಾತ್ರವಾಗಿ ಬಿಡುತ್ತದೆ. ಅಂದರೆ, ಇಲ್ಲಿ ಬಿಂಬವು 'ಶಬ್ದ'ವಾಗಿಬಿಡುವ, ಶಬ್ದವೇ ಬಿಂಬವಾಗುವ ದೃಷ್ಟಿ ಪಥವೊಂದನ್ನು ಗಮನಿಸಬೇಕು. ಇದನ್ನಿಲ್ಲಿ ಪ್ರಸ್ತಾಪಿಸಿದ್ದೇಕೆದರೆ? ಲಕ್ಷ್ಮೀಪತಿಯ ಕವಿತೆಗಳಲ್ಲಿ, 'ಬಿಂಬ' ಮತ್ತು 'ಶಬ್ದ' ಗಳೆರಡೂ ಇವೆ. ಬಿಂಬಾತ್ಮಕ ರೂಪಕಗಳೆನ್ನಬಹುದಾದ ತರಗೆಲೆ, ಆ ಹೆಬ್ಬೆಟ್ಟಿನಂಥ ಪಕ್ಷಿ, ತಿರುಗು ತಕಲಿ ತಿರುಗು, ಮಾಯಾ ಉಯ್ಯಾಲೆ, ಬಯಲು ಬೆಡಗು, ನಿಲ್ಲದಲೆಮಾರಿ, ಬಿಸಿಲು ಹಿಡಿವ ಬಾಲಕ, ಆದಿಮಾಯೆಗೆ ಆದಿಶರಣು ಮುಂತಾದ ಕವಿತೆಗಳು ಸಹೃದಯರೊಂದಿಗೆ ಸ್ಥಾಪಿಸಿಕೊಳ್ಳುವ ತಾದಾತ್ಮ್ಯ ಅಪೂರ್ವವಾದುದು. ಆದರೆ ಶಬ್ದಾತ್ಮಕ ಲಹರಿಗಳೆನ್ನಬಹುದಾದ ಗಾಬು, ಸಂಚು-ತನ್ನ ಏಕತಾನ ಆವರ್ತನೆ ಮತ್ತು ತರ್ಕಗತಿಯ ವಿಚಾರಗಳಿಂದ ತುಂಬಾ ಭಾರವೆನಿಸುತ್ತದೆ. ಬಿಂಬದಿಂದ ಶಬ್ದಕ್ಕೂ, ಶಬ್ದದಿಂದ ಬಿಂಬಕ್ಕೂ ಜೀಕಿ ಜೀಕಿ ಕಣ್ಣು ಕತ್ತಲಿಟ್ಟಂತಾಗುತ್ತದೆ.ಈ ಬಗ್ಗೆ ಲಕ್ಷ್ಮೀಪತಿ ಗಂಭೀರವಾಗಿ ಚಿಂತಿಸಬೇಕಾಗಿದೆ.

'ನೀನು ನಡೆದದ್ದು ನಿರ್ವಾಣದ ನಿಟಿರಕ್ಕೆ,' ಎಂಬ ಕವಿತೆ ಮಧುರಚೆನ್ನರ 'ನನ್ನನಲ್ಲ' ದ ಉತ್ತರಾಧಿಕಾರಿಯಂತಿದೆ. ಆಧುನಿಕ ಜಗತ್ತಿನ ಹಿಪಾಕ್ರಸಿಗಳನ್ನು ನಿಃಶಬ್ದವಾಗಿ ಸ್ಫೋಟಿಸಿರುವ ಬಗೆ ಚಿತ್ತಾಪಹಾರಿಯಾಗಿದೆ. "ನಿಮ್ಮ ಪ್ರಮಥರ ಪರಿ.ಅಂಗಾವಸ್ಥೆಯಲ್ಲದೆ ಲಿಂಗಾವಸ್ಥೆ ಯಾರಿಗೂ ಇಲ್ಲ" ಎಂಬ ಅಲ್ಲಮನ ವಚನಕ್ಕೆ ಕೆತ್ತಿದ ರೂಪಕದಂತೆ ಈ ಕವಿತೆಯಿದೆ. 'ಅಂತರಂಗದನಂಗ'ವೆಂಬ ದೃಷ್ಟಿ ಭಕ್ತಿಪಂಥದ ಸಂತರ ಬದುಕಿನಿಂದ ಗ್ರಹಿಸಿದ 'ಹಂಸ' ಭಾವವಾಗಿದೆ. ಸಾವೇ ನನ್ನೊಳಗೆ ಜೀವಿಸತೊಡಗಿತು, ಆತ್ಮಗಳನ್ನೇ ಕಿತ್ತು ತಿನ್ನುವ ನೀವು ಏನು? ರಾತ್ರಿಯನ್ನು ಒದ್ದೆ ಮಾಡುವ ಕಣ್ಣುಗಳು-ಇವು 'ನೀಲಿ ತತ್ತಿ'ಯ ಬಹು ವಿಶಿಷ್ಟ ರಚನೆಗಳಾಗಿ ಕಂಡುಬರುತ್ತವೆ. ಶೋಕಗೀತೆ ಎಂಬುದು ಪಾಶ್ಚಾತ್ಯ ಕಾವ್ಯ ಪ್ರಕಾರಗಳಲ್ಲಿ ಒಂದು. ಹಳಗನ್ನಡ ಕಾವ್ಯದಲ್ಲಿ ಕಂಡುಬರುವ ದುರ್ಯೋಧನ ವಿಲಾಪ (ರನ್ನ), ಚಂದ್ರಮತಿಯ ಪ್ರಲಾಪ (ರಾಘವಾಂಕ), ತಿರುಕುಳ ವಿನಾಚಿಯ ಪ್ರಲಾಪ (ಷಡಕ್ಷರದೇವ)-ಇವನ್ನು 'ಎಲಿಜಿ' ಎಂಬಂತೆ ಪಾಶ್ಚಾತ್ಯ ಸಾಹಿತ್ಯದ ಆರಂಭದ ಅಭ್ಯಾಸ ಕಾಲದಲ್ಲಿ ಗುರುತಿಸಿರುವುದುಂಟು. 'ಟ್ರಾಜೆಡಿ'ಗಳೆಂಬ ಸುಲೋಚನದ ಮೂಲಕ ಹಳಗನ್ನಡ ಕಾವ್ಯಗಳನ್ನು ವಿಮರ್ಶಿಸಿದ ಪರಿಯನ್ನಿಲ್ಲಿ ಸ್ಮರಿಸಬಹುದು. ಅವಳ ತೊಡುಗೆ ಇವಳಿಗಿಟ್ಟು, ಇವಳ ಉಡುಗೆ ಅವಳಿಗಿಟ್ಟು ನೋಡಬಯಸಿದ ಉತ್ಸಾಹದಲ್ಲಿ ಸಂಸ್ಕೃತಿಯನ್ನು 'ಪ್ರಮಾಣ'ವಾಗಿಟ್ಟುಕೊಳ್ಳದ ಅಚಾತುರ್ಯದ ಪರಿ ನಮಗಿಂದು ಸ್ಪಷ್ಟವಾಗುತ್ತಿದೆ. ಇದೀಗ ಪ್ರಸ್ತಾಪಿಸಿದ ಲಕ್ಷ್ಮೀಪತಿಯ ಮೂರು ಕವಿತೆಗಳು ಶೋಕಗೀತೆಗಳಲ್ಲ! ಶೋಕವನ್ನೆ ಶ್ಲೋಕವನ್ನಾಗಿ ಪರಿವರ್ತಿಸಿದ ಸಂಸ್ಕೃತಿನಿಷ್ಠ ತಾತ್ವಿಕತೆ ಇಲ್ಲಿದೆ. ಕೆಂಡಸಂಪಿಗೆ ಕೇಕೆ ಹೊಡೆದು ಕಥಕ್ಕಳಿಸುವ ಕಾಡುನವಿಲಿನ ಬಗೆಯಿದು. ಜಾನಪದ ಕಾವ್ಯದ ಭಾಷೆಯಲ್ಲಿ ಹೇಳುವುದಾದರೆ ಗೆಜ್ಜೆ ಪಜ್ಜರಿಸ ನಡೆಸುತ್ತಾ ಬರುವ ಉತ್ತರಾದೇವಿಯ ಪರಿತಾಪ ಕಳೆದು ಇಳೆಯನ್ನು ಬೆಳಗಿದ ಮಳೆಯಿದು:

೧. ನನ್ನಾತ್ಮದ ಹಾವುಗೆಯ ನಿನಗೆ ತೊಡಿಸುವೆ

ಜೀವ ಮೊರೆಯೊಂದಿಗೆ ಸೆರೆಗೊಡ್ಡಿ ನಿಂತಿರುವೆ ಪು ೪೫

೨. ನಿರ್ಮಾನುಷ ನಿಶ್ಯಬ್ದದೊಳಗೆ ನನ್ನನ್ನದ್ದಿ ಬಿಡಿ
ಬೇಕಿದ್ದರೆ ಶಾಶ್ವತವಾಗಿ. ಪು ೪೬

೩. ಒದ್ದೆ ಕಣ್ಣುಗಳ, ನೆನಪು ವ್ಯಸನಗಳ,
ನನ್ನಿ ಉಸುರದ ವಿಷಾದಗಳ
ಅನ್ಯರಾತ್ರಿಗಳಲ್ಲಿ ಮಾತ್ರ ನಾನು ಬದುಕುತ್ತಿದ್ದೇನೆ
ಉಳಿದೆಲ್ಲ ಹಗಲು ಸತ್ಯಗಳು
ಸಾವಿಗಿಂತಲೂ ಗೌಣ. ಪು ೫೭

ಮಾತೃಮೂಲ ಸಂಸ್ಕೃತಿಯ ಬತ್ತದ ಚೈತನ್ಯದಿಂದ ಕಂಗೊಳಿಸುವ ಮೇಲಿನ ಸಾಲುಗಳು 'ಅಶೋಕಗೀತೆ'ಯ ಗದ್ಯಗೀತೆಗಳ ಕವಲುಗಳು, ಕಾಂಪೌಂಡು ಗೋಡೆಯೊಳಗಿನ ಕುಬ್ಜ ಸಸ್ಯಗಳಿಂದಲೂ, ವಿಲಾಸ ದೃಷ್ಟಿಯ ವಿಕರೂಪಾತ್ಮಕ ಬಳ್ಳಿಗಳಿಂದಲೂ ಇಡಿಕಿರಿದ ಕಣ್ಣಂದಿನ ಕನ್ನಡ ಕಾವ್ಯಲೋಕದಲ್ಲಿ ಯಾವುದೇ ಸರಹದ್ದುಗಳಿಲ್ಲದ, ವನ್ಯ ಸತ್ವಗಳಿಂದ ನಳನಳಿಸುವ 'ಹಲವು ಮಕ್ಕಳ ತಾಯಿ'ಯನ್ನು ಬೆಳೆದುಕೊಟ್ಟ ಲಕ್ಷ್ಮೀಪತಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.

## ನೀರ ಚಿಗುರು

ಕೃಷಿಯೇ ಪ್ರಧಾನ ಕಸುಬಾದ ಈ ದೇಶದ ಪ್ರತಿಯೊಬ್ಬ ರೈತರು 'ನೀರ ಚಿಗರನ್ನು ನೋಡದೆ ಇರಲಾರರು. ನೀರ ಚಿಗುರಿನ ಸ್ಪರ್ಶಕ್ಕೆ ಒಳಗಾಗಿಯೇ ಇರುತ್ತಾರೆ. ಯಾಕೆಂದರೆ ಮಡಿಯುವ ನೇಗಿಲ ಯೋಗಿ, ಬೇಸಿಗೆ, ಮಳೆ, ಚಳಿಗಾಲವೆನ್ನದೆ. ಸದಾ ಭೂಮಿಯೊಟ್ಟಿಗಿನ ಸಾವಯುವ ಸಂಬಂಧದ ಕೊಂಡಿ ಬೆಸಿದಿರುತ್ತದೆ. ಬಹುಶಃ ಅದೇ ರೈತನ ಉಸಿರು ಹಸಿರು. ಸಂವೃದ್ಧ ಬದುಕಿಗೆ ಅನಿವಾರ್ಯವಾದ ನಂಟು.

ಚಳಿಗಾಲದ ಬಿಳಿ ಇಬ್ಬನಿಯು ಹಸಿರು ಪೈರಿನ ಗರಿ ಮೇಲೆ ಮಾಯೆಯೊಂದು ಬೆಳ್ಳಿಯ ಮೊಟ್ಟೆ ಇಟ್ಟು ಮೋಡಿ ಮಾಡುವ ಕಾಲವದು ನೀರು ಮತ್ತು ಚಿಗುರನ್ನು ಬೇರ್ಪಡಿಸಲು ಸಾಧ್ಯವಿಲ್ಲ. ನೀರು ಇರುವೆಡೆಯಲ್ಲಿ ಚಿಗುರು, ಚಿಗುರಿರುವ ಕಡೆ ನೀರು, ಒಂದಕ್ಕೊಂದು ಪೂರಕ ಸಂಬಂಧವನ್ನು ನಿರ್ಮಿಸಿಕೊಂಡಿರುತ್ತವೆ. ಈ ತಾತ್ವಿಕತೆಯನ್ನು ಸೂಕ್ಷ್ಮ ಕವಿಮನಸ್ಸಿನ ಲಕ್ಷ್ಮೀಪತಿ ಕೋಲಾರ ಅವರು ತಮ್ಮ ಕವಿತೆಗಳ ಮೂಲಕ ಸೆರೆ ಹಿಡಿದಿರುವ ಸೆರೆಗಾರನಾಗಿದ್ದಾರೆ.

## ಗದ್ದೆ

ಕವಿಗೂ ಮತ್ತು ಕೃತಿಗೂ ಇರುವ ಸಂಬಂಧದಂತೆ, ನೀರು ಮತ್ತು 'ಚಿಗುರಿಗೂ ಇರುವ ಸಂಬಂಧ.ಒಬ್ಬ ಸಾಮಾನ್ಯ ವ್ಯಕ್ತಿಯೊಳಗೊಂದು ಸೃಜನಶೀಲ ಮನಸ್ಸು ಕಾಡುವ ಪರಿ ಹೇಗೆ ಎಂಬುದನ್ನು ಸ್ವತಹಃ ಲಕ್ಷ್ಮೀಪತಿ ಅವರೆ ವಿವರವಾಗಿ ನಿರೂಪಿಸಿದ್ದಾರೆ. ಪ್ರಮುಖವಾಗಿ ಕೃತಿಕಾರ ಮತ್ತು ಕೃತಿಯ ನಡುವಿನ ನಂಟನ ಕೊಂಡಿಯಾಗಿರುವವರು ನಡೆಸುವ ಅನುಸಂಧಾನ ಬೆರುಗು ಮೂಡಿಸುವ ರೀತಿಯಲ್ಲಿ ತಮ್ಮ ಕೃತಿಯ ಮುನ್ನುಡಿಯಲ್ಲಿ ದಾಖಲಿಸಿದ್ದಾರೆ. ಅನುಸಂಧಾನದ ಭಾವನೆಗಳಿಗೆ ಬಾಧಿಸದೆ ಅದನ್ನೂ ಯತಾವತ್ತಾಗಿ ಸ್ವೀಕರಿಸಿರುತ್ತೇನೆ.

'ಗದ್ದೆ ಕವಿತೆಯೊಳಗೆ ಪ್ರಕೃತಿ ನಿಯಮವಾದ ಸಮಾಗಮ ಸೃಷ್ಟಿಯ ಜೀವ ತಳೆದಿದೆ. ಕ್ಷೇತ್ರ ಮತ್ತು ಬೀಜಗಳ ಸಮಾಗಮ ಕವಿತೆಯ ಜೀವಾಳವಾಗಿದೆ. ತಳಸಮುದಾಯಗಳ ಮಣ್ಣಾಗೊಟ್ಟಿಗಿನ ನಂಟಿನ ಪರಿಣಾಮದಿಂದಲೇ ಇಡೀ ಜಗತ್ತು ನಿಂತಿದೆ ಎಂಬ ಮಾರ್ಮಿಕ ಸತ್ಯವನ್ನು ಲಕ್ಷ್ಮೀಪತಿ ಅವರು ಈ ಕವಿತೆಯ ಮೂಲಕ ಅಭಿವ್ಯಕ್ತಿಸಿದ್ದಾರೆ.

"ಅಲ್ಲೇ ಹುಟ್ಟಿದಂತಾ ಸಸಿ-ಸಸಿ ನೆನಪು
ಹಾದಿಬದಿಯ ಆ ಬದುವಿನ ಮೇಲೆ ಕೂರಿಸಿ
ವಾಸನಾಮಯ ಬೇರು ಕೊಟ್ಟತು"

ರೈತರು ನಾಟಿ ಮಾಡುವ ವಿಧಾನವನ್ನು ನೆನಪಿಗೆ ತರುವಂತಹ ಸಾಲುಗಳು ಇವಾಗಿವೆ. ನೆಲ್ಲಿನ ಕಾಳುಗಳನ್ನೂ ಹದಗೊಳಿಸಿ, ನೀರೆರಚ್ಚಿ, ವಾಸನಾಮಯ ಬೇರು ಕಟ್ಟುವಂತೆ ಮಾಡಿ, ನಾಟಿಗೆ ಸಿದ್ಧಗೊಳಿಸಲಾಗುತ್ತದೆ. ಈ ಪ್ರಕ್ರಿಯೆಯು ಹಲವು ಶತಮಾನಗಳ ಉರುಳಿಹೋದವು ಕಾಲದ ಬಡದಲ್ಲಿ ಕಳೆದು ಹೋದ ಲೋಕಗಳ ಬಗೆಗೆ ಜೀವಮಂಡಲದ ನಿರಾಕಾರ ನಿಗೂಢಗಳ ಬೆನ್ನಲ್ಲೇ ಕೃಷ್ಣಗಾರುಡಿ! ಎಂಬ ಮಾಯೆ ಅಭಿವ್ಯಕ್ತಿಸುವ ಸಾಲುಗಳು ಇಂತಿವೆ.

ಉರುಳುರುಳಿ ಹೋದವು ಲೋಕಾಲೋಕಗಳು
ಕಾಲ ಬುಡದಲ್ಲಿ
ಬಯಲುಗಳ ಎದೆಯಲ್ಲಿ
ಗಿರಿ ಗಹ್ವರಗಳು ಸೂಜಿಗಣ್ಣಲ್ಲಿ
ಬೆರಳ ತುದಿಯಲ್ಲಿ ಗೊಂಡಾರಣ್ಯಗಳ ಕೊನೆಗಳು
ತೆನೆ ಗೆಜ್ಜೆಯ ಕನ್ನೆಲಜ್ಜೆಗಳು
ಜೀವಮಂಡಲದ ನಿರಾಕಾರ ನಿಗೂಢಗಳು
ಒಂದರೊಳಗೊಂದಾಸಿ. ಹೊಕ್ಕಾಡಿ ಗುಕ್ಕಾಡಿ
ಜಗ್ಗಿ ಜಗ್ಗಿ ಹಿಡಿದವು ಜಕ್ಕಣಿ ಗಾಳಿಯನ್ನು
ಗಾಳಿಯ ಮೈ ಮನಸಿಗೆಲ್ಲಾ ರಂಗೇಲಿಯ ಪುಲಕ ಪೂಸಿ
ಮನದ ತುಂಬಾ ಮಣ್ಣ ಕಣ್ಣಿನಾಳದ
ಸ್ವಪ್ನ ಗುಂಗುಗಳು-ಕದಲಿತಲ್ಲಾ ಕೃಷ್ಣಗಾರುಡಿ!
ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ್ದಾರೆ.

ನಾಟಿ ಮಾಡಿದ ಪೈರನ್ನು ಒದ್ದೆ ಗದ್ದೆಯಲ್ಲಿ ನೆಟ್ಟು, ಜೀವನಾಕೆಯ ಪಲ್ಲಟವನ್ನೂ ಮುಂದಿನ ಸಾಲುಗಳ ಹೇಳುತ್ತವೆ. ಬಾಲ್ಯ ಮತ್ತು ಯೌವ್ವನಗಳ ನಡುವಿನ ಕಾಲವನ್ನು ಗುರುತಿಸುತ್ತದೆ.

ಒದ್ದೆ ಗದ್ದೆಯಲಿ ಒಳಮೈ ಮಿಂದ ಆನಂದದ ಪೈರ
ಹಚ್ಚಾನೆ ಪರಿಮಳದ ಧ್ಯಾನ ಮಾಟದಲ್ಲಿ ಓಲುತ್ತಿತ್ತು
ಕೀಟ ಕಿನ್ನರಮೇಳದ ನಾದ ನುಲಿವಮಲೇ ಅಮಲು
ಹಸಿ ಹಬೆಗೆ ಹಸಿರ ಕೂದಲ ಪುಷ್ಪಗಳರಳಿ
ಮೋಹದ ತುಡವೆ ಜೇನು
ಕಾನನದ ಕಡವೆಯಂತೋಡಿ
ಪುಷ್ಪವಂತನಾದನು ಕನ್ಯಾಪುರುಷನು!

ಫಲ ನೀಡಲು ಪರಿಪಕ್ವತೆ ಅವಶ್ಯಕವಾಗಿರುತ್ತದೆ. ಈ ಕನ್ಯಾಪುರುಷನು ಬಾಲ್ಯದಿಂದ ಬಿಡಿಸಿಕೊಂಡು ಯೌವ್ವನಕ್ಕೆ ಕಾಲಿಡಲು ಕಾಡಿನ ಕಡವೆಯಂತೆ ಧಾವಿಸಿದನು ಎಂದು ರೂಪಕ ಬಳಸಿ ಅಭಿವ್ಯಕ್ತಿಸಿದ್ದಾರೆ.

ಗದ್ದೆಯಲ್ಲಿ ನೆಟ್ಟ ಪೈರು ಹೇಗೆ ತಳತಳಿಸುತ್ತಿರುತ್ತದೆ. ಎಂಬುದನ್ನೂ ತಮ್ಮ ಕಾವ್ಯ ಭಾಷೆಗೆ ಒಗ್ಗಿಸಿರುವ ಲಕ್ಷ್ಮೀಪತಿಯವರಲ್ಲಿ ರೈತನನ್ನು ಕಾಣಲು ಸಾಧ್ಯವಾಗುತ್ತದೆ ಹರಿಹರೆಯದ ಯೌವ್ವನದ ರಂಗು ರಂಗಿನ ಕನಸುಗಳು.

"ಸೋಗೆ ನವಿಲುಗಳು ಜೋಗೆ ಹಾಕಿ ಬಣ್ಣದಲ್ಲಿ ಬಣ್ಣ ಕಲಸಿ
ಬಣ್ಣಗಳ ಬಗೆ ಬಗೆ ಬಣ್ಣಗಳಾಗಿ
ಬಣ್ಣಗಳೇ ಕೋಡಿ ಹರಿದವು ಭಣಗುಟ್ಟದ್ದೆದೆಯಲ್ಲಿ!

ತವಕ ತಲ್ಲಣಗಳನೊತ್ತ ಮನಸ್ಸಿನ ಬಣ್ಣದೋಕುಳಿಯನ್ನು ಚಿತ್ರಿಸಿರುವ ರೀತಿ ಅಮೋಘವಾಗಿದೆ ಕನ್ನೆಯ ಕಾಮದೇವನ ಜೇನಂಥ ಪ್ರಾಯ ಕಾಲಕ್ಕೆ ಹುಣ್ಣಿಮೆಯ ಚಂದ ಮಾಮನನ್ನು ಆಹ್ವಾನಿಸುವಂತಿದೆ.

'ಹೆಣ್ಣು ಗದ್ದೆಯ ನಿಮೀಲಿತ ನೀರ ನಿದ್ದೆ
ಗಮ್ಮೆನ್ನುವ ಗರ್ಭದಲ್ಲಿ ಋತುವಾಗಿ ನಿಂದೆ
ಕನ್ಯಾಪುರುಷನಿಳಿದೇ ಇಳಿದ ಇಳಿಹೊತ್ತಿನ ಏರು ಇಳೆಗೆ
ಉನ್ಮಾದ ಇಂದ್ರಿಯಕ್ಕೆ ತನ್ಮಯದ ಚಂದ್ರಿಯನೊರಗಿಸಿ
ಹಸಿರ ಅಂಡಾಣುವೇ ಈ ಕ್ಷಣ ಉಸಿರ ಜೀವಾಣುವಾಯಿತು
ಕಾಮತುಂತುರ ನೀರ ಗೊಡಗು ಓಡಿದೆ
ಸಸಿಯರಸಿಯ ಸರಸ ರಭಸಕ್ಕೆ ತತ್ಪರದಲ್ಲಿ ಮಣಿದೆ

ಪೈರಿನ ಹಸಿರು ಕಂಗೊಳಿಸುವ ಜೀವಧಾರೆಯಾದ ಭತ್ತದ ಗೊನೆಗಮರುವ ಕಾಲದಲ್ಲಿ ಕಾಣಸಿಗುವ ಸೃಷ್ಟಿ ರಹಸ್ಯಗಳನ್ನೂ ಎಳೆ-ಎಳೆಯಾಗಿ ಬಿಚ್ಚಿಡುವ ಕಲೆಗಾರಿಕೆಯನ್ನು ಈ ಸಾಲುಗಳ ಮೂಲಕ ಗಮನಿಸಬಹುದು.

ಕವಿತೆಯ ಕೊನೆಸಾಲುಗಳ ವಿರಹ ವೇದನೆಯನ್ನು ಹೇಗೆ ಸಹಿಸಲಿ ಎಂಬಂತೆ ಬಿರುಕು ಮತ್ತು ಪೈರು ಕಾಣದ ಒಣ ಗದ್ದೆಗಳ ಬವಣೆಯನ್ನು ಕವಿ ಮೌನವಾಗಿ ಸಹಿಸಲು ಹೇಗೆ ಸಾಧ್ಯ ಎಂಬ ಪ್ರಶ್ನಿಸಿದ್ದಾರೆ ವಿಷಾದ ಭಾವ ತಳೆಯುವ ಕವಿ, ಮತ್ತೆ ಮತ್ತೆ ಸಮಾಗಮಕ್ಕೆ ತೆರೆದು ಕೊಳ್ಳುವ ಸೃಷ್ಟಿ ಕ್ರಿಯೆಯಿಂದ ಲೋಕಾದ ಲೋಕಗಳು ಮರು ಸೃಷ್ಟಿಯಾಗಬೇಕು ಎಂಬ ಆಶಯವನ್ನು ಹೊಂದಿದ್ದಾರೆ.

ಆ ನನ್ನ ಪೈರು
ಜೀವ ಜೀವದ ತೇರು
ಆಗಸದ ಹಾದಿಯಲ್ಲಿ ಕೈ ಹಿಡಿದ ನೆಲಬೇರು
ಹೊರಟು ನಿಂತರೆ ಈಗ-ಸುಯ್ಯನೆಂದೇಳುವುದು
ಸುವ್ವಾಲೆ ಪದಗಳ ತಿರುತಿರುವಿ ಹಾಕಿ ಎದೆ ಕಚ್ಚಿ ಕೀಳುವುದು
ಮಧುರವಾದ ಇಂತಹ ಕ್ಷಣಗಳು ಯುಗವಾಗಲು ಕವಿ ಇಲ್ಲಿ ಅಪೇಕ್ಷಿಸುತ್ತಾ...

ಈ ಇಳಿಮರುಳ ಮುಸ್ಸಂಜೇಲಿ
ಈ ಮೌನ ಗೌರಿಯ ಪ್ರೇಮಪಾಶ ಹರಿಯಲೆಂತು?
ಈ ಸುಪ್ಪಿಸುಖಿಯಿತ್ತ ಸುಖವ ಮರೆಯಲೆಂತು?
ಈ ಗವಗತ್ತಲೆಯ ಕಾಳತಲೆಗೆ ಅವಳ ಕೊಟ್ಟು
ನನ್ನ ಹಗಲಗತ್ತಲೆಗೆ ತೆರಳಲೆಂತು?

ಎದೆಯ ಬಯಲಿನಲಿ ಉಳಿ ಹೋದ ಕಾಲವನ್ನು ಮರಳಿ ಪ್ರಶ್ನಿಸುವ ಕವಿ, ಕಾಲ ಚಕ್ರದಲ್ಲಿ ಕಳೆದ ಕ್ಷಣಗಳಿಂದ ಪಡೆದಫಲಗಳನ್ನು ಮತ್ತೆ ಮತ್ತೆ ನಿರೀಕ್ಷಿಸುವುದು ಕವಿಗಿರುವ ತವಕ ತಲ್ಲಣವನ್ನು ಹೇಳುತ್ತದೆ.

## ಹಳದಿಹೂ

ಲಕ್ಷ್ಮೀಪತಿ ಕೋಲಾರ ಅವರಿಗೆ ತಾವೋ ಬಗ್ಗೆ ಇರುವ ತತ್ಪರತೆಯು ಬಹುಶಃ ಹಳದಿಹೂ ಕವನ ಬರೆಯಲು ಪ್ರೇರಣೆ ಸಿಕ್ಕಿರಬಹುದು ಕಾರಣ 'ಕಸಿ ಮಡಗಿದ ಕಣ್ಣು' ಲೇಖನಗಳ ಸಂಗ್ರಹದಲ್ಲೂ 'ಹಳದಿ ಹೂವಿನ ಸುತ್ತಾ' ಎಂಬ ಶೀರ್ಷಿಕೆಯ ಲೇಖನವನ್ನು ಬರೆದಿದ್ದಾರೆ. "ಜ್ಞಾನ ಇರುವ ಕಡೆ ತಾವೂ ಇರುವುದಿಲ್ಲವಂತೆ! ಆದರೂ ಜ್ಞಾನವೆಂದರೇನೆಂಬುದನ್ನು ತಾವೋಯಿಂದಲೇ ಕಲಿತೆ. ಏನನ್ನಾದರೂ ಅರಿಯುವುದು ಅಥವಾ ಸತ್ಯವನ್ನು ತಿಳಿಯುವುದು ಅರ್ಧಜ್ಞಾನವಾದರೆ ಆ ಸತ್ಯದಂತೆ ಬದುಕುವುದು ಪೂರ್ಣ ಜ್ಞಾನ." ಈಗೆ ಸಾದ ಸತ್ಯದ ಹುಡುಕಾಟದಲ್ಲಿ ನಿರತರಾಗಿ ಪೂರ್ಣಜ್ಞಾನದ ಹಾದಿಯಲ್ಲಿ ನಡೆಯುವ ಲಕ್ಷ್ಮೀಪತಿ ಕೋಲಾರ ಅವರ ನೇರ ನಿಷ್ಠುರ ನಡೆತೆಗೆ ಕಾರಣವಾಗಿರಬಹುದು.

"ಉತ್ತರ ಚೀನಾದ ಹಳದಿ ನದಿ ದಂಡೆಯಲ್ಲಿ ನೆಲೆಸಿದ್ದ ಪ್ರಾಚೀನ ಬುಡಕಟ್ಟಿನ ಮುಗ್ಧ ಶ್ರದ್ಧೆಯ ಮಾಂತ್ರಿಕ ಚೀನಾ ಮತ್ತು ಬೆಡಗಿನ ಭಾವಕೋಶಗಳು ನನ್ನೊಳಗೆ ಹೊಕ್ಕು ಕಾಲವೇ ಅಲ್ಲೋಲಕಲ್ಲೋಲವಾಗಿದೆ"

ಹಳದಿ ಹೂವಿನ ಕವಿತೆಯಲ್ಲಿ ಹಳದಿ ಹೂವಿನ ಪರಿಮಳ, ಬಣ್ಣ, ಮತ್ತು ತತ್ತ್ವಗಳನ್ನು ಹೇಗೆ ಜನಜನಿತವಾದವು ಎಂದು ಸಾರಿ ಹೇಳುತ್ತದೆ. ಮೂವರು ಬೋಳು ತಲೆಯ ಗುರುಗಳು ಹಳದಿ ಹೂವಿನ ಬಗೆಗಿನ ಆಸಕ್ತಿಯನ್ನು ತೋರಿಸಿ ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುವರು ಆದರೆ ಮೂರು ಜನರು ಒಬ್ಬೊಬ್ಬರಂತೆ ಅದರ ಗುಣಗಳನ್ನು ತುಂಬಿಕೊಳ್ಳಲು ನಿರ್ಧರಿಸುವರು.

'ಒಬ್ಬ ನನಗದರ ಪರಿಮಳವೇ ಸಾಕೆಂದ
ತನ್ನ ಒರಟು ಕಂಡಿಯ ಹೊಳ್ಳೆಗಳರಳಿಸಿ
ಪರಿಮಳವನ್ನೇ ನತ್ತು ಮಾಡಿಕೊಂಡು ನಗುತ್ತ
ಹೊರಟೇ ಹೋದದಾರಿ ಸಿಕ್ಕುತ್ತ
ಸುತ್ತಮುತ್ತಾ ಅವರ ಪರಿಮಳದ ನತ್ತಿನ ಮಾತುಗಳ
ಹದವಾಗಿ ಪಾಕಗೊಂಡು ಜನಜನಿತವೇ ಆದವು

ಈಗೆ ಮತ್ತೊಬ್ಬ ಹಳದಿ ಹೂವಿನ ರಂಗು ಇಷ್ಟಪಡುತ್ತಾನೆ. ಹಳದಿ ಬಯಲು ಮಾಳದಲ್ಲಿ ಹೊರಳಾಡಿ ನಗುತ್ತಿತ್ತೆಂದೂ ಬಣ್ಣ-ಬಣ್ಣದ ಮಾತುಗಳು ಜನ-ಜನಿತವಾದವು.

ಮಗದೊಬ್ಬ ಹಳದಿ ಹೂವಿನ ತತ್ತ್ವವೇ, ತನ್ನ ಹಾದಿಯ ಅಂತಿಮ ಸತ್ಯವೆಂದ 'ಅದರ ತತ್ವವನ್ನು ಜನಪ್ರಿಯ ಮಾಡಿಸಿದ.

ಬೂರುಗದ ಬೀಜದಂತೇ ಹಾರಿಹೋದ
ತತ್ವದ ಬೀಜಗಳು ಆ ಮಣ್ಣಿಗೆ ಬಿದ್ದು
ಜೀವ ಮಿಡಿತದೊಂದಿಗೆ ಅಗಣಿತಗೊಂಡು
ಹಳದಿ ಹೂವಿನ ತತ್ವವೂ ಜನಜನಿತವಾಯಿತು



ಈ ಹಳದಿ ಹೂವು ಜಗತ್ತಿನಲ್ಲಿ ತನ್ನ ಘಾಟು ಪರಿಮಳ, ಗಾಢ ಬಣ್ಣ ಮತ್ತು ತತ್ವಗಳನ್ನು ಪಸರಿಸಿತ್ತು. ಅದರೆ ಕವಿ ಇಲ್ಲಿ,

ಹಳದಿ ಕಣ್ಣುಗಳಿಗೆ ಮಾತ್ರ
ಹಳದಿ ಹೂವೆಂದು ಗೋಚರಿಸದು!
ಎಂದು ನಿರ್ಧಾರಕ್ಕೆ ಬರುತ್ತಾರೆ.

ತಾವೋ ಮತ್ತು ತಮ್ಮ ಗುರುವಿನ ಬಗ್ಗೆ ತಮ್ಮ ಲೇಖನದಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. "ತಾವೋನ ತಾತ್ವಿಕ ನಿಗೂಢತೆ ಇವರ ಆಸಕ್ತಿ ಹುಟ್ಟಿಸಿದೆ. ಈ ಆಸಕ್ತಿ ವ್ಯಸನವಾದರೆ ನಾನು ತಾವೋನಿಂದ ದೂರವಾದಂತೆ. ವೈದಿಕೇತರ ನೆಲೆಗಳ ಭಕ್ತಿ ಪಂಥಕ್ಕೆ ಎಲ್ಲೋ ಕೊಂಚ ಹತ್ತಿರದಲ್ಲಿರುವಂತೆ ಆಗೀಗ ಭಾಸವಾಗುವ ನನ್ನೊಳಗಿನ ಉತ್ಕಟ ಭಾವಕೋಶಗಳಿಗೆ ಹಾಗಾಗಿಯೇ ತಾವೋ ಒಂದು ತಣ್ಣಗಿನ ತಾತ್ವಿಕ ಸವಾಲು

ಬೋಳು ತಲೆಯ ಗುರು! ಕವಿತೆಯಲ್ಲಿ ಮತ್ತದೇ ಹಳದಿ ಹೂವಿನ ಘಾಟು ಕಾಡು ಬೋಳು ತಲೆಯ ಗುರು ಹಳದಿ ಹೂವಿಗಾಗಿ ತಪಸ್ಸನ್ನೂ ಮಾಡಲು ಹಿಂಜರಿಯದೆ ಕೂರುವನು ಒಂದು ವೇಳೆ ಇಂದ್ರನಿಂದ ಎದುರಾಗುವ ವಿಘ್ನಗಳಿದ್ದರೆ ಅವನ್ನು ಸಹ ಸಹಿಸಿ ಮೀರುವನು ಎಂಬ ಬದ್ಧತೆಯ ಭಾಗವಾಗಿ ಕಂಡು ಬರುತ್ತಾನೆ.



ಹೂಬಣ್ಣಗಳ ನಡುವೆ ನಿರ್ಬಣ್ಣದ ಸಂತನಂತೆ
(ಥೇಟು ಸಂತನಂತೆಯೇ, ಅನುಮಾನವೇ ಇಲ್ಲ!)
ಪರಿಮಳಗಳ ನಡುವೆ ನಿರ್ವಾಸಿಕನಂತೆ
ಗಗನ ಚುಕ್ಕಿಗಳ ಎತ್ತರದಲ್ಲಿ ನೆಲದ ಎರೆಹುಳುವಂತೆ ಜುಳುಜುಳು
ದನಿ ಎತ್ತುತ್ತಾನೆ.
ಇಡೀ ಜಗತ್ತಿಗೇ ಕೇಳಿಸುತ್ತಿದೆ ಅವರ ಜಪ
ಅನುರಣಿಸುತ್ತಿದೆ ಪಾಪ
ಮೂಲೋಕಗಳನ್ನೂ ದಹಿಸಿಯೇ ಬಿಡುವಂತೆ!
ಆದರೂ ಅವನೊಬ್ಬನೆ ಲೋಕೋದ್ಧಾರಕ
ಎಂಬ ಪ್ರತೀತಿ ಎಷ್ಟು ಜನಜನಿತವಾಗಿದೆ! (ನೀರ ಚಿಗುರು ಪುಟ ೪೭)

ನೂರ್ಕಾಲದಿಂದಲೂ, ನಿಶ್ಶಬ್ದವಾಗಿ ನಡೆದ ಅವರ ಪಯಣದ ಏಳು ಬೀಳಿನ ನಿರಂತರ ಗ್ರಹಿಕೆ-ವ್ಯಾಖ್ಯಾನ ಮತ್ತು ಭಿನ್ನ-ಭಿನ್ನ ಅರಿವುಗಳ ಆಚೆಗೂ ತಾವೋ ಅನಾಮಿಕವಾಗಿಯೂ ಅಗೋಚರವಾಗಿಯೂ, ಅತರ್ಕ-ಅಗ್ರಾಹ್ಯವಾಗಿಯೂ, ನಿಗೂಢವೇ ತಾನೆಂಬಂತೆಯೂ, ತಾನು ನಿಗೂಢವೇ ತಾನೆಂಬಂತೆಯೂ ತಾನು ನಿಗೂಢವೇ ಅಲ್ಲವೆಂಬಂತೆಯೂ ಪಕ್ಕಸ ಪಡಗಿನ ನಿಲುವಲ್ಲಿ ಉಳಿದು ಬಂದಿದೆ.

ತಾವೋನ ಈ ತಾತ್ವಿಕ ನಿಗೂಢತೆಯೇ ಲಕ್ಷ್ಮೀಪತಿ ಕೋಲಾರರ ಆಸಕ್ತಿ ಹೆಚ್ಚಿಸಿದೆ. ತಾವೋ ಬಗ್ಗೆ ಯೋಚಿಸುತ್ತಾ ಹೋದಂತೆ ನನ್ನನ್ನು ನನ್ನೊಳಗೇ ಕಟ್ಟಿ ಹಾಕಿರುವ ಸಾವಿರ ದೌರ್ಬಲ್ಯಗಳು ಕಾಣಿಸುತ್ತ ಹೋಗಿ ಲಜ್ಜೆಯಿಂದ ತಲೆ ತಗ್ಗಿಸುತ್ತೇನೆ.

ಅವುಗಳನ್ನು ಮೀರಿ ಹೊರಬರಲು ಆತ್ಮಶಕ್ತಿ ಇಲ್ಲದೆ ಸೋಲುತ್ತ ಪುನಃ ಪುನಃ ಲಜ್ಜಿತನಾಗುತ್ತೇನೆ ನನ್ನನ್ನು ಲಜ್ಜಿತನನ್ನಾಗಿಸುವ ತಾವೋ ಒಂದೇ ನನಗೀಗ ಇಷ್ಟವಾಗಿರುವ ಸಂಗತಿಯಾಗಿದೆ. ನನ್ನ ಅಂತರಾಳದ ಆಳವಾಗಿದೆ.[29] ದೌರ್ಬಲ್ಯಗಳನ್ನು ಒಪ್ಪಿಕೊಳ್ಳುವ ನೈತಿಕತೆಯನ್ನು ಲಕ್ಷ್ಮೀಪತಿ ಕೋಲಾರ ಅವರಲ್ಲಿ ಗುರುತಿಸ ಬಹುದಾಗಿದೆ.

## ಅಡಿ ಟಿಪ್ಪಣಿ

೧ ಸಂಸ್ಕೃತಿ ಶ್ರಮ & ಸೃಜನಶೀಲತೆ ಪು-೧೩೩, ಬರಗೂರು ರಾಮಚಂದ್ರಪ್ಪ
೨ ಅದೇ ಪುಟ -೧೩೩
೩ ಅದೇ--ಪುಟ-೧೩೭
೪ ಅದೇ ಪುಟ-೧೩೭
೫ ಅದೇ-ಪುಟ-೧೩೮
೬ ನಡೆದುದೇ ದಾರಿ ಪುಟ-೮೩ ಪ್ರೊ.ಪಿ.ಚಂದ್ರಶೇಖರ ನಂಗಲಿ
೭ ನವಿಲು ಕಿನ್ನರಿ ಪುಟ- ೭
೮ ನಡೆದುದೆದಾರಿ ಪುಟ -೮೩ ಪ್ರೊ.ಪಿ.ಚಂದ್ರಶೇಖರ ನಂಗಲಿ
೯ ನಡೆದುದೆ ದಾರಿ ಪುಟ -೮೫ ಪ್ರೊ.ಪಿ.ಚಂದ್ರಶೇಖರ ನಂಗಲಿ
*(ವಿಕಿಪೀಡಿಯ ಅಂತರ್ಜಾಲದಲ್ಲಿ)
೧೦ ನಡೆದುದೆದಾರಿ ಪು-೮೬, ಪ್ರೊ.ಪಿ.ಚಂದ್ರಶೇಖರ ನಂಗಲಿ
೧೧ ಅಲ್ಲಮನ ಬಯಲಾಟ ಪುಟ-೫೬
೧೨ ನಡೆಮುದೆ ದಾರಿ ಅದೇ ಪುಟ- ೮೭
೧೩ ನಡೆಮುದೆದಾರಿ ಪುಟ- ೯೩
೧೪ ದಕ್ಷಿಣ ದಂಡಾ ಜೀವಿಕ-ಪುಟ -೬೬
೧೫ ನಡೆದದೆದಾರಿ ಪುಟ- ೧೦೭
೧೬ ನೀಲಿತತ್ತಿ' ಪುಟ- ೩
೧೭ ನೀಲಿ ತತ್ತಿ ಪುಟ-೩
೧೮ ನಮಸ್ಕಾರ-ಪುಟ- ೧೩
೧೯ ಅದೇ ಪುಟ- ೧೩೮ ಸಂಸ್ಕೃತಿ ಶ್ರಮ & ಸೃಜನಶೀಲತೆ
೨೦ ಅದೇ-ಪುಟ-೧೩೮ ಸಂಸ್ಕೃತಿ ಶ್ರಮ & ಸೃಜನಶೀಲತೆ
೨೧ ಅದೇ ಪುಟ-೧೩೬ ಸಂಸ್ಕೃತಿ ಶ್ರಮ & ಸೃಜನಶೀಲತೆ
೨೨ ನಡೆಮುದೆ ದಾರಿ ಪುಟ-೧೦೯
೨೩ ಕಸಿ ಮಡಗಿದ ಕಣ್ಣು ಪುಟ- ೧೩
೨೪ ಕಸಿ ಮಡಗಿದ ಕಣ್ಣು ಪುಟ- ೧೮

# ಅಧ್ಯಾಯ:೦೫

# 'ಸಾಹಿತ್ಯೇತರ ವಲಯದ ಕ್ರಿಯಾಶೀಲತೆ'

## ಸಾಹಿತ್ಯೇತರ ವಲಯ

ಸಿನಿಮಾವನ್ನು ಕುರಿತಂತೆ ಮುಖ್ಯ ವಿಭಾಗೀಕರಣವೊಂದು ಹಿಂದಿನಿಂದಲೂ ಕಂಡು ಬರುತ್ತಿದೆ.

೧) ವ್ಯಾಪಾರಿ ಚಿತ್ರ,

೨) ಕಲಾತ್ಮಕ ಚಿತ್ರ

೩) ಕಲೋದ್ಯಮ=ಚಿತ್ರರಂಗ.[೧]

ಲಕ್ಷ್ಮೀಪತಿ ಕೋಲಾರ ಅವರು ಹತ್ತಾರು ಚಲನ ಚಿತ್ರಗಳಿಗೆ ಸಾಹಿತ್ಯ ಒದಗಿಸಿದ್ದಾರೆ. ಕೆಲವೊಂದು ಚಲನ ಚಿತ್ರಗಳು ಪ್ರಶಸ್ತಿಯನ್ನು ಸಹ ಬಾಚಿಕೊಂಡಿವೆ. ಹೆಚ್ಚು ಕಲಾತ್ಮಕ ಚಿತ್ರಗಳ ಬಗ್ಗೆ ಆಸಕ್ತಿ ಇಟ್ಟುಕೊಂಡು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಂತಹ ವಿಷಯಗಳನ್ನು ಒಳಗೊಂಡಿರುತ್ತವೆ. ೧೯೯೧ರಲ್ಲಿ ಚಿತ್ರದುರ್ಗ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧವಾದ "ಚಲನಚಿತ್ರ ಮತ್ತು ನಾಟಕ: ಪುಟ್ಟ ಟಿಪ್ಪಣಿ' ಶೀರ್ಷಿಕೆಯನ್ನೊಳಗೊಂಡ ಲೇಖನ ಗಮನಿಸಿದರೆ 'ಕಮರ್ಷಿಯಲ್' ಎನ್ನುವಂತಹ ಚಲನಚಿತ್ರಗಳು ಇಂದು ವ್ಯವಸ್ಥೆಯ ಮೌಲ್ಯಗಳನ್ನು ಉದಾತ್ತೀಕರಿಸುತ್ತ ವೈಭವೀಕರಿಸುತ್ತ ಜನ ಸಮುದಾಯದ ಅಭಿರುಚಿಗಳನ್ನು ಮಲಿನಗೊಳಿಸುತ್ತಿವೆ. ಅವು ಅಭಿರುಚಿಗಳನ್ನು ಹೇಗೆ ಮಲೀನಗೊಳಿಸುತ್ತವೆ. ಯಾಕಾಗಿ ಯಥಾ ಸ್ಥಿತಿಯನ್ನು ಒಪ್ಪಿಕೊಳ್ಳುತ್ತವೆ. ಎನ್ನುವ ಚರ್ಚೆ ಈಗಾಗಲೇ ಸಾಕುಬೇಕಾದಷ್ಟು ನಡೆದು ಹೋಗಿರುವುದರಿಂದ ಇಲ್ಲಿಂದಾಚೆಗಿನ ಪರಿಸ್ಥಿತಿ ಸಾಧ್ಯತೆಗಳನ್ನು ನಾವು ಯೋಚಿಸಬಹುದೇನೊ? ಎಂಬ ನೈತಿಕ ಪ್ರಶ್ನೆಯನ್ನು ಎತ್ತಿಕೊಂಡು ವಾಸ್ತವವಾದ ಸಮಸ್ಯೆಗಳಿಗೆ ಪರ್ಯಾಯ ಹುಡುಕಲು ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದಾರೆ.[೨]

"ನಾಟಕಗಳನ್ನು ಬರೆಯಬೇಕಾದ ಜನರಿಂದು ಟೆಲಿಫಿಲ್ಮ್ ಮತ್ತು ಸೀರಿಯಲ್‌ಗಳ ಸ್ಕ್ರಿಪ್ಟ್‌ಗಳನ್ನು ಬರೆಯಲಾರಂಭಿಸಿದ್ದಾರೆ. ನಾಟಕ ರಚನೆಯ ಹಿಂದಿನ ಗಂಭೀರ ಮನಸ್ಸು ಚಿತ್ರಕಥೆ ಬರೆಯುವ ಸಂದರ್ಭದಲ್ಲಿ ಜನಪ್ರಿಯ ಅಭಿರುಚಿಗಳ ಗೀಳಿಗೆ. ಸೆಳೆತಕ್ಕೆ ಸಹಜವಾಗಿಯೇ ಒಳಪಡುತ್ತದೆ" ಇದಕ್ಕೆ ಮುಖ್ಯವಾದ ಕಾರಣ, ಹೆಚ್ಚು ಜನಪ್ರಿಯವಾಗುವ ಉದ್ದೇಶ ಹಣ, ಖ್ಯಾತಿ, ಗೌರವ ಹಿಂದೆ ಬೀಳುವ ಹವ್ಯಾಸ ಈ ರೀತಿಯಾದ ಗೀಳಿಗೆ ಒಳಗು ಮಾಡಿಕೊಳ್ಳುತ್ತದೆ. ಸಿನಿಮಾ ರಂಗದಲ್ಲಿ ಕಮರ್ಷಿಯಲ್ ಸಾಲಿಗೆ ಸೇರುವ ಚಲನ ಚಿತ್ರಗಳೇ ಹೆಚ್ಚು. ಸನ್ನಿವೇಶ ದೃಶ್ಯಗಳನ್ನು ತುಂಬಾ ವೈಭವೀಕರಿಸಿ ತೋರಿಸುತ್ತಾರೆ. ಇದರ ಉದ್ದೇಶ ಪ್ರೇಕ್ಷಕ ಮಹಾಶಯರನ್ನು ಪ್ರಚೋದನೆಗೆ ಒಳಪಡಿಸಲುವ ಸಲುವಾಗಿ ಮತ್ತು ಖ್ಯಾತಿಗೆ ಅಂಟಿಕೊಂಡು ತಮ್ಮ ಚಲನ ಚಿತ್ರಗಳನ್ನು ತೆರೆಗೆ ತರುತ್ತಾರೆ. ಇದರ ಹಿಂದೆ ಸಾಕಷ್ಟು ಕಲಾವಿದರ ಶ್ರಮವಿದ್ದರು ಕೆಲವು ಬಾರಿ ಯಶಸ್ಸು ಕೈಗೆಟುಕದಂತೆ ಆಗುತ್ತದೆ. ಇಂತಹ ಸಂದರ್ಭದಲ್ಲಿ ಸಾಕಷ್ಟು ನಿರ್ಮಾಪಕರು ಬೀದಿಗೆ ಬರುವುದು ಸಹಜ ಎಂಬಂತಹ ಪರಿಸ್ಥಿತಿ ಸಿನಿಮಾ ರಂಗ ಎದುರಿಸುತ್ತಿದೆ.[೩]

ಲಕ್ಷ್ಮೀಪತಿಯವರು ಗ್ರಹಿಕೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ದುಬಾರಿ ಚಲನ ಚಿತ್ರಗಳಿಗೆ ಕಡಿವಾಣವಾಗಿ ಸರಳ ಸಜ್ಜನಿಕೆಯ ಸಿನಿಮಾಗಳು ಈಗಾಗಲೇ ಜನಸಮುದಾಯದ ಅಭಿರುಚಿಗಳನ್ನು ಹಾಳು ಮಾಡಿರುವುದರಿಂದ ಅಂತಹವರ ಪೂರ್ವ ನಿರೀಕ್ಷೆಗಳನ್ನು ತೃಪ್ತಿಪಡಿಸಬಲ್ಲ ಸೃಷ್ಟಿಯೇ ಶ್ರೇಷ್ಠವೆನಿಸಿಬಿಡುವ ಅಪಾಯ ಹಾಗೂ ಈ ಅಪಾಯವನ್ನೇ ಕ್ರಮೇಣ. ಜೀರ್ಣಿಸಿಕೊಳ್ಳುವ ಅನಿವಾರ್ಯತೆ ಎದುರಾಗುವುದು. ಎಂಬ ಎಚ್ಚರಿಯನ್ನು ಕೊಡುತ್ತಾರೆ.[೪]

ಚಲನಚಿತ್ರ ಖಂಡಿತವಾಗಿಯೂ, ತುಂಬಾ ಮಹತ್ವದ, ಪರಿಣಾಮಕಾರೀ ಮಾಧ್ಯಮ, ಚಾಪ್ಲಿನ್, ಅಕಿರ ಕುರೋಸಾವರಿಂದ ಹಿಡಿದು, ರೇ, ಪಾಲ್ಸ್ ಘಟಕ್ ಮೋಷ್, ಅಬ್ರಹಾಂಗಳ ಶತಕವೂ ಅದ್ಭುತ ಪ್ರಯೋಗಗಳಾಗಿವೆ; ಅನನ್ಯ ಸೃಷ್ಟಿಗಳಿವೆ.ಎಲ್ಲ ವರ್ಗದ ಜನರನ್ನು ರಂಗಭೂಮಿ ಮತ್ತು ಪತ್ರಿಕೆಗಳಿಗಿಂತಲೂ ಹೆಚ್ಚು ವೇಗವಾಗಿ ಸುಲಭವಾಗಿ ಪರಿಣಾಮಕಾರಿಯಾಗಿ ತಲುಪಬಲ್ಲ ಮಾಧ್ಯಮವೆ. ಆದರೆ ದಿನ ಕಳೆದಂತೆಲ್ಲ ಈ ಸೆಲ್ಯೂಲಾಯ್ಡ್ ಜಗತ್ತು ಸಮಾಜವಾದಿ ಧೋರಣೆಗಳ ಮಟ್ಟಿಗೆ ಎಂದೆಂದಿಗೂ ಸುಲಭವಾಗಿ ಎಟುಕದ ಮಾಧ್ಯಮವಾಗಿಯೇ ಉಳಿದು ಹೋಗುತ್ತಿದೆ.

ದೃಶ್ಯ ಮಾಧ್ಯಮವು ಆಧುನಿಕ ಜಗತ್ತಿನಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಹಾಲಿವುಡ್, ಬಾಲಿವುಡ್, ಟಾಲಿವುಡ್, ಕಾಲಿವುಡ್ ಮತ್ತು ಸ್ಯಾಂಡಲ್‌ವುಡ್ ಈಗೆ ಹಲವಾರು ದೇಶ, ಭಾಷೆ, ಸಂಸ್ಕೃತಿಗಳನ್ನು ಒಳಗೊಂಡಂತೆ ದೃಶ್ಯ ಮಾಧ್ಯಮದ ವ್ಯಾಪ್ತಿ ವಿಸ್ತಾರವಾಗಿ ಬೆಳೆದು ನಿಂತಿದೆ ಕನ್ನಡ ಚಿತ್ರೋದ್ಯಮದಲ್ಲಿ ಹತ್ತು-ಹಲವು ಪ್ರಯೋಗಗಳು ನಡೆದಿವೆ. (ಕಲಾ ಚಿತ್ರಗಳ ಕಮರ್ಷಿಯಲ್ ಚಿತ್ರಗಳು, ಆಕ್ಷನ್ ಚಿತ್ರಗಳು, ಹಾಸ್ಯ, ಬೀಭತ್ಸ) ಕನ್ನಡ ಚಿತ್ರರಂಗಕ್ಕೆ ಲಕ್ಷ್ಮೀಪತಿ ಕೋಲಾರ ಅವರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಹೆಚ್ಚು ಕಲಾರಂಗದ ಚಲನ ಚಿತ್ರಗಳಿಗೆ ದುಡಿದಿದ್ದಾರೆ.

೨೦೦೫ ರಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕಾರ ಪಡೆದ ಗಿರೀಶ್ ಕಾಸರವಳ್ಳಿ ನಿರ್ದೇಶನ ಮಾಡಿದ "ಹಸೀನಾ" ಚಿತ್ರಕ್ಕೆ ಚಲನಚಿತ್ರ ಸಂಭಾಷಣೆಯನ್ನು ಬರೆದಿದ್ದಾರೆ.

೨೦೦೪-೦೫ನೇ ಸಾಲಿನ 'ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ' 'ಬೇರು' ಚಿತ್ರಕ್ಕೆ ಉತ್ತಮ ಗೀತರಚನೆಗೆ ಪ್ರಶಸ್ತಿಯನ್ನು ಪಡೆದಿದ್ದಾರೆ. ಬೇರು ಚಿತ್ರದ ನಿರ್ದೇಶಕ ಪಿ.ಶೇಷಾದ್ರಿ, 'ಬೇರು. ರಾಷ್ಟ್ರ ಪ್ರಶಸ್ತಿ ಪುರಸ್ಕಾರ ಸಹ ತನ್ನದಾಗಿಸಿಕೊಂಡಿದೆ.

೨೦೦೫-೦೬ ನೇ ಸಾಲಿನಲ್ಲಿ' ಮುಖಾಮುಖಿ, ಚಲನ ಚಿತ್ರಕ್ಕೆ ಚಲನಚಿತ್ರ ಸಂಭಾಷಣೆಯನ್ನು ಬರೆದು ಕರ್ನಾಟಕ ರಾಜ್ಯಚಲನಚಿತ್ರ ಪ್ರಶಸ್ತಿಯನ್ನು ಪಡೆದಿದ್ದಾರೆ.

೨೦೧೦-೧೧ರಲ್ಲಿ ಕೆ.ಶಿವರುದ್ರಯ್ಯ ನಿರ್ದೇಶನದ "ಭಗವತಿ ಕಾಡು" ಚಿತ್ರಕ್ಕೆ ಸಂಭಾಷಣೆ ರಚಿಸಿ ಚಲನಚಿತ್ರ ಉತ್ತಮ ಸಂಭಾಷಣೆ ರಚನೆಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಬರವಣಿಗೆಯ ಕೃಷಿಯಲ್ಲಿ ತೊಡಗಿಸಿಕೊಂಡು ಉತ್ತಮ ಸಾಧನೆಗಳನ್ನು ಮಾಡಿದ್ದಾರೆ. ಚಲನಚಿತ್ರ ಸಂಭಾಷಣೆ ಮತ್ತು ಗೀತ ರಚನೆಗಳನ್ನು ಮಾಡಿರುವ. ಕೆ.ಶಿವರುದ್ರಯ್ಯ ನಿರ್ದೇಶನದ "ಮೇಷ ವರ್ಷಿಣಿ". ಟಿ.ಎಸ್.ನಾಗಾಭರಣ ನಿರ್ದೇಶನದ 'ವಸುಂಧರ' ಚಲನಚಿತ್ರಗಳಿಗೆ ಸಂಭಾಷಣೆವನ್ನು ಬರೆದಿದ್ದಾರೆ. ಹಾಗೆಯೇ ಟಿ.ಎಸ್.ನಾಗಾಭರಣ ನಿರ್ದೇಶನದ 'ನೀಲಾ' ಮತ್ತು ಪ್ರವಾಸೋದ್ಯಮ ಕುರಿತ ಧಾರವಾಹಿ ಯಾದ 'ಸುತ್ತೋಣ ಈ ನಾಡು'ಗೆ ಗೀತ ರಚನೆ ಮಾಡಿದ್ದಾರೆ. ಪಿ.ಶೇಷಾದ್ರಿ ನಿರ್ದೇಶನದ 'ವಿಮುಕ್ತಿ' ಚಲನಚಿತ್ರಕ್ಕೆ ಚಿತ್ರಕತೆಯನ್ನು ಒದಗಿಸಿರುವ ಲಕ್ಷ್ಮೀಪತಿ ಕೋಲಾರ ಅವರು ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂದಿಗೂ ತಮ್ಮನ್ನು ಚಿತ್ರಕಥೆ, ಸಂಭಾಷಣೆ, ಗೀತರಚನಾಕಾರರಾಗಿ ತೊಡಗಿಸಿಕೊಂಡಿದ್ದಾರೆ. ಬರಹವನ್ನೇ ನಂಬಿ ಬದುಕು ಸಾಗಿಸುತ್ತಿರುವ ಬರಹಗಾರರಾಗಿ ನಮಗೆ ಕಾಣಸಿಗುತ್ತಾರೆ.

## ಸಾಕ್ಷ್ಯಚಿತ್ರ

"ಸಾಕ್ಷ್ಯಚಿತ್ರಗಳಲ್ಲಿ ವಿವರಣೆಗಳಿಗಿಂತ ಒಳನೋಟವಿರಬೇಕು ಮಾಹಿತಿಯೆಲ್ಲ ಅಂತರ್ಜಾಲದಲ್ಲೇ ದೊರಕುತ್ತಿವೆ. ಒಳ ಸೂಕ್ಷ್ಮಗಳನ್ನು ಚಿತ್ರಿಸಲು ಸಾಕ್ಷ್ಯಚಿತ್ರ ಪೂರಕ ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ಅಭಿಪ್ರಾಯ ಪಟ್ಟಿದ್ದಾರೆ.' (ಪ್ರಜಾವಾಣಿ ಪತ್ರಿಕೆ ಇಂದ ಮಾಹಿತಿ ) ಸಾಕ್ಷ್ಯ ಚಿತ್ರಗಳಿಗೂ ಚಿತ್ರಕತೆ ಬರೆದಿದ್ದು ಕರ್ನಾಟಕದ ಜಾನಪದ ಭೂಹೋರಾಟಗಳು, ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ, ಆರ್.ನಾಗೇಶ್, ರಂಗ ಕರ್ಮಿ, 'ಮನುಷ್ಯ

ಜಾತಿ ತಾನೊಂದೇ ವಲಂ' ಶಬ್ದ ಬೆಳಗಿನ ರೂಪಕ, ಸಂಧ್ಯಾ ಸುರಕ್ಷಾ ಮತ್ತು ಭಾಗ್ಯದ ಲಕ್ಷ್ಮೀಬಾರಮ್ಮ ಮುಂತಾದ ಸಾಕ್ಷ್ಯಚಿತ್ರಗಳಿಗೆ ಚಿತ್ರಕತೆ ಬರೆದಿರುವ ಲಕ್ಷ್ಮೀಪತಿ ಕೋಲಾರ ಅವರು ಸಾಕ್ಷ್ಯಚಿತ್ರಗಳನ್ನು ನಿರ್ದೇಶಿಸಿ. ಇವರು ನಿರ್ದೇಶನ ಮಾಡಿರುವ ಸಾಕ್ಷ್ಯಚಿತ್ರಗಳು, ಕನ್ನಡ ಲಿಪಿಯ ಉಗಮ ಮತ್ತು ವಿಕಾಸ -ಭಾಗ ಸಿ.ಐ.ಐ.ಎಲ್ ಯೋಜನೆಗಳಲ್ಲಿ ಕಾರ್ಯ ನಿರ್ವಹಿಸುವ ಸಂದರ್ಭದಲ್ಲಿ, ೧–೨, ಲಂಕೇಶ್ ಭಜಂತ್ರಿ, ವಾರ್ತಾ ಇಲಾಖೆಯ ಸಹಯೋಗದೊಂದಿಗೆ, ಮತ್ತು ಬರಬೇಡ–ಡಾ ಪರಮಶಿವಯ್ಯ ವರದಿ ಆಧರಿಸಿದ ನೀರು ಸಧ್ಬಳಕೆಯ ಕುರಿತು ಅತ್ಯಂತ ಆಧುನಿಕ ತಂತ್ರಜ್ಞಾನಗಳನ್ನು ಬೆಳಸಿ ಚಿತ್ರಿಸಲಾಗಿದೆ.

"ಸ್ವಂತ ಕವಿತೆ ಓದು"- ಏಳು ಜನ ಕನ್ನಡದ ಸುಪ್ರಸಿದ್ಧ ಕವಿಗಳು ತಮ್ಮ ಸ್ವರಚಿತ ಕವಿತೆಗಳ ವಾಚನದ ದೃಶ್ಯ ದಾಖಲೆ ಯೊಂದಿಗೆ ನಿರ್ದೇಶನ ಮಾಡಿ ಸಾಕ್ಷ್ಯಚಿತ್ರಗಳ ನಿರ್ದೇಶಕರಾಗಿಯು ಸೇವೆಸಲ್ಲಿಸಿದ್ದಾರೆ. ಇನ್ನೂ ಅನೇಕ ಸಾಕ್ಷ್ಯಚಿತ್ರಗಳಿಗೆ ಚಿತ್ರಕಥೆಯನ್ನು ಬರೆದು ಕೊಟ್ಟರು ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿಲ್ಲದ ಕಾರಣ ಅವುಗಳನ್ನು ಇಲ್ಲಿ ನಮೂದಿಸಲಾಗಿಲ್ಲ.

## ಪತ್ರಿಕಾ ವಲಯ:

ಲಕ್ಷ್ಮೀಪತಿ ಕೋಲಾರ ಅವರು ತಮ್ಮ ಕಾಲೇಜು ದಿನಗಳಿಂದಲೂ ಪತ್ರಿಕೆಗಳ ಒಡನಾಟ ಬೆಳೆಸಿಕೊಂಡವರು. ತಮ್ಮ ಹೋರಾಟದ ಬದುಕಿನಲ್ಲಿ ಪತ್ರಿಕಾ ರಂಗವನ್ನು ಹೋರಾಟದ ಅಂಗವಾಗಿ ಬಳಸಿಕೊಂಡವರು ನಂತರದ ದಿನಗಳಲ್ಲಿ ಪತ್ರಿಕಾ ಸಂಪಾದಕರಾಗಿಯೂ ಹಲವು ಪತ್ರಿಕೆಗಳಲ್ಲಿ ದುಡಿದಿದ್ದಾರೆ. ಸಂಪಾದಕರಾಗಿ 'ಸುದ್ದಿ ಸಂಗಾತಿ' ವಾರ ಪತ್ರಿಕೆಯಲ್ಲಿ ೧೯೯೦–೧೯೯೧ರಲ್ಲಿ ಕಾರ್ಯನಿರ್ವಹಿಸಿದ್ದರು.

'ಹಾಡು ಪಾಡು' ಆಂದೋಲನ ದಿನ ಪತ್ರಿಕೆಯ ಸಾಪ್ತಾಹಿಕ ವಿಭಾಗ ಮೈಸೂರು:೧೯೯೨

'ಸಂಚಿಕೆ' ದಿನಪತ್ರಿಕೆ ಮತ್ತು ವಾರ ಪತ್ರಿಕೆ ಕೋಲಾರ

'ಅನಿಕೇತನ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿತ

ತ್ರೈಮಾಸಿಕ ಪತ್ರಿಕೆ–೨೦೦೧–೨೦೧೪

–ಸಂಕುಲ–ಪ್ರದರ್ಶನ ಕಲೆಗೆ ಸಂಬಂಧಿಸಿದ ಪಾಕ್ಷಿಕ ಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

– ಅರಗಿಣಿ' ಸಿನಿಮಾ ವಾರ ಪತ್ರಿಕೆ (೧೯೮೮–೧೯೮೯)

– ಲೋಕ ಜಾನಪದ–ಕರ್ನಾಟಕ ಜಾನಪದ ಅಕಾಡೆಮಿ ಪ್ರಕಟಿತ ತ್ರೈ ಮಾಸಿಕ ಪತ್ರಿಕೆ

– 'ಪುಸ್ತಕ ಲೋಕ' ಕರ್ನಾಟಕ ಪುಸ್ತಕ ಅಭಿವೃದ್ಧಿ ಪ್ರಾಧಿಕಾರ ಪ್ರಕಟಿತ ತ್ರೈಮಾಸಿಕ ಪತ್ರಿಕೆ

ಹಲವಾರು ಪತ್ರಿಕೆ ವಲಯದಲ್ಲಿ ಸೇವೆ ಸಲ್ಲಿಸಿದ ಅನುಭವಿ ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ ಇಂದಿಗೂ ಪತ್ರಿಕೆಗೆಗಳಲ್ಲಿ ತಮ್ಮ ಬರಹಗಳು ಪ್ರಕಟವಾಗುತ್ತಲೇ ಇವೆ.

## ಭಾಗವಹಿಸಿದ್ದ ಪ್ರಮುಖ ಕವಿಗೋಷ್ಠಿಗಳು;

ನವಿಲು ಕಿನ್ನರಿ, ನೀಲಿತತ್ತಿ & ನೀರಚಿಗುರು ಮೂರು ಕವನ ಸಂಕಲನಗಳನ್ನು ಹೊರತಂದಿರುವ ಲಕ್ಷ್ಮೀಪತಿಕೋಲಾರ ಅವರು ತಮಗೆ ಅವಕಾಶ ಸಿಕ್ಕಾಗಲೆಲ್ಲಾ ಕವಿ ಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಅವುಗಳು ಈ ಕೆಳಗಿನಂತಿವೆ.

➢ 'ಕಾವ್ಯಾರ್ಧಶತಿ' -ನವದೆಹಲಿ ೧೯೯೮ ಕೇಂದ್ರ ಸಾಹಿತ್ಯ ಅಕಾಡೆಮಿ ಅಯೋಜಿಸಿದ್ದ ರಾಷ್ಟ್ರಮಟ್ಟದ ಕವಿಗೋಷ್ಠಿ.

➢ ಭಾರತೀಯ ಕಾವ್ಯೋತ್ಸವ-೨೦೦೭ ತ್ರಿಷೂರ್-ಕೇರಳ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ ರಾಷ್ಟ್ರೀಯ ಕವಿಗೋಷ್ಠಿ.

➢ ರಂಗಮಂಡಲ-ಭೂಪಾಲ-ರಾಷ್ಟ್ರೀಯ ಕವಿಗೋಷ್ಠಿ

➢ ದಸರಾ ಕವಿಗೋಷ್ಠಿ -ಮೈಸೂರು

➢ ಕಾವ್ಯ ಸಂಕ್ರಾಂತಿ-ಬೆಂಗಳೂರು ದೂರದರ್ಶನ

➢ ಉಗಾದಿ ಕವಿಗೋಷ್ಠಿ-ಬೆಂಗಳೂರು ದೂರದರ್ಶನ

➢ ಹಂಪಿ ಉತ್ಸವ ೨೦೦೪ ಮತ್ತು ೨೦೦೭

➢ ನವರಸಪುರ ಉತ್ಸವ ೨೦೦೦ ತರಳ ಬಾಳು ಕೇಂದ್ರ, ಬೆಂಗಳೂರು

➢ ಕನ್ನಡ ಕವಿಗೋಷ್ಠಿ- ನವದೆಹಲಿ-ದೆಹಲಿ ಕರ್ನಾಟಕ ಸಂಘ

➢ ರಾಷ್ಟ್ರೀಯ ಕವಿಗೋಷ್ಠಿ-ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ ವಿಜಯವಾಡ.

➢ ವಿಶ್ವ ಕನ್ನಡ ಸಮ್ಮೇಳನ-ಬೆಳಗಾವಿ

➢ ಚಿತ್ರದುರ್ಗ, ತುಮಕೂರು, ಮತ್ತು ಮಡಿಕೇರಿಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ.

➢ ಮೈಸೂರು ದಸರ-೨೦೧೩ ಯುವ ಕವಿಗೋಷ್ಠಿಯ ಅಧ್ಯಕ್ಷತೆ ಈಗೆ ಹತ್ತು ಹಲವು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದು, ಇವರ ಪ್ರತಿಭೆಗೆ ಕನ್ನಡಿ ಹಿಡಿದಂತಿದೆ.

## ಫೆಲೋಶಿಫ್

ಲಕ್ಷ್ಮೀಪತಿ ಕೋಲಾರ ಅವರು ಸಾಹಿತ್ಯ ಮತ್ತು ಸಾಹಿತ್ಯೇತರ ವಲಯದಲ್ಲಿ ಕ್ರಿಯಾಶೀಲರಾಗಿದ್ದು ಇವರ ಪ್ರತಿಭೆಗೆ ಹಲವು ಫೆಲೋಶಿಫ್ ಮತ್ತು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಅವುಗಳು ಈ ಕೆಳಗಿನಂತಿವೆ.

**ಫೆಲೋಶಿಫ್:-**

೧) ಆದಿಮ ಶಿವರಹಸ್ಯ & ಜೇನು ಕುರುಬ ಬುಡಕಟ್ಟು ಮೂಲದ ಆಚರಣಾ ಪ್ರಧಾನ ಅಧ್ಯಯನ) ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಕೇಂದ್ರ ಸರ್ಕಾರ.

೨) ದಕ್ಷಿಣ ದಂಡಾ ಜೀವಿಕ: ೨೦೧೦-೧೧ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಯಿಂದ ಫೆಲೋಷಿಪ್ ಸಂಪ್ರಬಂಧ.

೩) ೨೦ನೇ ಶತಮಾನ ಕಂಡಂತೆ ಕನಕ: ರಾಷ್ಟ್ರೀಯ ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.

## ಪ್ರಶಸ್ತಿ/ ಪುರಸ್ಕಾರಗಳು:

೧) ಬೇರು: ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ:೨೦೦೪-೦೫

೨) ಮುಖಾಮುಖಿ : ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ೨೦೦೫-೦೬

೩) 'ಭಗವತಿ ಕಾಡು' ಚಲನಚಿತ್ರದ ಉತ್ತಮ ಸಂಭಾಷಣೆ ರಚನೆಗಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ-೨೦೧೦-೧೧

೪) ಕಾಲುದಾರಿ : ವಿಮರ್ಶಾ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ-೨೦೦೧

೫) ಅಲ್ಲಮನ ಬಯಲಾಟ : ನಾಟಕಕ್ಕೆ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ
೬) ಪರ್ಲ ಕೃಷ್ಣಭಟ್ಟ ಕಾವ್ಯ ಪ್ರಶಸ್ತಿ-೨೦೦೦
೭) ನಾಡ ಚೇತನ ಪ್ರಶಸ್ತಿ-೨೦೦೬
೮) ಅಲ್ಲಮನ ಬಯಲಾಟ ನಾಟಕಕ್ಕೆ ಜೋಳದರಾಶಿ ದೊಡ್ಡನ ಗೌಡ ಗ್ರಂಥ ಪ್ರಶಸ್ತಿ-
೯) ಪೀಚಿ ಸಾಹಿತ್ಯ ಪುರಸ್ಕಾರ ೨೦೧೦
೧೦) ಸಂಸ ರಂಗ ಪುರಸ್ಕಾರ ೨೦೧೦
೧೧) 'ಇ-ಕವಿ ಸಾಹಿತ್ಯ ಪ್ರಶಸ್ತಿ-೨೦೧೦
೧೨) ವರ್ಧಮಾನ ಪ್ರಶಸ್ತಿ-೨೦೧೪

ಅಡಿ ಟಿಪ್ಪಣ

೧ ಸಂಸ್ಕೃತಿ : ಶ್ರಮ & ಸೃಜನಶೀಲತೆ. ಪುಟ-೩೭೭

೨ ಕಾಲು ದಾರಿ. ಪುಟ-೧೫೪

೩ ಕಾಲುದಾರಿ ಪುಟ-೧೫೪

೪ ಅದೇ ಪುಟ-೧೫೬

# ಅಧ್ಯಾಯ – ೦೬
# ಸಮಾರೋಪ

ಲಕ್ಷ್ಮೀಪತಿ ಕೋಲಾರ ಅವರು ಬೇರುಮೂಲ ಸಂಸ್ಕೃತಿಯ ಅನ್ವೇಷಕರಾಗಿ, ಸಂಸ್ಕೃತಿನಿಷ್ಠ ಸಂಶೋಧಕರಾಗಿ, ಸೃಜನಶೀಲ ಸಾಹಿತ್ಯ, ಸಾಹಿತ್ಯೇತರ ಚಟುವಟಿಕೆಗಳು, ಲೇಖಕರನ್ನು ದಶಕಗಳ ಕಾಲ ಗಾಢವಾಗಿ ಪ್ರಭಾವಿಸಿರುವ ಭೌತವಾದಿ ಚಿಂತನೆ ಮತ್ತು ಅವೈದಿಕ ಪಂಥಗಳು ಹಾಗೂ ಒಟ್ಟಾರೆ ಎಡಚಿಂತನೆಗಳ ಕುರಿತ ಅವರ ನಿಲುವುಗಳು ಒಳಗೊಂಡಂತೆ ಬಹುಸ್ತರದ ಸಂಸ್ಕೃತಿಯ ಈ ಲೇಖಕರು ಈ ನೆಲದಲ್ಲಿ ಯಾವ ಪರಂಪರೆಯನ್ನು ಪ್ರತಿನಿಧಿಸುತ್ತಿದ್ದಾರೆ? ಮತ್ತು ಆ ಪರಂಪರೆಯೊಂದಿಗಿನ ಅವರ ಜೀವಂತ ಕೊಡುಪಡೆಯ ಶೈಲಿಗಳನ್ನು ಸಹ ಗುರುತಿಸಲಾಗಿದೆ.

ದಲಿತ ಚಳುವಳಿಯ ಚಾರಿತ್ರಿಕ ಘಟ್ಟದ ಹಿನ್ನೆಲೆಯಿಂದ ಬಂದ ಲಕ್ಷ್ಮೀಪತಿ ಕೋಲಾರ ಅವರು ಕೆಲವೊಂದು ಸಂದರ್ಭದಲ್ಲಿ ಬದುಕಿನ ಬಗೆಗಿನ ಜಿಜ್ಞಾಸೆ 'ಬದುಕು-ಶಾಸ್ತ್ರೀಕತೆಯ ಮಹಾದ್ವಂದ್ವಗಳನ್ನು, ಕತ್ತಲೊಳಗಿನ ಬೆಳಕನ್ನು, ಲೌಕಿಕತೆಯೊಳಗಿನ ಅಲೌಕಿಕತೆಯನ್ನು, ಇವುಗಳ ಸಂಘರ್ಷ ಶುರುವಾದ ಗಳಿಗೆ ನಿಖರವಾಗಿ ನೆನಪಿಲ್ಲವಾದರು ಈ ಕ್ಷಣಕ್ಕೂ ಅದು ಮುಂದುವರಿಯುತ್ತಲೇ ಇದೆ' ಎನ್ನುವ ವಿಚಾರವನ್ನು 'ಕಾಲುದಾರಿ' ವಿಮರ್ಶಾ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಸೈದ್ಧಾಂತಿಕ ಗೊಂದಲಗಳ ನಡುವೆಯು ಸಂಸ್ಕೃತಿ ಪರಂಪರೆಯ ಅನ್ವೇಷಣೆಯಲ್ಲಿ ಪ್ರಮಾಣಿಕ ಕ್ರಿಯಾಶೀಲರಾಗಿದ್ದು, ಅಭಿವ್ಯಕ್ತಿಯಲ್ಲಿನ ನಿಖರತೆಯು ಓದುಗರನ್ನು ಸೆಳೆಯುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಸೈದ್ಧಾಂತಿಕ ನಿಲುವುಗಳನ್ನು ಕುರಿತು ಚಿಂತನೆ ಹರಿಸುವಲ್ಲಿ ಥಟ್ಟನೆ ಮುದುಕಿ ಬಿಡುತ್ತಾರೆ. ಉದಾ: 'ರಾಜಕೀಯ ಪರ್ಯಾಯ ಮತ್ತು ಜನತೆ ಪಾತ್ರ' ಎಂಬ ಲೇಖನದಲ್ಲಿ ಜಗತ್ತಿನ ಸದ್ಯದ ರಾಜಕೀಯ ಅರಾಜಕತೆಯನ್ನು ಕುರಿತು ವಿಮರ್ಶಿಸುವಾಗಿ ನೀಡಿದ ಹೇಳಿಕೆಯೊಂದನ್ನು ಗಮನಿಸಬಹುದು. 'ಬಂಡವಾಳಶಾಹಿ ಮತ್ತು ಕಮ್ಯುನಿಸಂ ಸಿದ್ಧಾಂತಗಳೆರಡೂ ಜಗತ್ತಿಗೆ ಸರಕಾರಗಳಾಗಿ ಹಲವು ದಶಕಗಳಿಂದಲೂ ಅಸ್ತಿತ್ವದಲ್ಲಿದ್ದರೂ ಯುದ್ಧ ಮತ್ತು ಬಡತನದ ಸಮಸ್ಯೆಗಳನ್ನು ದ್ವಿಗುಣಿಸುತ್ತಲೇ ಹೋಗುತ್ತಿವೆ. ಹೀಗಾಗಿ ಈ ಎರಡೂ ಮಾದರಿಗಳು ತ್ಯಾಜ್ಯವೆನಿಸುತ್ತಿವೆ.

ಬಹುಶಃ ಮೂರನೇ ಪರ್ಯಾಯದ ಶೋಧದ ಹಂತದಲ್ಲಿ ನಾವಿಂದು ಬಂದು ನಿಂತಿದ್ದೇವೆ" ಇಲ್ಲಿ ಬಂಡವಾಳಶಾಹಿ ಮತ್ತು ಕಮ್ಯುನಿಸಂ ಎರಡೂ ಸಿದ್ಧಾಂತಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಎಷ್ಟರ ಮಟ್ಟಿಗೆ ಉಚಿತ ಎಂಬ ಪ್ರಶ್ನೆ ಏಳುತ್ತದೆ'. 'ಮೀನಾಕ್ಷಿ ಬಾಳಿ'ಯವರು ಕಾಲುದಾರಿ ವಿಮರ್ಶಾ ಲೇಖನಗಳ ಕೃತಿಯ ಬಗ್ಗೆ ತಮ್ಮ ಅಭಿಪ್ರಾಯಪಟ್ಟಿದ್ದಾರೆ. ಇದನ್ನು ತೀರ ಕೆದಕಿ ನೋಡಿದರೆ ಲಕ್ಷ್ಮೀಪತಿ ಕೋಲಾರವರ ಗ್ರಹಿಕೆ ಮತ್ತು ಸೈದ್ಧಾಂತಿಕ ನಿಲುವುಗಳು ಸ್ಪಷ್ಟವಾಗಿವೆ ಎಂದು ಗೋತ್ತಾಗುತ್ತಿದೆ. ಅವರು ಕಮ್ಯುನಿಸಂ ಮತ್ತು ಬಂಡವಾಳ ಶಾಹಿಯನ್ನು ಪ್ರತ್ಯೇಕವಾಗಿ ನೋಡಿದ್ದಾರೆ. ತಳ ಸಮುದಾಯ ಶ್ರಮಿಕ ವರ್ಗಗಳ ಉದ್ಧಾರಕ್ಕಾಗಿ ಪೂರಕ ಪರ್ಯಾಯದ ಶೋಧನ ಹಂತಕ್ಕೆ ನಾವಿಂದು ಬಂದು ನಿಂತಿದ್ದೇವೆ' ಎಂಬ ಅಭಿಪ್ರಾಯ ಸ್ಪಷ್ಟವಾಗಿದೆ. ಇದರಿಂದಲೇ ಲಕ್ಷ್ಮೀಪತಿ ಕೋಲಾರ ಅವರು ಓದುಗರ ಹಿಡಿತಕ್ಕೆ ಅಷ್ಟು ಸುಲಭವಾಗಿ ಸಿಗಲಾರರು. ಈ ಹಿನ್ನೆಲೆಯಿಂದ ಲಕ್ಷ್ಮೀಪತಿ ಕೋಲಾರವರ ಹೋರಾಟದ ಬದುಕು ಮತ್ತು ಸಾಹಿತ್ಯದ ಪರಂಪರೆಯು ಅಧ್ಯಯನಕ್ಕೆ ಯೋಗ್ಯವಾಗಿದೆ.

ಎರಡನೆಯ ಅಧ್ಯಾಯದಲ್ಲಿ ಅವರ ಕುಟುಂಬದ ಹಿನ್ನೆಲೆಯನ್ನು ಒಳಗೊಂಡಂತೆ, ಅವರ ಜೀವನದಲ್ಲಿ ಹೋರಾಟದ ಹಾದಿಯ ಮಹತ್ವದ ಸಂಗತಿಗಳನ್ನು ದಾಖಲಿಸಲಾಗಿದೆ. ಲಕ್ಷ್ಮೀಪತಿಯವರ ಬಾಲ್ಯ ಮತ್ತು ವಿದ್ಯಾರ್ಥಿ ಜೀವನದ ಕೆಲವು ಸ್ವಾರಸ್ಯಕರ ಅಂಶಗಳನ್ನು ದಾಖಲಿಸುತ್ತಾ ಕಾವ್ಯದ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಕಾಲಘಟ್ಟವನ್ನು ಗುರುತಿಸಲಾಗಿದೆ. ವಿದ್ಯಾರ್ಥಿಯಾಗಿರುವಾಗಲೇ ಹೋರಾಟದ ಕ್ರಾಂತಿಯ ಕೆಂಪನ್ನು ಮೈಗೆ ಅಂಟಿಸಿಕೊಂಡ ಲಕ್ಷ್ಮೀಪತಿಯವರು ಸದಾ ಅದರ ಮಾರ್ಗದಲ್ಲಿಯೇ ಮುಂದುವರೆದದ್ದು, ಆ ಮೂಲಕ ತಮ್ಮ ಶೈಕ್ಷಣಿಕ ಕ್ಷೇತ್ರದ ವಿದ್ಯಾಭ್ಯಾಸದಿಂದ ದೂರವಾದರು. ಇದಕ್ಕೆ ಮುಖ್ಯ ಕಾರಣ, ಕ್ರಾಂತಿಯ ಹಾದಿಯಲ್ಲಿ ಅವರಿಗೆ ಸಿಕ್ಕಂತಹ ಪ್ರೋತ್ಸಾಹ, ಸ್ನೇಹ ಬಳಗ ಮತ್ತು ಪ್ರಮುಖವಾಗಿ ಕೈ ಬೀಸಿ ಕರೆದ ದಲಿತ ಚಳುವಳಿ. ಲಕ್ಷ್ಮೀಪತಿ ಕೋಲಾರ ಅವರ ಜೀವನವು ಹೋರಾಟದ ಹಾದಿ ಹಿಡಿಯಲು ಪ್ರಮುಖ ಕಾರಣವಾಯಿತು ಎಂಬುದನ್ನು ಈ ಅಧ್ಯಾಯದಲ್ಲಿ ತಿಳಿಯಬಹುದಾಗಿದೆ.

ಹೋರಾಟ ಜೀವನ ದರ್ಶನದ ಜೊತೆ-ಜೊತೆಗೆ ಚಳುವಳಿಗಳ ಚಹರೆಗಳನ್ನು ಗುರುತಿಸಲಾಗಿದೆ. ಹೋರಾಟಕ್ಕೆ ಜೊತೆಗೂಡಿದ ಸಮಾನ ಮನಸ್ಕರ ಕೆಲವೊಂದು ಮಹತ್ವ ಭೇಟಿಗಳನೂ ದಾಖಲಿಸಲಾಗಿದೆ.

ಪ್ರಮುಖ ಹೋರಾಟಗಳಾದ ಜೆ.ಪಿ.ಚಳುವಳಿಯ ಸಂದರ್ಭ, ಸಿಗರಾಪುರ ಹೋರಾಟದ ಪ್ರಮುಖ ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ ಮತ್ತು ಅಂದಿನ ಅಂತರ್ ಜಾತಿಯ ವಿವಾಹ ತೊಡಕುಗಳ ಮತ್ತು ಪ್ರೀತಿಯ ಹೆಸರಿನಲ್ಲಿ ಲೈಂಗಿಕ ಶೋಷಣೆಗಳನ್ನು ವಿವರಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಲಕ್ಷ್ಮೀಪತಿಯವರ ಸಂಶೋಧನಾ ಕೃತಿಗಳಾದ 'ಮಾಸ್ತೀಕರು ಒಂದು ಜನಾಂಗೀಯ ಅಧ್ಯಯನ', 'ಆದಿಮ ಶಿವ ರಹಸ್ಯ', ಮತ್ತು 'ದಕ್ಷಿಣ ದಂಡಾಜೀವಿಕ' ಕೃತಿಗಳನ್ನು ಅನುಲಕ್ಷಿಸಿ, ಅಭಿವ್ಯಕ್ತಿಯಲ್ಲಿನ ಸಂಸ್ಕೃತಿನಿಷ್ಠ ನೆಲೆಗಳ ಅನನ್ಯತೆಯನ್ನು ಗುರುತಿಸಲಾಗಿದೆ. ಈ ಮೂಲಕ ಲಕ್ಷ್ಮೀಪತಿಕೋಲಾರ ಅವರು ತಳ ಮೂಲ ಸಂಸ್ಕೃತಿಗಳ ಪರ, ಜೀವ ಪರ ನಿಲುವುಗಳನ್ನು ತಾಳಿರುವುದುಸ್ಪಷ್ಟವಾಗುತ್ತೆ. ಅಕೆಡಮಿಕ್ ವಲಯದ ಸಂಶೋಧಕರಾಗದಿದ್ದರೂ ಸಂಶೋಧನೆಯಲ್ಲಿ ಅವರಿಗಿರುವ ಬದ್ಧತೆ, ತಳಸಂಸ್ಕೃತಿ ಪರ ಕಾಳಜಿ ಮತ್ತು ಸಮಾಜ ಮುಖಿ ಚಿಂತನೆಗಳ ಕಡೆ ಬೆಳಕು ಚೆಲ್ಲುತ್ತದೆ. ಪರಂಪರೆ ಸಂಸ್ಕೃತಿಯಲ್ಲಿನ ದ್ವಂದ್ವಗಳನ್ನು ಬಗೆಹರಿಸುತ್ತಲೇ ತಿರುಚಲಾದ ಚರಿತ್ರೆಯನ್ನು ಮರು ವ್ಯಾಖ್ಯಾನಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿರುವುದನ್ನು ಗುರುತಿಸಲಾಗಿದೆ.

ನಾಲ್ಕನೇ ಅಧ್ಯಾಯನದಲ್ಲಿ ಲಕ್ಷ್ಮೀಪತಿ ಕೋಲಾರ ಅವರ ಮೂರು ಕವನ ಸಂಕಲನಗಳಾದ ನವಿಲು ಕಿನ್ನರಿ, ನೀಲಿ ತತ್ರಿ, ಮತ್ತು ನೀರ ಚಿಗುರು, ಕೃತಿಗಳಲ್ಲಿನ ತಾತ್ವಿಕತೆ ಮತ್ತು ಸೈದ್ಧಾಂತಿಕ ನಿಲುವುಗಳ ಬಗೆಗಿನ ಸವಿವರಣೆಯನ್ನು ಒಳಗೊಂಡ ಶೋಧನೆ ಮಾಡಲಾಗಿದೆ.

ಸೃಜನಶೀಲ ಕವಿಯನ್ನು ಕಾಡುವ ಕಾವ್ಯ ಪ್ರಜ್ಞೆಯನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ. 'ನವಿಲು ಕಿನ್ನರಿ' ಕವಿತೆಯಲ್ಲಿನ ತಳ ಸಮುದಾಯಗಳ ತುಡಿತವನ್ನು ಮತ್ತು ನವಿಲು ಕಿನ್ನರಿಯ ವಿಶೇಷತೆಯನ್ನು ಎತ್ತಿ ಹಿಡಿಯಲಾಗಿದೆ ಹಾಗೆಯೇ 'ಮಕ್ಕಲಿ ಘೋಷಲ್'

ಕವಿತೆಯಲ್ಲಿನ 'ಆಜೀವಿಕ' ಪಂಥದ ಪ್ರಾರಂಭಿಕನನ್ನು ಕುರಿತಾದ ಉಲ್ಲೇಖಗಳನ್ನು ಕವಿತೆಯಾಗಿಸುವ ಕವಿಯ ಸೃಜನಶೀಲ ಸಾಹಿತ್ಯದ ಪ್ರತಿಭೆಯ ಅನಾವರಣ ಮಾಡಲಾಗಿದೆ.

ನೀಲತತ್ತಿ ಕವನ ಸಂಕಲನದ 'ಮಾಯಾ ಉಯ್ಯಾಲೆ', ತರಗೆಲೆ, ತಿರುಗು ತಕಲಿ ತಿರುಗು ಹೀಗೆ ಹಲವು ಕವಿತೆಗಳ ಮೂಲಕ ಕವಿಕಾರರ ಕ್ರಿಯಾಶೀಲತೆಯಲ್ಲಿನ ತಾತ್ವಿಕ ಮತ್ತು ಸೈದ್ಧಾಂತಿಕ ನಿಯಮಗಳನ್ನು ಗುರುತಿಸಲಾಗಿದೆ.

ಲಕ್ಷ್ಮೀಪತಿಯವರ 'ನೀರ ಚಿಗುರು' ಕವಿತೆಗಳಲ್ಲಿನ ಪರಂಪರೆಯ ಚಹರೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಎಡ ಚಿಂತನೆಗಳ ಪ್ರತಿಪಾದಕರ ಪ್ರಭಾವವಿರುವ ಲಕ್ಷ್ಮೀಪತಿ ಕೋಲಾರ ಅವರ ಕಾವ್ಯ ಸೃಷ್ಟಿಯನ್ನು ನಾವು ಕಾಣಬಹುದಾಗಿದೆ. 'ಹಳದಿ ಹೂ ಕವಿತೆಯಲ್ಲಿ' 'ಬೋಳು ತಲೆಯ ಗುರು' ತಾವ್ಹೋ' ಪ್ರತಿಪಾದನೆಯನ್ನು ಗಮನಿಸಲಾಗಿದೆ. 'ಗದ್ದೆ' ಕವಿತೆಯಲ್ಲಿ ರೈತರ ಕಷ್ಟ ಕಾರ್ಪಣ್ಯಗಳನ್ನು ಒಳಗೊಂಡ ಜೀವ ಸತ್ವವನ್ನೂ ಗುರುತಿಸುವ ಪ್ರಯತ್ನ ಮಾಡಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಲಕ್ಷ್ಮೀಪತಿಯವರ ಸೃಜನಶೀಲ ಸಾಹಿತ್ಯಗಳಲ್ಲಿನ ತಾತ್ವಿಕ ಆಯಾಮಗಳ ಮತ್ತು ಸೈದ್ಧಾಂತಿಕ ನಿಲವುಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯನದಲ್ಲಿ ಲಕ್ಷ್ಮೀಪತಿ ಕೋಲಾರ ಅವರ ಸಾಹಿತ್ಯೇತರ ವಲಯದಲ್ಲಿನ ಕ್ರಿಯಾಶೀಲತೆಗೆ ಪ್ರತಿಬಿಂಬದಂತೆ ಪತ್ರಿಕಾವಲಯ, ಅವರು ಭಾಗವಹಿಸಿದ ಪ್ರಮುಖ ಕವಿಗೋಷ್ಠಿಗಳು, ಸಿನಿಮಾ, ಸಾಹಿತ್ಯ, ಮತ್ತು ಸಂಶೋಧನೆಗೆ ಪಡೆದ ಫೆಲೋಶಿಫ್ ಮತ್ತು ಪ್ರಶಸ್ತಿ ಪುರಸ್ಕರಗಳ ಬಗ್ಗೆ ಮಾಹಿತಿ ಒಳಗೊಂಡಿದೆ.

ಒಟ್ಟಾರೆಯಾಗಿ ಇಡೀ ಅಧ್ಯಯನ ಲಕ್ಷ್ಮೀಪತಿ ಕೋಲಾರ ಅವರ ಪರಂಪರೆ ಮತ್ತು ಸಂಸ್ಕೃತಿನಿಷ್ಠ ನೆಲೆಗಳ ಅಧ್ಯಯನವಾಗಿದೆ.

# ಕ್ಷೇತ್ರಕಾರ್ಯ

## ಲಕ್ಷ್ಮೀಪತಿ ಕೋಲಾರ ಅವರ ಸಂದರ್ಶನ

ಇವರ ಸಂದರ್ಶನವನ್ನು ಅಧ್ಯಯನದ ಒಂದು ಭಾಗವಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಸ್ವತಃ ಲೇಖಕರನ್ನು ಸಂದರ್ಶನ ಮಾಡಿ ಹಲವಾರು ಮಹತ್ವವಾದ ಮಾಹಿತಿಗಳನ್ನು ಈ ಮೂಲಕ ಸಂಗ್ರಹಿಸುವ ಪ್ರಯತ್ನ ಮಾಡಿದ್ದೇನೆ.

ಸರ್ ನಮಸ್ಕಾರ... ಈಗಾಗಲೇ ತಮ್ಮ ಬರಹಗಳನ್ನು ಸಾಕಷ್ಟು ಓದಿ ಅರ್ಥಮಾಡಿಕೊಳ್ಳುವ ಹಾದಿಯಲ್ಲಿದ್ದೇನೆ. ಬಹುಶಃ ಈ ಸಂದರ್ಶನದಿಂದ ಇನ್ನಷ್ಟು ಪಕ್ವವಾಗಲು ಸಾಧ್ಯವಾಗುತ್ತೆ. ಹಾಗಾಗಿ ನಿಮ್ಮ ಪರಿಚಯ ಮತ್ತು ಕೌಟುಂಬಿಕ ಹಿನ್ನೆಲೆಯ ಪ್ರಶ್ನೆಗಳ ಮೂಲಕವೇ ನಮ್ಮ ಮಾತು ಪ್ರಾರಂಭಿಸುವುದು ಸೂಕ್ತ ಎಂದು ಭಾಪಿಸಿದ್ದೆನೆ.

**ಪ್ರಶ್ನೆ:**ಸರ್ ತಮ್ಮ ಕೌಟುಂಬಿಕ ಹಿನ್ನೆಲೆಯನ್ನು ತಿಳಿಸಿಕೊಡಿ.

**ಉತ್ತರ:**–ಈಗಾಗಲೇ ಹುಟ್ಟಿದ್ದೆಲ್ಲ ಗೊತ್ತೇ ಇದೆ.ಸ್ವಂತ ಊರು ನರಸಾಪುರ. ನಮ್ಮ ತಂದೆ ಡಾಕ್ಟರ್ ಆದ ಕಾರಣ ೩ ವರ್ಷಕ್ಕೆ ಒಂದು ಬಾರಿ ವರ್ಗಾವಣೆಯಾಗುತ್ತಿತ್ತು. ಹಾಗಾಗಿ ಒಂದನೇ ತರಗತಿಯಿಂದ ೪ನೇ ತರಗತಿಯವರೆಗೂ ದೇವರಾಯ ಸಮುದ್ರದಲ್ಲಿ. ೫ನೇ ತರಗತಿಯಿಂದ ತಾಯಲೂರು ೭ನೇ ತರಗತಿಗೆ ಶ್ರೀನಿವಾಸ ಪುರದ ಹೊಳೂರು. ಹೈಸ್ಕೂಲ್‌ಗೆ ಬೆಂಗಳೂರಿಗೆ ಬಂದೆ. ಹಾಸ್ಟೆಲ್‌ಗೆ ಸೇರಿಸಿದ್ರು. ಹಾಸ್ಟೆಲ್ ಊಟ ಚೆನ್ನಾಗಿಲ್ಲದ ಕಾರಣ ಆರೋಗ್ಯ ಸಮಸ್ಯೆಯಾಗಿತ್ತು. ಆಗ ನಮ್ಮ ತಂದೆಗೆ ಕೋಲಾರಕ್ಕೆ ವರ್ಗವಾಗಿತ್ತು. ಆಮೇಲೆ ಕೋಲಾರಕ್ಕೆ ಹೋರಟೆ. ದ್ವಿತೀಯ ಪಿಯುಸಿಯೊತ್ತಿಗೆ ತುರ್ತು ಪರಿಸ್ಥಿತಿ ಪ್ರಾರಂಭವಾಗಿತ್ತು. ಅದೇ ಸಂದರ್ಭದಲ್ಲಿ ನಾನು ಚಳುವಳಿಗೆ ಪ್ರವೇಶ ಮಾಡಿದೆ. ಮೊದಲು ಪರಿಚಯ ಆಗಿದ್ದು ಕೆ.ರಾಮಯ್ಯನವರು.

**ಪ್ರಶ್ನೆ:**–ತಾವೇ ಬರೆದುಕೊಂಡಂತೆ ಬಾಲ್ಯದಲ್ಲಿಯೇ ಕವನ ರಚಿಸುವಂತ ಸಾಮರ್ಥ್ಯ ಇತ್ತು ಮತ್ತು ಅದಕ್ಕೆ ಉತ್ತಮ ಪ್ರತಿಕ್ರಿಯೆಯೂ ಲಭಿಸಿತ್ತು. ಈ ಹಿನ್ನೆಲೆಯಿಂದ ತಮ್ಮ ಬಾಲ್ಯದ ಅನುಭವಗಳ ಜೊತೆ ಜೊತೆಗೆ ನೀವು ಚಳುವಳಿಯ ಸೆಳೆತಕ್ಕೆ ಸಿಕ್ಕಿದ್ದು ಹೇಗೆ?

**ಉತ್ತರ:**–ಸಾಹಿತ್ಯದ ಬಗ್ಗೆ ನನಗೆ ಮೊದಲಿಂದಲೂ ಆಸಕ್ತಿ ಇತ್ತು. ನಾನು ತಾಯಲೂರಿನಲ್ಲಿ ೫ನೇ ತರಗತಿ ಓದುವಾಗ ಎಜುಕೇಷನ್ ಡಿಪಾರ್ಟಮೆಂಟ್ ನವರು 'ಬಾಲವಾಣಿ' ಎಂಬ ಪತ್ರಿಕೆಯನ್ನು ಆರಂಭಿಸಿದ್ರು, ಆ ಬಾಲವಾಣಿ ಪತ್ರಿಕೆಗೆ ನನ್ನ ಮೊದಲ'ಗಾಂಧಿತಾತ' ಕವನವನ್ನು ಕಳಿಸಿದ್ದೆ. ಅದು ಪ್ರಕಟವೂ ಆಗಿತ್ತು. ಬಾಲವಾಣಿ ಪತ್ರಿಕೆಗೆ ಸ್ಟೂಡೆಂಟ್ ಮಾತ್ರ ಬರಿತಿದ್ರು. ೮ನೇ ತರಗತಿಯಲ್ಲಿರುವಾಗ ಒಂದು ಪತ್ತೇದಾರಿ ಕಾದಂಬರಿ ಬರೆದಿದ್ದೆ. ಕನ್ನಡದಲ್ಲಿ ಕಾದಂಬರಿ ಬರೆದು ಇಂಗ್ಲೀಷ್ ಡೆಕ್ಕನ್ ಹೆರಾಲ್ಡ್ ಪತ್ರಿಕೆಗೆ ಕಳುಹಿಸಿದೆ.

ಕೋಲಾರಕ್ಕೆ ಬಂದ ಮೇಲೆ ಹೋರಾಟದ ಬಳಗ ಸಿಕ್ಕಿತು. ಮುಖ್ಯವಾಗಿ ಅಂತರ ಗಂಗೆಯಲ್ಲಿ ಯಜ್ಞಕ್ಕೆ ಸಂಬಂಧಿಸಿದಂತೆ ಪತ್ರಗಳನ್ನು ಬರೆದು "ವಿರೋಧಿಸುವಾಗ ನಾನೊಂದು ಪತ್ರ ಬರೆದೆ. ದ್ವಾರಕಾನಾಥ್ ಒಂದು ಪತ್ರ ಬರೆದಿದ್ರು. ಆಮೇಲೆ ರಾಮಯ್ಯ ಒಂದು ಪತ್ರ ಬರೆದರು. ಆರ್.ಸೋಮಶೇಖರ್ "ಹೀಗೆ ನಾಲ್ಕು ಜನ ಯಜ್ಞವನ್ನು "ವಿರೋಧಿಸಿ ಪತ್ರ ಬರೆದವ್ರು ಹಾಗೆ ನಾಲ್ಕೂ ಜನ ನಾವೆಲ್ಲಾ ಒಂದೆ (Alignment Pecple's) ಎಂದು ಅರ್ಥ ಮಾಡಿಕೊಂಡು ಒಬ್ಬರನ್ನೊಬ್ಬರು ಹುಡುಕಿ ಕೊಂಡ್ಹೋಗಿ ಭೇಟಿಯಾಗಿದ್ವಿ. ರಾಮಯ್ಯ ಸಿಕ್ಕಿದ್ದು ಆಗ್ಲೇ. ರಾಮಯ್ಯ ಕೆ.ಜಿ.ಎಫ್‌ನ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿದ್ರು. ಪ್ರತಿವಾರ

ಭೇಟಿಯಾಗುತ್ತಿದ್ವಿ. ಪ್ರತಿ ಶನಿವಾರ ಸಂಜೆ ಕೋಲಾರಕ್ಕೆ ಬರ್ತಿದ್ರು. ಸಿ.ಮುನಿಯಪ್ಪ, ಮುನಿಸ್ವಾಮಿ, ಶಿವಣ್ಣ ಪಿಚ್ಚಳ್ಳಿ ಶ್ರೀನಿವಾಸ್ ಇವರೆಲ್ಲಾರ ಪರಿಚಯವಾಯಿತು.

ರಾಮಯ್ಯನವರ ಸಂಪರ್ಕದಿಂದ ನಾನು ದಲಿತ ಚಳುವಳಿಗೆ ಬಂದೆ. ಅಲ್ಲಿಂದ ಎಜುಕೇಷನ್ ಕಡೆ ಗಮನ ಕೊಡ್ಲಿಕ್ಕೆ ಆಗಿಲ್ಲ. ಪಿಯುಸಿವರೆಗೂ ಆಗೋ ಈಗೋ ಓದ್ದೆ. ಡಿಗ್ರಿಗೆ ಬಂದ ಮೇಲೆ ನಾನು ಅಟೆಂಡ್ ಮಾಡಿದ್ದೆ ಹತ್ತು-ಹದಿನೈದು ಕ್ಲಾಸು. ಅದರಲ್ಲೂ ಸಣ್ಣಗುಡ್ಡಯ್ಯನವರದ್ದು ಮತ್ತು ಚಂದ್ರಮೋಹನ್ ರವರ ಕ್ಲಾಸ್‌ಗೆ ಹೋಗ್ತಿದ್ವಿ. ಸಾಹಿತ್ಯದ ಆಸಕ್ತಿಯಿಂದ ಮತ್ತು ನಮಗೆ ಸಪೋರ್ಟ್ ಮಾಡ್ತಾ ಇದ್ರು ಅನ್ನೊ ಕಾರಣಕ್ಕೂ ಅವರ ಕ್ಲಾಸ್‌ಗೆ ಹೋಗ್ತಾ ಇದ್ವಿ. ಅದು ಬಿಟ್ರೆ ಕಾಲೇಜು ಲೈಫ್ ಅಂತ ಬೇರೇನು ಇಲ್ಲ. ಹಾಗಾಗಿ ಚಳುವಳಿಕಡೆ ಬಂದೆ ಆದಾದ್ಮೇಲೆ ೨ ದಶಕ ತಿರುಗಿ ನೋಡಲೇ ಇಲ್ಲ. ಇದರಿಂದ್ಲೇ ನನ್ನ ಅಕೆಡಮಿಕ್ ಲೈಫ್ ಪೂರ್ತಿ ನಾಶವಾಗಿದ್ದು. ಹೋರಾಟದ ಅಂಗವಾಗಿಯೇ ಚಳುವಳಿಗೆ ಪೂರಕವಾದ ಹಿನ್ನೆಲೆಯಲ್ಲಿ ಏಳು-ಎಂಟು ಬೀದಿನಾಟಕಗಳನ್ನು ಬರೆದು ಅದಕ್ಕೆ ನಾನೇ ಡೈರೆಕ್ಟ್ ಮಾಡಿಸಿದ್ದೆ. ಒಂದು ನಾಟಕನೂ ಮಾಡಿಸಿದ್ದೆ ಮತ್ತೆ ಅದರ ಜೊತೆಗೆ ಗೋಕಾಕ್ ಚಳುವಳಿ ಬಂತು. ಅದರಲ್ಲೂ ಇನ್ವಾಲ್ ಆದೆ. ಆಮೇಲೆ ಹಿಂದುಳಿದ ವರ್ಗಗಳ ಬಗ್ಗೆನೂ ಆರ್ಗನೈಜ್ ಮಾಡಿದ್ವಿ, ಮತ್ತೆ ಅದಕ್ಕೆ ಸಪೋರ್ಟಿವ್ ಆಗಿ ಜರ್ನಲಿಸಂಗೆ ಎಂಟ್ರಿಯಾಗಿ 'ಸಂಚಿಕೆ' ವಾರ ಪತ್ರಿಕೆ ಮಾಡಿ ೬ ತಿಂಗಳ ಕಾಲನಾನೇ ಎಡಿಟರ್ ಆಗಿ ಕೆಲಸ ಮಾಡಿದ್ದೆ. ಆವೇಳೆಗೆ ೪೦ ವರ್ಷ ನನಗೆ ದಾಟಿ ಹೋಗಿತ್ತು. ಆಮೇಲೆ ನಾನು ಬೆಂಗಳೂರಿಗೆ ಎಂಟ್ರಿಯಾಗಿದ್ದು. ಸೋ ಬೆಂಗಳೂರಿಗೆ ಬಂದು ನಾಲ್ಕೈದು ವರ್ಷ ಇದ್ದು ಮತ್ತೆ ಕೋಲಾರಕ್ಕೆ ಹೋಗಿ ಎರಡು-ಮೂರು ವರ್ಷ ಇದ್ದು ಮತ್ತೆ ಇಲ್ಲಿಗೆ ಬಂದೆ.

**ಪ್ರಶ್ನೆ:**ಸರ್. ಹೋರಾಟಕ್ಕೆ ನೀವು ಯಾವೆಲ್ಲಾ ವಿಚಾರಗಳನ್ನ ತೆಗೆದುಕೊಳ್ತಾದ್ರೀ?

**ಉತ್ತರ:-** ಅಂದ್ರೆ ದಲಿತ ಚಳುವಳಿಯ ಪ್ರಾರಂಭ ದಿನಗಳಲ್ಲಿ ಅವರಿಗೆ ಬಹಳ ಬೇಸಿಕ್ಕಾದ ಸಮಸ್ಯೆ ಎಂದ್ರೆ, ಮೊದಲನೆಯದು ಅಸ್ಪೃಶ್ಯತೆ, ಎರಡನೆಯದು ಜಮೀನಿಗೆ ಸಂಬಂಧಿಸಿದ ವ್ಯಾಜ್ಯಗಳು. ಮೂರನೆಯದ್ದು ಎಜುಕೇಷನ್ ಅಂದ್ರೆ ಹಾಸ್ಟೆಲ್ ಮತ್ತು ರೆಸಿಡೆಂನ್ಸಿ ಸ್ಕೂಲ್ ಪರವಾಗಿ ಮತ್ತು ದಲಿತ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿದ್ದ ಅತ್ಯಾಚಾರ ಮತ್ತು ಕೊಲೆಗಳ ವಿರುದ್ಧ ಹೋರಾಟ ಮಾಡ್ತಾ ಇದ್ವಿ. ಅದರಲ್ಲೂ ನಾನ್-ದಲಿತಾಸ್‌ನಂತಹ ಕುಂಬಾರ್ ಶೇಷಗಿರಿಯಪ್ಪನವರದ್ದು ದೊಡ್ಡ ಮಟ್ಟದ ಹೋರಾಟ ಇತ್ತು. ಸೊ. ಅದರಿಂದ ಕೋಲಾರದ ಡಿ.ಎಸ್.ಎಸ್.ಗೆ ಒಳ್ಳೆ ಹೆಸರು ಬಂತು ಅಂದ್ರೆ ತುಂಬಾ ಸ್ಟ್ರಾಂಗ್ ಆಗಿ ಸ್ಟ್ರಗಲ್ ಮಾಡ್ತಾರೆ ಅಂತ.

ಆನಂತ ಮರಸನಪಲ್ಲಿ ಹೋರಾಟದ ಕಾಲ್ನಡಿಗೆ ಜಾಥ ಹಮ್ಮಿಕೊಂಡು. ಕೋಲಾರದವರೆಗೂ ೪ ದಿನಗಳ ಕಾಲ್ನಡಿಗೆ ಜಾಥಮಾಡಿ. ಕೋಲಾರದ ಡಿ.ಸಿಗೆ ಪತ್ರವನ್ನು ಕೊಟ್ಟೆವು. ಕೊನೆಗೂ ಅವರಿಗೆ ಜಮೀನು ಸಿಕ್ತು. ಆ ಹೋರಾಟದ ಬಗ್ಗೆ ನಾನು ಮೊದಲು ಪುಸ್ತಕವನ್ನು ಬರೆದದ್ದು. ಅದಕ್ಕೂ ಮುಂಚೆ ನಾನು ಬರೀ ಕರಪತ್ರ ಮತ್ತು ಬೀದಿ ನಾಟಕಗಳ ಸ್ಕ್ರಿಪ್ಟ್ ಬರೀತ್ತಿದ್ದೆ. ಅದು ಫಸ್ಟ್ ಟೈಮ್ ಗೆ ಪುಸ್ತಕವಾಗಿ ದಾಖಲಾಯಿತು.೧೯೮೬ರಲ್ಲಿ ಕೋಲಾರಿನಲ್ಲಿ ಮೊದಲು ದಲಿತ ವಿದ್ಯಾರ್ಥಿ ರಾಜ್ಯ ಮಟ್ಟದ ಸಮಾವೇಶವಿತ್ತು. ರಾಜ್ಯದ ಎಲ್ಲಾ ಕಡೆಯಿಂದಲೂ ಸುಮಾರು ೫೦-೬೦ ಸಾವಿರ ಜನ ಬಂದಿದ್ದರು. ಉದ್ಘಾಟನೆ ಮಾಡಲಿಕ್ಕೆ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಹೆಂಡ್ತಿ ಸವಿತಾ ಅಂಬೇಡ್ಕರ್ ರವರನ್ನು ಕರೆಸಿದ್ವಿ. ನನ್ನ ಪುಸ್ತಕವನ್ನು ಅವರೇ ಬಿಡುಗಡೆ ಮಾಡಿದ್ರು. ಹಾಗಾಗಿ ನನ್ನ ಮೊದಲ ಪುಸ್ತಕ ಬಿಡುಗಡೆ ಮಾಡಿದ್ದು ಅಂಬೇಡ್ಕರ್ ರವರ ಹೆಂಡ್ತಿ, ಅಂದೊಂದು ನನಗೆ ದಾಖಲೆ ಹಮ್ಮೆಯ ವಿಚಾರ ಮತ್ತು ಅದು ನನ್ನ ಅದೃಷ್ಟ.

ಒಟ್ಟು ದಲಿತ ಚಳುವಳಿಗೆ ಸಂಬಂಧ ಪಟ್ಟಂತೆ ನನ್ನ ಮೇಲೆ ಸುಮಾರು ೧೭ ಕೇಸ್ ಇತ್ತು.ರೇಪ್ ಕೇಸ್, ಮರ್ಡರ್ ಕೇಸ್, ಕಿಡ್ನಾಪ್ ಕೇಸ್, ಈಗೆ ಬೇರೆ-ಬೇರೆ ಸೆಕ್ಷನ್‌ನಲ್ಲಿ ಕೇಸ್ ಹಾಕಿದ್ರು, ಕೆ.ಜಿ.ಎಫ್ ನ ಹತ್ತಿರ ಒಂದು ದಲಿತ ಹುಡುಗಿಯನ್ನು ಮೇಲ್ಜಾತಿ ಹುಡುಗ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡು ಮೋಸ ಮಾಡಿದ್ರ, ಅದೇ ನೋವಲ್ಲಿ ಆಕೆ ಸತ್ತೆ ಹೋದ್ಲು. ಈ ಪ್ರಕರಣದಲ್ಲಿ ಮಧ್ಯಸ್ಥಿಕೆ ವಹಿಸಿದ್ದಕ್ಕೆ ಪತ್ರಿಕೆಗಳಲ್ಲಿ ದರೋಡೆ, ಡಕಾಯಿತ ಅಂತ ಪ್ರಕಟ ಮಾಡಿ ಪೊಲೀಸ್ ಕೇಸ್ ಹಾಕಿದ್ರು, ಸಿಗರಪುರ ಪ್ರಕರಣ, ನಾಗಸಂದ್ರ ಹೋರಾಟ ಹೀಗೆ ಹಲವು ಹೋರಾಟಗಳನ್ನು ಮಾಡಿದ್ವಿ.ನಾಗಸಂದ್ರ ಜೀತಗಾರರ ಹೋರಾಟದ ಸಂದರ್ಭದಲ್ಲಿ ವಿಧಾನ ಸಭೆಯ ಪ್ರೇಕ್ಷಕರ ಗ್ಯಾಲರಿಯಲ್ಲಿ ಕರಪತ್ರಗಳನ್ನು ಎಸೆದದ್ದು, ಜೀತಗಾರರ ಪರವಾಗಿ ಘೋಷಣೆ ಹಾಕಿದ್ದು, ಕಮ್ಯಾಂಡೋಗಳಿಂದ ಒದೆ ತಿಂದದ್ದು, ಹೀಗೆ ಸಾಲು ಸಾಲು ನೆನಪುಗಳು ಈಗಲೂ ಕಾಡುತ್ತದೆ.

**ಪ್ರಶ್ನೆ**:ಸರ್ ನಿಮ್ಮ ಪೂರ್ವಿಕರಲ್ಲಿ ಯಾರಾದ್ರು ಸ್ವತಂತ್ರ ಹೋರಾಟಗಾರರು ಇದ್ರಾ?ಯಾಕಂದ್ರೆ ಹೇಗೆ ಬಂತು ಇಷ್ಟೊಂದು ಹೋರಾಟದ ಮನೋಭಾವ ನಿಮ್ಮಲ್ಲಿ.

**ಉತ್ತರ**:- ನಮ್ಮ ಜಾತಿಯಲ್ಲಿ ನಮ್ಮ ದೊಡ್ಡಪ್ಪ ಮೇಷ್ಟ್ರಾಗಿದ್ರು. ನಮ್ಮ ತಂದೆ ಡಾಕ್ಟರ್. ಅವರೆ ಮೊದಲ ಅಕ್ಷರಸ್ಥರು. ನಾವು ೫ ಜನ ಮಕ್ಕಳು ನಮ್ಮಣ್ಣ ಬ್ಯಾಂಕ್ ಮ್ಯಾನೇಜರ್ ಆಗಿದ್ರ ಎಲ್ಲರೂ ಕೆಲಸದಲ್ಲಿ ಇದ್ರು. ನಾನು ಮಾತ್ರ ಹಾಗೇ ಇದ್ದೆ.ಈಗ ಈರೀತಿ ಬರೆದು ಬರೆದು ಬದುಕ್ತಾ ಇದ್ದೀನಿ. ಕನ್ನಡದಲ್ಲಿ ಬರವಣಿಗೆಯ ಮೂಲಕ ಬದುಕುವ ಒಂದು ಪರಂಪರೆ ಇದೆ. ತರಾಸು. ನಿರಂಜನ, ಅನಾಕೃ, ಬಸವರಾಜು ಕಟ್ಟೀಮನಿ ಹೆಚ್ಚು ಕಮ್ಮಿ ಪ್ರಗತಿಶೀಲರು ಇವರ ಪರಂಪರೆಯನ್ನು ನಾನು ಮುಂದುವರೆಸ್ತಾಯಿದ್ದೀನಿ. ಬರೆದೇ ಬದುಕುವುದರಲ್ಲಿ ಮತ್ತು ಸಿನಿಮಾ, ಸಾಕ್ಷ್ಯಚಿತ್ರಗಳ ಬಗೆಗೂ ಕೆಲಸ ಮಾಡ್ತಾ ಇದ್ದೇನೆ.

**ಪ್ರಶ್ನೆ**:-ಸರ್ ತಾವು ಇಷ್ಟೊಂದು ದಲಿತ ಪರ ಸಂವೇದನಾ ಶೀಲರಾಗಿ ಕೆಲಸಮಾಡಿದ್ದೀರಾ, ದಲಿತರನ್ನು ದಲಿತರ ಒಳಗಿದ್ದೆ ಅರಿತಿದ್ದೀರಾ ಆಗಾಗಿ 'ದಲಿತ' ಅಂದ್ರೆ ಯಾರು? 'ದಲಿತ' ವ್ಯಾಖ್ಯಾನ ತಿಳಿಸಿ.

**ಉತ್ತರ**:- ಪ್ರಾರಂಭದಲ್ಲಿ ದಲಿತ ಅಂದ್ರೆ ಸಾಮಾನ್ಯವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾದವರೆಲ್ಲಾರು ದಲಿತರೇ ಅನ್ನುವ ವ್ಯಾಖ್ಯಾನವಿತ್ತು. ಯಾಕಂದ್ರೆ ಇದು ಚರಿತ್ರೆಯಲ್ಲಿ ಮೊದಲ ಬಾರಿಗೆ ಆಗಿದ್ದಲ್ವಾ? ಆಗಾಗಿ ಒಂದು ಉದಾರವಾದ ನಿಲುವಿಟ್ಕೊಂಡು ಮಾಡಿದ್ದು. ಅದ್ರೆ ಹೋರಾಟದ ಕೆಲವು ನಾಯಕರಿಗೆ ಅದ ಅನುಭವ ಇದೆಯಲ್ಲಾ! ಆ ಅನುಭವ ದಲಿತ ವ್ಯಾಖ್ಯಾನವನ್ನು ಮರು ವ್ಯಾಖ್ಯಾನಿಸಲು ಒತ್ತಾಯಿಸಿತು. ಕರೆಕ್ಟಾಗಿ ವ್ಯಾಖ್ಯಾನ ಮಾಡಿದ್ವಾರೆ. ನನ್ನ ಪ್ರಕಾರ ಅದೇನಂದ್ರೆ. 'ಯಾರು ಅಸ್ಪೃಶ್ಯತೆಗೆ ಒಳಗಾಗಿದ್ದಾರೆ ಈ ಸಮಾಜದಲ್ಲಿ ಅವರಷ್ಟೆ ದಲಿತರು' ಇದರ ಜೊತೆಗೆ ಗೋಮಾಂಸ ತಿನ್ನುವಂತವರು, ಜನಪದರ ಜೊತೆಗೆ ತಮ್ಮ ಕಸುಬುಗಳನೂ ಗುರುತಿಸಿಕೊಂಡವರು.

**ಪ್ರಶ್ನೆ**:-ಗೋಮಾಂಸ ತಿನ್ನುವಂತವರೂ ಬರ್ರೋದಿಲ್ಲೇನೋ? ಯಾಕಂದ್ರೆ ದಲಿತರಲ್ಲದೆ ಇರುವ ದಲಿತೇತರರು ಗೋಮಾಂಸ ತಿನ್ನುತ್ತಾರೆ.

**ಉತ್ತರ**:-ಇಲ್ಲ ಇಲ್ಲ. . . . ಗೋಮಾಂಸ ದಲಿತರ ಆಹಾರ ಪದ್ಧತಿಯ ಒಂದು ಭಾಗ.

**ಪ್ರಶ್ನೆ**:-ಅದ್ರೆ ಕೆಲವರು ಗೋಮಾಂಸ ತಿನ್ನೊದನ್ನ ಬಿಟ್ಟಿದ್ದಾರೆ?

**ಉತ್ತರ:–** ಕೆಲವರೂ ಗೋಮಾಂಸ ತಿನ್ನೋದನ್ನ ಬಿಟ್ಟಿರಬಹುದು. ಆದ್ರೆ ಮಾದಿಗರು ಮತ್ತು ಹೊಲೆಯರೇ ತಾನೇ ಗೋಮಾಂಸ ತಿನ್ನೋದು. ಉದಾಹರಣೆ ಹೇಳ್ತೀನಿ. ಒಂದು ಹಳ್ಳಿಯಲ್ಲಿ ದಲಿತರಿಗೂ ಮತ್ತು ಸವರ್ಣೀಯರಿಗೂ ಗಲಾಟೆಯಾದ್ರೆ. ಆ ಊರಲ್ಲಿ ಕೊರಮರು ಕೊರಚರು, ವಡ್ಡರು ಭೋವಿಗಳು ನಾಯಕರು ಇದ್ರೂ. ಅವರ್‍ಯಾರೂ ಕೂಡ ದಲಿತರ ಜೊತೆಯಲ್ಲಿ ನಿಂತುಕೊಳ್ಳಲ್ಲ. ಅವರು ಸವರ್ಣೀಯರಿಗೆ ಸಪೋರ್ಟ್ ಮಾಡ್ತಾರೆ. ಆದ್ರೆ ಎಷ್ಟೊ ಸಂದರ್ಭದಲ್ಲಿ ಅವರು ಸಹ ಅಸ್ಪೃಶ್ಯರೆ ಆಗಿರ್ತಾರೆ ಅನ್ನೋದು ಅಷ್ಟೇ ನಿಜ.

**ಪ್ರಶ್ನೆ:–**ಅಸ್ಪೃಶ್ಯತೆಗಷ್ಟೇ 'ದಲಿತತೆ' ಮೀಸಲಾದ್ರೆ ಅದು ಸಂಕುಚಿತ ಅನ್ನಿಸಲ್ವೇ?

**ಉತ್ತರ:–** ಈಗ ಅತ್ಯಂತ ಕಡು ಬಡವ ಬ್ರಾಹ್ಮಣ ಕುಟುಂಬಗಳು ಇಂದಿಗೂ ಇವೆ. ಅದರಲ್ಲೂ ಶೋಷಿತರೂ ಇದ್ದಾರೆ. ಅಂದಮಾತ್ರಕ್ಕೆ ಬ್ರಾಹ್ಮಣರನ್ನ ದಲಿತರು ಅಂತ ಕರೆಯೋಕ್ಕೆ ಆಗುತ್ತಾ? ಆಗೋದಿಲ್ಲ. ಎರಡನೇದು ಅವರಿಗೆ ಸಮಸ್ಯೆ ಬಂದ್ರೆ ದಲಿತ ಸಾಹಿತಿಗಳ ಬಳಿ ಬರೋದಿಲ್ಲ ಯಾಕಂದ್ರೆ? ಇವರು ಮಾದಿಗರು ಹೊಲೆಯರು ಅಂತ, ಅಂದ್ರೆ ಅವರು ಸರಿಯಾಗಿ ಗುರುತಿಸ್ತಾ ಇದ್ದಾರೆ. ದಲಿತರು ಅಂದ್ರೆ ಹೊಲೆಯ ಮಾದಿಗರು ಅಂತ, ನಾವು ಇಲ್ಲಿಷ್ಟು ದಲಿತರು ಅಂದ್ರೆ ಬರೀ ಹೊಲೆ ಮಾದಿಗರು ಅಲ್ಲ, ಎಲ್ಲಾ ಜಾತಿಯ ಬಡವರು ಮತ್ತು ಶೋಷಿತರು ಅಂತ ಹೇಳಿದ್ರೆ. ಅವರು ಅದನ್ನ ಮಾಡ್ತಾ ಇಲ್ಲ. ಅಂದ್ರೆ ಹೊರಗಿನ ಸಮಾಜ ದಲಿತ ಪದದ ವ್ಯಾಖ್ಯಾನವನ್ನು ನಿರ್ದಿಷ್ಟಗೊಳಿಸಿ ನಮಗೆ ಹೇಳ್ತಾ ಇದೆ. ದಲಿತ ಅಂದ್ರೆ ನೀವೇನು ಇನ್ನಾರು ಅಲ್ಲ. ಸೊ.. ಸತ್ಯ ಹಂಗಿರಬೇಕಾದ್ರೆ ನಾವ್ಯಾಕೆ ವಿಸ್ತರಿಸಬೇಕು? ಅನಗತ್ಯವಾಗಿ ವಿಸ್ತರಿಸಿದ್ರೆ ಅದರಿಂದೇನು ಪ್ರಯೋಜನವಿಲ್ಲ.

**ಪ್ರಶ್ನೆ:–** ದಲಿತ ಚಳುವಳಿ/ಹೋರಾಟಗಳ ಬಗ್ಗೆ ಅಂದಿನ ಮನಸ್ಥಿತಿ ಹೇಗಿತ್ತು? ಮತ್ತು ಇಂದಿನ ಪರಿಸ್ಥಿತಿ ಹೇಗಿದೆ?

**ಉತ್ತರ:–** ಇವತ್ತಿನ ದಲಿತ ಸಂಘಟನೆಗಳ ಬಗ್ಗೆ ಮಾತಾಡೋಂತಹದ್ದು ಏನೂ ಇಲ್ಲ ಬಿಡಿ. ಹಾಗೆ ಮಾತಾಡೋ ಹಿನ್ನೆಲೆಯ ಒಂದು ವ್ಯವಸ್ಥೆ ಸಹ ಇದೆ. ಇತಿಹಾಸದಲ್ಲಿ ಬಸವಣ್ಣನ ಕಾಲವನ್ನು ಬಿಟ್ಟರೆ, ದಲಿತರು ಹೀಗೆ ಒಂದು ಆಂದೋಲನದಲ್ಲಿ ತಮ್ಮನ್ನು ತಾವು ತೊಡಗಿಸಿ ಕೊಂಡದ್ದು ಮೊದಲನೇ ಬಾರಿ ಅನ್ನಬಹುದು. ಸೋ.. ಮೊಟ್ಟ ಮೊದಲ ಬಾರಿಗೆ ಅವರು ತಮ್ಮ ಮೇಲೆ ಆಗತ್ತಿರುವ ಎಲ್ಲಾ ಶೋಷಣೆ, ಅನ್ಯಾಯಗಳ ವಿರುದ್ಧ ಸಿಡಿದೆದ್ದು ಪ್ರತಿಭಟಿಸುವ ಸಂದರ್ಭ ಬಂದಾಗ ಅವರಿಗೆ ಈ ಲೌಕಿಕ ಬದುಕಲ್ಲಿ ತುಂಬಾ ಅಗತ್ಯವಾದ ಬೇಡಿಕೆ ಇತ್ತು. ಮೊದಲು ಅವರ ಹಸಿವು, ಬದುಕಿನ ಭದ್ರತೆ ಮುಂದಿನ ಪೀಳಿಗೆಗೆ ಬದುಕು ಕಾಣಿಸಲು ಶಿಕ್ಷಣ, ಅದರ ಜೊತೆಗೆ ನೌಕರಿ ಹಿಡಿಯುವ ಅವಶ್ಯಕತೆ ಇತ್ತು.ಮತ್ತೆ ಮೇಲ್ಜಾತಿಗಳಿಂದಾಗುವ ನಿರಂತರ ಕಿರುಕುಳಗಳು, ದೈಹಿಕ ಹಲ್ಲೆಗಳು, ಅತ್ಯಾಚಾರಗಳ ವಿರುದ್ಧ ರಕ್ಷಣೆ ಬೇಕಾಗಿತ್ತು. ಆಗಾಗಿ ಮೊದಲ ಹಂತದ ಚಳುವಳಿಗಳು ತಕ್ಕಮಟ್ಟಿಗೆ ಪೂರೈಸಿತ್ತು.

ಇಂದು ದಲಿತ ಸಂಘಟನೆಗಳು ಹರಿದು ಹಂಚಿಹೋಗಿವೆ. ಕೆಲವು ಸಂಘಟನೆಗಳು ಕರೆಪ್ಟ್ ಆಗಿವೆ. ದಲಿತ ಚಳುವಳಿಯ ಪ್ರಾರಂಭದಲ್ಲಿ ಇದ್ದ ಬದ್ಧತೆ ಕಡಿಮೆಯಾಗಿದೆ. ಚಳುವಳಿಯಲ್ಲಿ ನಿರತರಾದವರಿಗೆ ಯಾವುದೇ ಪಾರ್ಟಿಯವರು ಫಂಡ್ ಕೊಡಲ್ಲ. ಜೀವನ ಸಾಗಿಸುವುದು ಕಷ್ಟವಾಗುತ್ತೆ. ಆಗ ಬೇರೆ-ಬೇರೆ ಮಾರ್ಗಗಳನ್ನು ಹಿಡಿಯುತ್ತಾರೆ. ಎಲ್ಲೋ ಒಂದು ಕಡೆ ಬಲ ಕುಗ್ಗಿದೆ ಅಂತಲೆ ಹೇಳಬಹುದು.

**ಪ್ರಶ್ನೆ:–** ದಲಿತ ಸಂಘಟನೆಗಳಲ್ಲಿ ಬದಲಾವಣೆ ತರಲಿಕ್ಕೆ ಸಾಧ್ಯ ಇಲ್ವಾ?

**ಉತ್ತರ:**–ಈಗ ೨ ದಶಕಗಳ ಕಾಲ ಕರ್ನಾಟಕದಲ್ಲಿ ಇದ್ದಂತಹ ದಲಿತ ಚಳುವಳಿ ಮೂಲಭೂತ ಅತ್ಯಗತ್ಯ ಬೇಡಿಕೆ ಏನಿದೆಯೋ ಅದನ್ನ ಒಂದು ಹಂತದವರೆಗೂ ಪೂರೈಸ್ತು. ಹಾಗಾಗಿ ಚಳುವಳಿಗೆ ಅದರ ನಂತರ ಇದ್ದಂತಹದ್ದು ರಾಜಕೀಯ ಉದ್ದೇಶವನ್ನು ಈಡೇರಿಸೋ ಪ್ರಯತ್ನವನ್ನು ಮಾಡೋಕ್ಕೆ ಬೇಕಾದಂತಹ ಸಿದ್ಧತೆಯನ್ನು ಸಂಘಟನೆ ರೂಪಿಸಬೇಕಾಗಿತ್ತು. ಅದು ಆಗಲಿಲ್ಲ.

ಹಿಂದೆ ನಕ್ಸಲ್‌ಗೆ ಬೆಂಬಲವಾಗಿದ್ರು, ಸಿಪಿಐಗೆ ಸಪೋರ್ಟ್ ಮಾಡೋರಿದ್ರು ಸಿಪಿಐಗೆ ಬೆಂಬಲವಾಗಿದ್ರು, ಲೋಹಿಯಾವಾದಿಗಳಿದ್ರು. ಸೊ.. ಯಾವುದೇ ರಾಜಕೀಯ ಸಿದ್ಧಾಂತಗಳಿಗೂ ಒಳಪಡದೆ ಹಾಗೇ ವಿಚಾರವಾದಿಗಳಾಗಿದ್ದಂತಹವರು ಇದ್ರು.ಒಟ್ಟು ಪ್ರಗತಿಪರ ಉದಾರವಾದ ನಿಲುವು ಇಟ್ಕೊಂಡು ಎಷ್ಟೋ ಜನ ಬಲಪಂಥೀಯ ಚಿಂತನೆಗಳನ್ನು ಒಪ್ಪಿಕೊಂಡಿದ್ರು. ಸಾಮಾಜಿಕವಾಗಿ ಇಲ್ಲಿರೋದು ಸರಿ ಅನ್ನೋರು ಇದ್ರು.ಈಗಾಗಿ ಎಲ್ಲಾತರಹ ವಲಯಗಳಿಂದ ಸೈದ್ಧಾಂತಿಕ ಹಿನ್ನೆಲೆಗಳಿಂದ ಬಂದವರು ಅಲ್ಲಿದ್ರು. ದಲಿತ ಚಳುವಳಿಗೆ ತನ್ನದೇ ಆದಂತಹ ಒಂದು ರಾಜಕೀಯ ಸಿದ್ಧಾಂತ ಈವರೆಗೂ ಇಲ್ಲ. ಬಹುಶಃ ಈ ನಿಟ್ಟಿನಲ್ಲಿ ಆಲೋಚನೆ ಮಾಡಿದರೆ ದಲಿತ ಸಂಘಟನೆಗಳಲ್ಲಿ ಬದಲಾವಣೆ ತರಲು ಸಾಧ್ಯವಿದೆ. ಅಂಬೇಡ್ಕರ್‌ರವರಿಗೂ ಒಂದು ರಾಜಕೀಯ ಸಿದ್ಧಾಂತ ರೂಪಿಸಲಿಕ್ಕೆ ಸಾಧ್ಯವಾಗಲಿಲ್ಲ. ಅವರಿಗಿದ್ದ ಕಡಿಮೆ ಸಮಯದಲ್ಲಿ ಹಲವು ಮಹತ್ತರವಾದ ಬದಲಾವಣೆಗಳನ್ನು ತಂದರೂ ಸಹ ಬೆಂಬಲ ಕಡಿಮೆ ಇತ್ತು.ಅದಕ್ಕೆ ಹಿಂದು ಮುಂದು ನೋಡದೆ ಜನರು ದಿಕ್ಕು ತಪ್ಪಿದೆ. ಬುದ್ಧಿಸಂಗೆ ಹೋಗ್ತಾಇದ್ದೇವೆ. ಜಸ್ಟ್ ಬುದ್ಧಿಸಂಗೆ ಎಂಟರ್ ಆದ ನಿಮ್ಮನ್ನ ಅದು ಬಹಳಷ್ಟು ರೀತಿಯಲ್ಲಿ ಪ್ರೊಟೆಕ್ಟ್ ಮಾಡುತ್ತೆ. ಸೊ.. ಅದೆಲ್ಲದರ ದೂರದೃಷ್ಟಿ ಇಟ್ಕೊಂಡೆ ಅಂಬೇಡ್ಕರ್ ಅವರು ಬುದ್ಧಿಸಂನ ಒಪ್ಪಿಕೊಂಡ್ರು ಅಂತ ನಾನು ನಂಬಿದ್ದೇನೆ.

**ಪ್ರಶ್ನೆ:**– ಧರ್ಮ ಬಿಟ್ರು, ಜಾತಿ ಬಿಡಲ್ಲ ಅನ್ನೋ ರೀತಿಯಲ್ಲಿ ನಾವು ಯಾವುದೇ ಧರ್ಮಕ್ಕೆ ಸೇರಿದ್ರು ಸ್ಥಳೀಯವಾಗಿ ನಮ್ಮನ್ನು ಒಪ್ಪಿಕೊಳ್ಳೋದು ಕಡಿಮೆನೇ ಅನ್ನಿಸುತ್ತೆ! ಸರ್.

**ಉತ್ತರ:**–ಅದಕ್ಕೆ ಏನು ಹೇಳಬೇಕು ಅಂತಂದ್ರೆ ಹಿಂದೂ ಧರ್ಮದಲ್ಲಿ ಪರಂಪರೆ ಮತ್ತು ಸಂಪ್ರದಾಯವನ್ನ ಗುರುತಿಸಬಹುದು. ಪರಂಪರೆ ಎಂದರೆ ಲೋಕಾಯತರು ಚಾರವಾಕರಿಂದ ಹಿಡಿದು ಅಂಬೇಡ್ಕರ್ ವರೆಗೂ ಗುರುತಿಸುತ್ತೇವೆ. ಇದು ಪರಂಪರೆ ಇದು ಬದಲಾವಣೆಯನ್ನು ಬಯಸುವಂತಹ ಚಿಂತನೆಗಳ ಪರಂಪರೆ. ಅದ್ರೆ ಸಂಪ್ರದಾಯ ಅನ್ನುವಂತಹದ್ದು ೩೦೦೦ ವರ್ಷಗಳ ಹಿಂದೆ ಮಾಡಿರೋದನ್ನೇ ಇಂದು ಸಹ ನಿರ್ವಹಿಸುತ್ತೇ ನಿಂತ ನೀರಂತೆ ಆವೆರಡರ ಮದ್ಯ ಬಹಳ ವ್ಯತ್ಯಾಸವಿದೆ.

ಹಿಂದೂ ಧರ್ಮದಲಿ ಉಳಿದಿದ್ರೆ, ಸಂಪ್ರದಾಯ ಅಂತನೇ ಕಟ್ಟಿಹಾಕುವುದು. ಅಂದ್ರೆ ೩೦೦೦ ವರ್ಷಗಳ ಹಿಂದೆ ಒಬ್ಬ ಅಸ್ಪೃಶ್ಯ ಸಮುದಾಯಕ್ಕೆ ಏನನ್ನ ವಿಧಿಸಿದ್ದಿಯೋ ಅದನ್ನ ಇವತ್ತಿವರೆಗೂ ಮುಂದುವರೆಸುತ್ತಾರೆ. ಬದಲಾಯಿಸುವುದಿಲ್ಲ. ಬುದ್ಧಿಸಂನಲ್ಲಿ ಪ್ರವೇಶ ಮಾಡಿದ್ರೆ ಅಮೇಲ್ ಒಂದಷ್ಟು ದಿನ ನಾಲ್ಕೈದು ತಲೆಮಾರುಗಳ ನಂತರ ನಿಮ್ಮ ಮಕ್ಕಳನ್ನ ಯಾರು ದಲಿತ ಅಸ್ಪೃಶ್ಯ ಅಂತ ಗುರುತಿಸುವುದಿಲ್ಲ. ಅದು ಪ್ರಾರಂಭದಲ್ಲಿ ಇದ್ರು ಕ್ರಮೇಣ ಹೊರಟು ಹೋಗುತ್ತೆ, ಅದರ ಚಹರೆಗಳು ಉಳಿಯುವುದಿಲ್ಲ.

**ಪ್ರಶ್ನೆ:**– ಜಾತಿ ನಿರ್ಮೂಲನೆ ಮಾಡಲು ಸಾಧ್ಯವೇ? ಅಂತರ್ ಜಾತಿ ವಿವಾಹಗಳಿಂದ ಬದಲಾವಣೆ ತರಬಹುದಾ?

**ಉತ್ತರ:–** ನೋಡಿ ಈಗ ಅದೇನೆ ಬಹಳ ಗೊಂದಲ. ಏನು ಅಂತಂದ್ರೆ ಲೋಹಿಯಾವಾದದಲ್ಲಿ ಚೆನ್ನಾಗಿ ಹೇಳಿದ್ದಾರೆ. ನೀವು ಒಂದು 'ಸ್ಕ್ರೂ'ನಾ ಮೂರು ಸಾವಿರ ವರ್ಷಗಳಿಂದ ಒಂದೇ ದಿಕ್ಕಿನಲ್ಲಿ ತಿರುಗಿಸಿದ್ದಾರೆ. ಜಾತಿ ಅನ್ನುವಂತಹ ಸ್ಕ್ರೂನಾ ಈಗ ತಿರುಗಿಸಿ ತಿರುಗಿಸಿ ಬಿಗಿ ಮಾಡಿದ್ದಾರೆ. ಅದನ್ನ ಈಗ ನೇರವಾಗಿ ಕೀಳ್ತೀರಾ ನೀವು? ಆಗೋದಿಲ್ಲ. ಅದಕ್ಕೆ ಅದನ್ನ ರಿವರ್ಸ್ ಮಾರ್ಗದಲ್ಲಿ ತೆಗೆಯಬೇಕು. ಹೌದಾ? ಈಗ ಜಾತಿ ಆಧಾರದ ಮೇಲೆ ತಾನೆ ಶೋಷಣೆ ಮಾಡಿದ್ದು. ಸೊ..ಯಾವ ಜಾತಿಯ ಆಧಾರದ ಮೇಲೆ ನೀವು ಇಂತಹ ಜಾತಿಯವನು ಅಂತ ಗುರುತಿಸಿ ಶೋಷಣೆ ಮಾಡಿದ್ದಾರೋ, ಅದೇ ಮಾನದಂಡದ ಮೇಲೆ ಜನನ ಆರ್ಗನೈಜ್ ಮಾಡಬೇಕು, ಅದಕ್ಕೇನೆ ಲೋಹಿಯಾ ಕರೆಕ್ಟಾಗಿ ಹೇಳ್ತಾರೆ. ಜಾತಿ ನಾಶಕ್ಕಾಗಿ ಜಾತಿ ಸಂಘಟನೆ.

**ಪ್ರಶ್ನೆ:–** ಜಾತಿ ವಿನಾಶದಲ್ಲಿ ಅಂತರ್ ಜಾತಿ ವಿವಾಹಗಳು ಹೇಗೆ ಸಹಾಯಕ?

**ಉತ್ತರ:–** ಅವೆಲ್ಲಾ ಒಂದು ಸ್ಟ್ರಾಟಜೀ ಅಷ್ಟೇನೆ. ಜಾತಿ ವಿನಾಶ ಅಷ್ಟು ಸುಲಭದ್ದಲ್ಲ. ಜಾತಿ ವಿನಾಶವಾಗುವುದರಲ್ಲಿ ಮನುಷ್ಯ ಕುಲವೇ ನಾಶವಾಗಿರುತ್ತೇ. ಅದು ಬೇರೆ ಪ್ರಶ್ನೆ. ಆಗಂತ ನಮ್ಮ ಕಣ್ಣಮುಂದೆ ಅನ್ಯಾಯವಾಗ್ತಾಯಿದ್ರೆ ನೋಡ್ಕೊಂಡು ಸುಮ್ಮನಿರಕ್ಕಾಗಲ್ಲ. ವಿರೋಧಿಸಲೇ ಬೇಕು. ಸಹ ಪಂಕ್ತಿ ಭೋಜನ, ಅಂತರ್ ಜಾತಿ ವಿವಾಹ ಇವೆಲ್ಲಾ ಜಾತಿ ವಿನಾಶದ ಹೋರಾಟದಲ್ಲಿ ಒಂದೊಂದು ಭಾಗಗಳು ಅಷ್ಟೇನೆ. ಅಂತರ್ ಜಾತಿ ವಿವಾಹ ಒಂದರಿಂದಲೇ ಜಾತಿ ವಿನಾಶ ಸಾಧ್ಯವಿಲ್ಲ. ಎಷ್ಟೋ ಸಂದರ್ಭದಲ್ಲಿ ಹುಡುಗ ಹುಡುಗಿ ದೈಹಿಕವಾಗಿ ಆಕರ್ಷಣೆಗೆ ಒಳಪಟ್ಟು ಜಾತಿ ಹಿನ್ನಲೆ ನೋಡದೆ ಮದುವೆಯಾಗ್ತಾರೆ. ಆಮೇಲೆ ಮನೆಯವರು ಒಪ್ಪಿಕೊಂಡ್ರೆ ಹುಡುಗಿ ಹುಡುಗನ ಜಾತಿಗೆ ಸೇರ್ಪಡೆಯಾಗ್ತಾಳೆ. ಹುಡುಗನ ಜಾತಿಯಲ್ಲಿ ಒಂದು ಸಂಖ್ಯೆ ಜಾಸ್ತಿ ಆಗತ್ತೆ, ಹುಡುಗಿಯ ಜಾತಿಯಲ್ಲಿ ಒಂದು ಸಂಖ್ಯೆ ಕಡಿಮೆಯಾಗುತ್ತೇ, ಹಾಗಾಗಿ ಅದರಿಂದ ಪ್ರಯೋಜನವಿಲ್ಲ. ಹಾಗಂತ ನಾವು ಅಂತರ್ ಜಾತಿ ವಿವಾಹ ಆಗಬಾರದು ಅಂತಾನೂ ಹೇಳಲ್ಲ. ಅಂತರ್ ಜಾತಿ ವಿವಾಹಗಳು ಆಗಬೇಕು ಯಾಕಂದ್ರೆ? ಅಲ್ಲಿ ಮಿಶ್ರ ಸಂತತಿಯಾದ್ರು ಬೆಳೆಯಲಿ ಅಂತ.


**ಪ್ರಶ್ನೆ:–** ಹಣೆಪಟ್ಟಿಗೆ ಒಗ್ಗುವ ಸಂಪ್ರದಾಯ ಬೆಳೆತಾಯಿದೆ. ನಿಮ್ಮನ್ನು ಯಾವ ಹಿನ್ನೆಲೆಯಿಂದ ಗುರುತಿಸ ಬಹುದು.

**ಉತ್ತರ:–** ನಾನು ದಲಿತ ಅಂತ ಗುರುತಿಸಿಕೊಂಡಿಲ್ಲ. ಬೇರೆಯವರು ನನ್ನ ಗುರುತಿಸಿದ್ದಾರೆ. ಆ ರೀತಿ ಗುರುತಿಸುವುದರಲ್ಲಿ ಅರ್ಥವೇ ಇಲ್ಲ. ನಾನು ದಲಿತ ಚಳುವಳಿಯಲ್ಲಿ ಕೆಲಸ ಮಾಡಿರಬಹುದು. ನನ್ನ ತಾಯಿ ಬೇರು ಇರುವುದು ದಲಿತ ಚಳುವಳಿಯಲ್ಲೆ. ಇವತ್ತಿಗೂ ನನ್ನ ಸಂವೇದನೆ ದಲಿತ ಸಂವೇದನೇನೆ. ಅದು ನಿಜ. ಅಂತಹ ಸಂದರ್ಭವಲ್ಲಿಯೂ ನಿಷ್ಠೂರವಾಗಿ ವ್ಯಾಖ್ಯಾನ ಮಾಡುವ ಸಂದರ್ಭ ನಾನು ಖಂಡಿತವಾಗಿಯೂ ದಲಿತ ಸಾಹಿತಿ ಆಗಲಿಕ್ಕೆ ಸಾಧ್ಯವಿಲ್ಲ. ಯಾಕಂದ್ರೆ ನಾನು 20 ವರ್ಷಗಳು ಅಸ್ಪೃಶ್ಯನ ಅನುಭವವಾಗಿಲ್ಲ. ಯಾರೋ ಬ್ರಾಹ್ಮಣ ಮನೆಯಲ್ಲಿ ಊಟ ಮಾಡುವಾಗ ನನ್ನನ್ನ ಹೊರಗಡೆ ಹಾಕಿದ್ದಾರೆ. ಅದ್ರೆ ಹೊಲೆಯರು ಮಾದಿಗರ ನಿರ್ದಿಷ್ಟವಾಗಿ ಹಳ್ಳಿಯ ದಾರಿದ್ರ್ಯದ ತಲ್ಲಣಗಳನ್ನು ನಾನು ಅನುಭವಿಸಿಲ್ಲ. ಅದರ ಯಾವುದರ ಹಿನ್ನೆಲೆ ಇಲ್ಲದೆ ನಾನು ಗೋಮಾಂಸ ಒಂದೆರಡು ಬಾರಿಯಲ್ಲಿ ನೂರಾರು ಬಾರಿ ತಿಂದಿದ್ದೇನೆ. ನಮ್ಮ ತಂದೆಗೆ ಹೇಳಿದ್ದೀನಿ. ಅದಕ್ಕೆ ನಮ್ಮ ತಂದೆ ಮನೆಯಿಂದ ಹೊರಗಡೆ ಹಾಕಿದ್ದು ಆಗಿದೆ. ಆಗಾಗಿ ನೇರವಾಗಿ ಅನುಭವಕ್ಕೆ ಒಳಪಡದೆ ಇದ್ದುದ್ದರಿಂದ ದಲಿತ ತಲ್ಲಣಗಳ ಅನುಭವ ನನ್ನೊಳಗಿಂದ ಬರದೇ ಇದ್ದುದ್ದರಿಂದ, ಚಿಕ್ಕಂದಿನಿಂದ ಆ ಪರಿಸರವೂ ಇಲ್ಲವಾದುದ್ದರಿಂದ. ನಾನು ಬರೆಯುವ ಸಾಹಿತ್ಯ ಅಧಿಕೃತವಾಗಿ ದಲಿತ ಸಾಹಿತ್ಯವಲ್ಲ. ದಲಿತ ಸಂಸ್ಕೃತಿಗೆ ಪೂರಕವಾದ ಸಾಹಿತ್ಯ.

**ಪ್ರಶ್ನೆ:**– ಮೀಸಲಾತಿ ಬಗ್ಗೆ ನಿಮ್ಮ ಅಭಿಪ್ರಾಯ:

**ಉತ್ತರ:**–ಮಹದೇವರು ಬಹಳ ಚೆನ್ನಾಗಿ ಹೇಳ್ತಾರೆ. ಒಬ್ಬ ದಲಿತನಿಗೆ ಒಂದು ರೂಪಾಯಿ ಕೊಟ್ಟಿಟ್ಟು ೧೦ ರೂಪಾಯಿ ಕೊಟ್ಟೆ ಅಂತ ಅಡ್ವರ್ಟೈಜ್ ಮಾಡುತ್ತೆ. ಸಮಾಜ ಅಯ್ಯೋ ೧೦೦ ರೂಪಾಯಿ ಕೊಟ್ಬು ಬಿಟ್ರು ಅಂತ ಅರ್ಥ ಮಾಡ್ಕೊಳ್ಳುತ್ತೇ. ಆಂದ್ರೆ ಈ ಸಮಾಜದ ಸಂಪತ್ತನ್ನ ಇಷ್ಟು ದಿನಗಳವರೆಗೂ ಉಳಿಸಿಕೊಂಡು ಬಂದಿರುವುದು ಪ್ರಮುಖ ವರ್ಗಗಳು ಅಲ್ವಾ? ಇವತ್ತಿಗೂ ಒಕ್ಕಲಿಗರು ಉಳುತ್ತಾರಾ? ಉಳ್ತೋದು ಅವರ ಮನೆಯಲ್ಲಿ ಕೆಲಸ ಮಾಡೋ ದಲಿತರು ತಾನೆ. ಅಥವಾ ಯಾವುದೇ ಒಂದು ಕೆಳ ಜಾತಿಯವರೇ ಮಣ್ಣಿನೊಂದಿಗೆ ನೇರವಾಗಿ ಗುದ್ದಾಡಿಕೊಂಡು ಅಲ್ಲಿಂದ ಜೀವದ ಬೆಳೇ ಎತ್ತೊದೇ ಬೇರೆ ಅದರ ಫಲವನ್ನು ಅನುಭೋಗಿಸೋರೆ ಬೇರೆ. ಅದನ್ನೆ ಬೂರ್ಜ್ವಾ ಪದ್ಧತಿ ಅನ್ನೋದು ಕೂಡ ಕಡಿನ ಉಜ್ಜುವಂತವನು ಬೂರ್ಜ್ವಾ. ಸೊ.. ಇವರು ಯಾವನೋ ಕೈಯಲ್ಲಿ ಕತ್ತೆ ಕೆಲಸ ಮಾಡಿಸ್ತಾನೆ. ಇವನು ಮಾಡಬಾರದ ಎಲ್ಲಾ ಕೆಲಸಗಳನ್ನು ಅವರು ಮಾಡ್ತಾರೆ. ಅದರ ಅಂತಿಮ ಫಲ ಬೂರ್ಜ್ವಾಗಳೇ ಪಡೀತಾರೆ.

ಅಂತಹ ಸಂದರ್ಭದಲ್ಲಿ ಇಂತಹ ಜಾತಿ ಪದ್ಧತಿ ಇರುವಾಗ ನೀವು ರಿಸರ್ವೇಷನ್ ಕೊಡಲೇ ಬೇಕು ಮೀಸಲಾತಿ ಯಾಕೆ? ಅಂತ ಒಂದು ಉದಾಹರಣೆ ತೋರಿಸ್ತೀನಿ.




ನೋಡಿ ಇದು ರನ್ನಿಂಗ್ ರೇಸ್‌ನ ಕೋರ್ಟು ಅಂತ ಭಾವಿಸಿದ್ರೆ. (ಎ, ಬಿ, ಸಿ) ಇವು ಜಾತಿಗಳು ಎಂದು ಭಾವಿಸೋಣ. ಇವರ ಅಂತಿಮ ಗುರಿ ಗಮ್ಯವನ್ನು ಮುಟ್ಟುವುದು.ಅದೇ (ಎಕ್ಸ್, ವೈ) ರೇಖೆ ಇದನ್ನು ಸರ್ಕಾರದ ಸೌಲತ್ತುಗಳು ಎಂದು ಭಾವಿಸೋಣ. 'ಎ' ಯು (ಎಕ್ಸ್, ವೈ)ರೇಖೆಯನ್ನು ಮಾಡೋದಿಕ್ಕೆ ದೂರ ಕಡಿಮೆ ಇದೆ. ಅತ್ಯಂತ ಕಡಿಮೆ ಸಮಯದಲ್ಲಿ ಮುಟ್ಟಬಹುದು. ಅದೇ ರೀತಿಯಾಗಿ 'ಬಿ' ಮತ್ತು 'ಸಿ' ಯು (ಎಕ್ಸ್, ವೈ) ರೇಖೆಗಿಂತ ಸ್ವಲ್ಪದೂರ ಇದೆ, ಮತ್ತೆ ಗಮ್ಯವನ್ನು ಮುಟ್ಟಲಿಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಆದಕಾರಣ ಎ ಯಿಂದ ಬಿ ಗೆ, ಬಿ ಯಿಂದ ಸಿ ಗೆ ಒಂದು ನಿರ್ದಿಷ್ಟ ಅಂತರವನ್ನು ಏರ್ಪಡಿಸಲಾಗಿದೆ ಅದೇ ಮೀಸಲಾತಿ.

**ಪ್ರಶ್ನೆ:**–ನಿಮ್ಮ ಸಾಹಿತ್ಯವು ಯಾವ ಆಶಯಗಳ ಹಿನ್ನೆಲೆಯದ್ದು?

ಉತ್ತರ:-- ಚಳುವಳಿಯ ಹಿನ್ನೆಲೆಯಲ್ಲಿ ಅಥವಾ ಎಡಚಿಂತನೆಯ ಆಶಯಗಳ ಹಿನ್ನೆಲೆಯದ್ದು. ನಾನು ಇವತ್ತಿನವರೆಗೆ ಬರೆದಿರುವ ಎಲ್ಲಾ ಸಾಹಿತ್ಯಗಳು ಕೂಡ ದಲಿತ ಆಶಯಗಳನ್ನು ಒಳಗೊಂಡತಿದೆ. ಲೇಖಕ, ಅಂಕಣ, ಕವಿತೆ, ನಾಟಕ, ಬೇರೆ ಏನೇ ಸಂಶೋಧನೆ ಮಾಡ್ತಾ ಇರಬಹುದು. ಇವೆಲ್ಲಾದರ ಒಟ್ಟು ಆಶಯ ಈ ನೆಲದ ಇತಿಹಾಸವನ್ನು ಅದು ಸಂಸ್ಕೃತಿ

ಇತಿಹಾಸ ಆಗಿರಬಹುದು, ರಾಜಕೀಯ ಇತಿಹಾಸ ಆಗಿರಬಹುದು, ಸಾಮಾಜಿಕ ಇತಿಹಾಸಆಗಿರಬಹುದು. ಅದನ್ನುಮರು ರೂಪಿಸುವ ಕೆಲಸ ಮಾಡ್ತಾಇದ್ದೇನೆ. ಯಾಕಂದ್ರೆ ಇದನ್ನು ದಿಕ್ಕು ತಪ್ಪಿಸಿದ್ದಾರೆ.ಅದನ್ನು ಸರಿ ಪಡಿಸಿ ಅದರ ನಿಜ ಸ್ವರೂಪವನ್ನು ಜನರ ಮುಂದೆ ಇಟ್ಟರೆ ಜನ ಆಮೇಲೆ ತೀರ್ಮಾನ ತಗೋಬಹುದು. ಸೊ..ನನ್ನ ಲೈಫ್ ನಲ್ಲಿ ಇನ್ನು ಹತ್ತು ಇಪ್ಪತ್ತು ವರ್ಷ ಇರಬಹುದು.ಯಾರಿಗೆ ಗೊತ್ತು ಯಾವಾಗ ಹೋಗ್ತೀವಿ ಅಂತ? ಗೊತ್ತಿಲ್ಲ. ಇಷ್ಟು ದಿನದ ನಮ್ಮ ಹೋರಾಟದ ಬದುಕಲ್ಲಿ ನಾವು ಏನನ್ನು ಅರ್ಥ ಮಾಡಿಕೊಂಡಿದ್ದೇವೋ ಆ ಅರ್ಥದ ಹಿನ್ನೆಲೆಯಲ್ಲಿ ನಾವು ಒಂದು ಸಾಂಸ್ಕೃತಿಕ ಇತಿಹಾಸನ ಕಟ್ಟಿ, ಜನರ ಮುಂದೆ ಇಟ್ಟು, ಇದರ ಪ್ರಕಾರ ನೀವು ಹೀಗಿರಪ್ಪ, ಇದು ಸತ್ಯ ಅಂತ ಹೇಳ್ಬಿಟ್ಟು ಹೋಗೋಣ ಅಂತ. ಇಷ್ಟಾದ್ರೂ ಮಾಡೋಣ ನನ್ನ ಲೈಫ್‌ಲ್ಲಿ ಇನ್ನೇನೂ ಮಾಡೋಕ್ಕೆ ಆಗೋಲ್ಲ.

**ಪ್ರಶ್ನೆ**:- ನಿಮ್ಮ ಕಾವ್ಯಾದ ಸ್ಥಾಯಿ ಭಾವ ಯಾವುದು ಸರ್?

**ಉತ್ತರ**:- ವಿಷಾದ ಅಂತ ನಾನು ಅಂದ್ಕೊಂಡಿದ್ದೇನೆ.

**ಪ್ರಶ್ನೆ**:- ಸರ್, ಸಿನಿಮಾಗಳಲ್ಲೂ ಸಾಕಷ್ಟು ಶ್ರಮಿಸಿದ್ದೀರಾ ನೀವು ನಂಬಿದ ಆಶಯಗಳನ್ನು ಹೇಗೆ ಸಿನಿಮಾ ಮಾಧ್ಯಮಗಳಲ್ಲಿ ಅಭಿವ್ಯಕ್ತಪಡಿಸ್ತೀರಾ?

**ಉತ್ತರ**:-(ಸಿನಿಮಾದಲ್ಲಿ ಬಳಸಿದ ಉದಾಹರಣೆ ಹೇಳ್ತೀನಿ)ಬುಟ್ಟಿ ಹೆಣೆಯುವ ಕುಟುಂಬ ಅಂದ್ರೆ ಮೇದರು. ಅವರಲ್ಲಿ ಹೆಣ್ಣು ಮಾರುವ ಪದ್ಧತಿ ಇರುತ್ತೆ. ಒಬ್ಬ ತನ್ನ ಸೊಸೆಯನ್ನ (ಗಂಡ ಸತ್ತಿರುತ್ತಾನೆ) ಯಾವನಿಗೋ ಮಾರಿಬಿಡುತ್ತಾನೆ ಅವಳಿಗೆ ತನ್ನ ಮಗಳನ್ನು ಓದಿಸಬೇಕು ಅಂತ ತುಂಬಾ ಆಸೆ ಕೊಂಡು ಕೊಂಡು ಹೋದವನು ಮಗಳನ್ನು ಕರೆದು ಹೋಗೋದಿಲ್ಲ. ಅವಳನ್ನ ಮಾತ್ರ ಕರ್ಕೊಂಡು ಹೋಗ್ತಾನೆ. ಆಕೆಯ ಮಗಳು ಮಂಯಸ್ಸಿಗೆ ಬಂದರೆ? ಆ ತಾತ ಮೊಮ್ಮಗಳನ್ನು ಮಾರಾಟ ಮಾಡ್ತಾನೆ. ಅದಕ್ಕೆ ಅವಳು ವಿರೋಧಿಸಿ ತಿರುಗಿಬಿದ್ದು ನಿಂತ್ಕೊಂಡ್ತಾಳೆ. ಪೊಲೀಸಗೆ ಕೇಸ್ ಕೊಡ್ತಾಳೆ ಕೇಸ್ ವಾಪಸ್ಸು ತಗೋ ಇಲ್ಲಾಂದ್ರೆ ಸಾಮಾಜಿಕ ಬಹಿಷ್ಕಾರ ಹಾಕ್ತೀವಿ ಅಂತ ಎದುರಿಸಿ ಪಂಚಾಯ್ತಿ ಮಾಡ್ತಾರೆ. ನೋಡಮ್ಮ ಸಾವಿರಾರೂ ವರ್ಷಗಳಿಂದ ಬಂದ ಆಚಾರ ನೀನು ಬಂದು ಬದಲಾಯಿಸಿ ಅಂದ್ರೆ ಬದಲಾಯಿಸಕ್ಕೆ ಆಗೋದಿಲ್ಲ ಅಂತಾರೆ. ಅದಕ್ಕೆ ಅವಳು ಹೇಳ್ತಾಳೆ ಹೌದು ಸಾವಿರಾರು ವರ್ಷಗಳಿಂದ ನೀವು ಮುಚ್ಚಿಗೋಂಡಿ ಕಟ್ಟೋದು. ಈಗೆ ಯಾಕೆ ಪಂಚೆಗಳು? ಬಿಚ್ಚಿ ನಿಮ್ಮ ಪಂಚೆಗಳ ಅಂತಾಳೆ ಮುಖ್ಯವಾಗಿ ಇದರ ಒಳ ರಾಜಕೀಯ ಗಮನಿಸಬೇಕು.

ಇನ್ನೂ ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ಮಾಡುವಂತಹದ್ದು ಇದೆ. ಸಮಯ ಅಭಾವದಲ್ಲೂ ಇಷ್ಟು ಮಹತ್ವವಾದ ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು ಸರ್.

# ಪ್ರೊ.ವಿ ಚಂದ್ರಶೇಖರ್ ನಂಗಲಿ' ಯವರ ಸಂದರ್ಶನ

ಕೋಲಾರ ಜಿಲ್ಲೆ ಮುಳುಬಾಗಿಲ್ ತಾಲೂಕಿನ ನಂಗಲಿ ಗ್ರಾಮದವರಾದ ಪ್ರೊ.ವಿ.ಚಂದ್ರಶೇಖರ ನಂಗಲಿಯವರು ಪ್ರಸ್ತುತ ಪ್ರಥಮ ದರ್ಜೆ ಕಾಲೇಜು ಮಾಲೂರಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ 'ಹಸಿರು ಕಾಳಜಿ' ಮತ್ತು 'ಜೀವಕೇಂದ್ರಿತ' ದೃಷ್ಟಿ ಕೋನಗಳಿಂದ ಪ್ರಸಿದ್ಧರಾಗಿರುವ ನಂಗಲಿಯವರು, 'ನಿರ್‌ಬೀಜೀಕರಣದ ವಿರಾಟ್ ಸ್ವರೂಪ (೧೯೯೯) ಮತ್ತು 'ಕಾಡು-ತೋಪು' (೨೦೦೦) ಎಂಬ ಕೃತಿಗಳನ್ನು ನೀಡಿದ್ದಾರೆ.

ಸಾಹಿತ್ಯ ಚಿಂತನೆಗೆ ಪರಿಸರದ ಆಯಾಮವೊಂದನ್ನು ಗಟ್ಟಿಯಾಗಿ ರೂಪಿಸುತ್ತಿರುವ ನಂಗಲಿಯವರು. ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಆಳವಾದ ಅಧ್ಯಯನ ನಡೆಸಿ ಮಾರ್ಕ್ಸ್‌ವಾದಿ ವಿಮರ್ಶೆ (೧೯೯೫), ನಾ ನಿಟ್ಟುವಳಲ್ಲ (೧೯೯೭), ನಾ ನಿಮ್ಮೊಳಗು (೨೦೦೨), ಶಿಟ್ಟಿಕ್ಕಿ ತಿರುಗಿ (೨೦೦೩), 'ನಡೆದುದೇ ದಾರಿ' ಮುಂತಾದ ವಿಮರ್ಶಾ ಕೃತಿಗಳನ್ನು ಕೊಟ್ಟಿದ್ದಾರೆ. 'ಆಗನಾಗ' ಎಂಬ ಗೆಳೆಯರ ಬಳಗದೊಂದಿಗೆ ಕಾಡುಮೇಡುಗಳಲ್ಲಿ ಕಾಲ್ನಡಿಗೆಯ ತಿರುಗಾಟಗಳನ್ನು ನಡೆಸುತ್ತಿರುವ ನಂಗಲಿಯವರು. 'ಕನ್ನಡದಲ್ಲಿ ಚರಣಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' (೨೦೦೪) ಎಂಬ ಪಿ.ಎಚ್.ಡಿ ಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ.

**ನಮಸ್ಕಾರಗಳು ಸರ್. . . .**

**ಪ್ರಶ್ನೆ:**–ತಾವು ಸಾಹಿತಿಗಳಾಗಿ, ವಿಮರ್ಶಕರಾಗಿ, ಸಂಶೋಧಕರಾಗಿ, ತಮ್ಮನ್ನು ತೊಡಗಿಸಿಕೊಂಡಿದ್ದೀರಾ. ಅದರಲ್ಲೂ ಪ್ರಮುಖವಾಗಿ ವಿಮರ್ಶಕರಾಗಿ ಗುರುತಿಸಿಕೊಂಡಿದ್ದೀರಾ. ಆಗಾಗಿ ನಿಮ್ಮ ಪ್ರಕಾರ ವಿಮರ್ಶೆ ಎಂದರೇನು?

**ಉತ್ತರ:**–'ಸಾಹಿತ್ಯ ವಿಮರ್ಶೆ' ಅಂತಲೇ ಒಂದು ಪುಸ್ತಕ ಬಂದಿದೆ.ಅದನ್ನು ರೂಪಿಸಿದವರು ಸಿ.ಎಸ್ ರಾಮಚಂದ್ರ ಆಪುಸ್ತಕ ಓದಬಹುದು. ಸೈದ್ಧಾಂತಿಕ ಹಿನ್ನೆಲೆಯಿಂದ ವಿಮರ್ಶೆ ಎಂದರೇನು ಎಂದು ಸಿಗುತ್ತೆ. ಆದ್ರೆ ನಾನು ಪ್ರಾಯೋಗಿಕವಾಗಿ ಒಂದು ಮಾತು ಹೇಳ್ತೀನೆ. ವಿಮರ್ಶೆ ಇಲ್ಲದೆ ಜೀವನ ಇಲ್ಲ. ಅಲ್ವಾ, ಯಾವುದೇ ಆಗಲಿ ನಾವು ವಿಮರ್ಶೆ ಮಾಡಿ ತಗೋತೀವಿ. ಆ ವಿವೇಚನೆ ಇರಬೇಕು ನನ್ನ ಪ್ರಕಾರ ಸಾಹಿತ್ಯ ವಿಮರ್ಶೆ ಬೇರೆ ಅಂತ ತಿಳಿದುಕೊಂಡಿಲ್ಲ ಅವೆರಡೂ ಒಂದೇ. ಸಾಹಿತ್ಯ ವಿಮರ್ಶೆ ಮತ್ತು ಜೀವನ ವಿಮರ್ಶೆಯ ಮಧ್ಯ ಅದ್ವೈತ ಸ್ಥಿತಿ ಇದೆಯಲ್ವೇ ಅದನ್ನ ವಿಮರ್ಶೆ ಎಂದು ಕರೆಯುತ್ತೇನೆ.

**ಪ್ರಶ್ನೆ:**– ನಿಮ್ಮ ಕೃತಿಗಳ ಮೊದಲ ವಿಮರ್ಶಕರು ಯಾರು?

**ಉತ್ತರ:**– ನನ್ನ ಕೃತಿಗಳ ಮೊದಲ ವಿಮರ್ಶಕ ಒಂದು ದೃಷ್ಟಿಯಿಂದ ಅದು ನಾನೇ. ಗರ್ವದ ಮಾತಲ್ಲ. ಯಾಕಂದ್ರೆ ಕವಿಯಾಗಲಿ, ವಿಮರ್ಶಕ ಆಗಲಿ, ತಾನು ಬರೆದದ್ದನ್ನ ತಾನೇ ವಿಮರ್ಶೆ ಮಾಡ್ಕೋಂತ್ತಾನೆ. ಮೊದಲು ಎಷ್ಟೋ ಸಲ ನಮ್ಮ ಆತ್ಮೀಯರು ಉದಾಹರಣೆಗೆ ನನ್ನ ಹೆಂಡತಿ ಆಗಬಹುದು, ಅಥವಾ ನನ್ನ ತಮ್ಮ ಆಗಬಹುದು ಅಥವಾ ನನ್ನ ಆತ್ಮೀಯ ಗೆಳೆಯರಾದ ಲಕ್ಷ್ಮೀಪತಿ ಕೋಲಾರ ಆಗಬಹುದು. ಇಲ್ಲ ಅಂದ್ರೆ ನಮ್ಮ ಗುರುಗಳಾಗಬಹುದು. ಮೊದಲು

ಓದುವುದು ಇಂತಹವರೆ, ಯಾಕಂದ್ರೆ? ಯಾವತ್ತೂ ಕೂಡ ಮೊದಲ 'ಓದುಗರು ಅರ್ಥ ಸ್ಫೂರ್ತಿ' ಅಂತ ಕುವೆಂಪು ಹೇಳ್ತಾರೆ. ಅವರು ತಮ್ಮ ಕಾದಂಬರಿಯಾದ 'ಕಾನೂರು ಹೆಗ್ಗಡತಿ' ಯನ್ನು ಅಧ್ಯಾಯ-ಅಧ್ಯಾಯ ಬರೆಯುತ್ತಾ ತಮ್ಮ ಗೆಳೆಯರಿಗೆ ಹೇಳ್ತಾ ಇದ್ದರಂತೆ. ಭೂಪಾಲಂ ಚಂದ್ರಶೇಖರಯ್ಯ ಅವರೇ ಕಾನೂರು ಹೆಗ್ಗಡತಿಯ ಮೊದಲ ಓದುಗರು. ಪ್ರತಿವಾರ ಕುಪ್ಪಳಿಗೆ ಬರ್ತಾ ಇದ್ದರಂತೆ, ಇವರು ಹೇಳ್ತಾ ಇದ್ರಂತೆ, ಇದು ಅರ್ಥ ಸ್ಫೂರ್ತಿ ಎಂದು ಕೃತಜ್ಞತೆ ಹೇಳಿಕೊಂಡಿದ್ದಾರೆ.

**ಪ್ರಶ್ನೆ:**-ನಿಮ್ಮ ಮತ್ತು ಲಕ್ಷ್ಮೀಪತಿ ಕೋಲಾರ ಅವರ ಸ್ನೇಹ ಮತ್ತು ಒಡನಾಟ ಎಂತಹದ್ದು? ಅದು ಸಾಹಿತ್ಯಕವಾಗಿ, ವೈಯಕ್ತಿಕವಾಗಿ.

**ಉತ್ತರ:**- ನಾನು 1980ರಲ್ಲಿ ಕೋಲಾರದ ಸರ್ಕಾರಿ ಕಾಲೇಜಿಗೆ ಅಧ್ಯಾಪಕನಾಗಿ ಬಂದೆ. ಆಗ ಅಲ್ಲಿ ಚಂದ್ರ ಮೋಹನ್ ಅಂತ ಇದ್ರು, ಅಲ್ಲಿ ಮಾನವತಾ ವೇದಿಕೆ ಉದ್ಘಾಟನೆ ಮಾಡಲಾಗಿತ್ತು. ಇದನ್ನು ರೂಪಿಸಿದ್ದು ಲಕ್ಷ್ಮೀಪತಿ, ಎಚ್.ಎನ್.ಸೋಮಶೇಖರ ಮತ್ತು ಇವರ ಗೆಳೆಯರೇ.1980 ರಲ್ಲಿ ಕೋಲಾರದ ಕಾಲೇಜಿಗೆ ಬಂದೆ. ಆಗಿನ್ನು ಬಾಯ್ಸ್/ವುಮೆನ್ಸ್ ಕಾಲೇಜು ಎಂದು ವಿಭಾಗವಾಗಿರಲಿಲ್ಲ. ಮಾನವತಾ ವೇದಿಕೆಯ ಸಂಚಾಲಕರಾಗಿ ಚಂದ್ರ ಮೋಹನ್ ರವರ ಮೂಲಕ ಲಕ್ಷ್ಮೀಪತಿಯವರು ಪರಿಚಯವಾದರು. ಅಂದಿನಿಂದ ಇಂದಿನವರೆಗೂ ನಮ್ಮ ಸ್ನೇಹ ಗಾಢವಾಗಿದೆ. ನನ್ನ ಎಷ್ಟೋ ಮೊದಲ ಬರಹಗಳನ್ನು ಓದಿದ್ದಾರೆ. ನಾನು ಸಹ ಅವರ ಮೊದಲ ಬರಹಗಳನ್ನು ಓದಿದ್ದೇನೆ.

**ಪ್ರಶ್ನೆ:**-ಸರ್ ಮತ್ತೆ ಹೋರಾಟದಲಿ ನಿಮ್ಮ ಒಡನಾಟ ಹೇಗಿತ್ತು?

**ಉತ್ತರ:**-ಲಕ್ಷ್ಮೀಪತಿಯವರು ಎಲ್ಲಿಗೆ ಕರೆದರು ಅಲ್ಲಿಗೆ ನಾನು ಹೋಗುತ್ತಿದೆ. ರಾತ್ರಿ ಶಾಲೆಗಳಿಗಾಗಲಿ, ಮಾನವತಾ ವೇದಿಕೆಯ ಸಭೆಗಳಿಗೆ ಹೋಗುತ್ತಿದೆ. ಮತ್ತೆ ಅಧ್ಯಯನ ಮಂಡಳಿ ಅಂತ ಮಾಡ್ತಾ ಇದ್ವಿ. ಕನ್ನಡದ ಶ್ರೇಷ್ಠ ವಿಮರ್ಶೆಗಳನ್ನೆಲ್ಲಾ ನಾವು ಓದ್ತಾಯಿದ್ವಿ. ಉದಾ: ಲೋಹಿಯಾ ಅವರ 'ರಾಮ, ಕೃಷ್ಣ, ಶಿವ', ಕುವೆಂಪುರವರ 'ಆತ್ಮಶ್ರೀಗಳಿಗಾಗಿ ನಿರಂಕುಶ ಮತಿಗಳಾಗಿ' ಮತ್ತೆ 'ನಮ್ಮ ಅಳತೆಯನ್ನು ಮೀರಲಾರದ ದೇವರು,' ಶಿವರಾಂ ಕಾರಂತರದ್ದು, ಅದರ ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳೋಕ್ಕೆ ಮತ್ತು ಹಂಚಿಕೊಳ್ಳೋಕ್ಕೆ ವಾರಕ್ಕೆ ಒಮ್ಮೆ ಅಧ್ಯಯನ ಮಂಡಳಿ ನಾವು ಮಾಡ್ತಾ ಇದ್ವಿ. 'ಸಂಚಿಕೆ' ಪತ್ರಿಕೆಯ ಸಂಪಾದಕರಾಗಿದ್ದಾಗ ಎಷ್ಟೋ ಸಂದರ್ಭ ಅವರೊಂದಿಗೆ ಮಾತನಾಡಿದ್ದೇನೆ. ಅಂತರಗಂಗೆ, ಬೆಟ್ಟದಲ್ಲಿ ಅಲೆದಾಡಿದ್ದೇವೆ. ಒಂಥರಾ ನಿಸರ್ಗ ಮತ್ತು ಸಂಸ್ಕೃತಿ ಇವೆರಡು ಒಡನಾಟಗಳಲ್ಲೂ ಲಕ್ಷ್ಮೀಪತಿಯವರ ಜೊತೆ ಇದ್ದೆ. ಅದು ನನ್ನ ಅದೃಷ್ಟ.

**ಪ್ರಶ್ನೆ:**- ಇಷ್ಟೊಂದು ಒಡನಾಟ ಇದ್ದಲ್ಲಿ ಅವರ ವ್ಯಕ್ತಿತ್ವದಲ್ಲಿ ಇಷ್ಟವಾದದ್ದು ಏನು? ಏಕೆ?

**ಉತ್ತರ:**- ಲಕ್ಷ್ಮೀಪತಿಯವರ ವ್ಯಕ್ತಿತ್ವದಲ್ಲಿ ಮುಖ್ಯವಾಗಿ ಕಂಡದ್ದು 'ನೆಲ ಮುಟ್ಟುವ ಪ್ರೀತಿ' ಆ ರೀತಿ ಹೇಳಬಹುದು. 'ಡೌನ್ ಟು ಅರ್ಥ್' ಗರ್ವ ಅನ್ನುವುದು ಲವಲೇಶವೂ ಇಲ್ಲ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ. 'ಅರ್ಜುನರು ಮತ್ತು 'ಏಕಲವ್ಯರು' ಅಂತ ನನ್ನದೊಂದು ಲೇಖನವೇ ಇದೆ. ಅರ್ಜುನರು ಎಂದರೆ ಮೆಕಾಲೆಯ ಮಕ್ಕಳು ಅಂದ್ರೆ ಅಕಾಡೆಮಿಕ್ ಹಿನ್ನೆಲೆಯಿಂದ ಬಂದವರು. ಏಕಲವ್ಯ ಎಂದರೆ ಮಲೆಯ ಮಕ್ಕಳು ಅಂತ

ಹೇಳಬಹುದು. ಆಗಾಗಿ ಲಕ್ಷ್ಮೀಪತಿಯವರನ್ನ ಮೆಕಾಲೆಯ ಮಕ್ಕಳಿಗಿಂತ ಮಲೆಯ ಮಕ್ಕಳಾಗಿ ಗುರುತಿಸುತ್ತೇನೆ.

**ಪ್ರಶ್ನೆ**:- ವಿಮರ್ಶಕರಾಗಿ ನಿಮ್ಮ ಗ್ರಹಿಕೆಯಲ್ಲಿ ಲಕ್ಷ್ಮೀಪತಿ ಅವರ ಕೃತಿಗಳ ಸ್ಥಾಯಿ ಭಾವ ಯಾವುದು?

**ಉತ್ತರ** :- ಸ್ಥಾಯಿ ಭಾವ ನನ್ನ ಪ್ರಕಾರ ನಗೆಯ ಹಿಂದಿನ ನೋವು 'ಟ್ರ್ಯಾಜಿಕ್ ಕಾಮಿಡಿ'. ಅಂದರೆ ಅವರ ಆಳದಲ್ಲಿ ನೋವು ವಿಷಾದ ಇದ್ದೆ ಇರುತ್ತೆ.ಅದನ್ನ ಲಕ್ಷ್ಮೀಪತಿಯವರ ಮಾತುಗಾರಿಕೆಯಲ್ಲಿ ನೋಡಬಹುದು, ಅವರ ಕಾವ್ಯದಲ್ಲೂ ನೋಡಬಹುದು, ಅವರ ಎಲ್ಲಾ ಬರಹಗಳಲ್ಲೂ ಕಾಣುತ್ತೇನೆ. ಅವರು ಒಂದು ತರಗೆಲೆ ಮೇಲೆ ಬರೆಯಲಿ, ಬಾವಲಿ, ರಂಜಾನಿನ ರಾತ್ರಿಯಾಗಲಿ ಯಾವುದಾದರು ತಗೊಳ್ಳಿ ಅದರಲ್ಲಿ ವಿಷಾದ ದಟ್ಟವಾಗಿದೆ. ಅದು ನನಗೆ ಬಹಳ ಮುಖ್ಯ.

**ಪ್ರಶ್ನೆ**:- ಸರ್ ಅವರ ಕಾವ್ಯದ ಬಗ್ಗೆ ಮತ್ತೆ ಅವರ ಬಗ್ಗೆಯಾಗಲಿ ತಕರಾರು ಏನಾದರು ಇದೆಯಾ?

**ಉತ್ತರ**:- ಅದು ದುರಹಂಕಾರ. ಯಾರಾದ್ರು ತಕರಾರು ಹಾಕಿದರೆ ಅದು ದುರಹಂಕಾರ. ಯಾಕಂದ್ರೆ ಒಬ್ಬ ಲೇಖಕ ಬರೆಯಬೇಕಂದ್ರೆ. ಯಾರು ನಿರ್ದೇಶನ ಮಾಡಬೇಕು? ಏನ್ ವಿಮರ್ಶಕರೇನು ಗುತ್ತಿಗೆ ತಗೊಂಡಿದ್ದಾರೆ ಹೀಗೇ ಬರೆಯಬೇಕೆಂದು? ಬಹುಶಃ ಅಂತಹ ವಾತಾವರಣದಲ್ಲಿ ಬದುಕುವ ಲೇಖಕ, ಕವಿ ಹಿಂಸೆಯನ್ನ ಅನುಭವಿಸುತ್ತಾನೆ. ಹೀಗಾಗಿ ಲೇಖಕನನ್ನು ನಿರ್ದೇಶನ ಮಾಡುವವನು ಯಾರು ಇಲ್ಲ.

**ಪ್ರಶ್ನೆ**:- ಓಕೆ ಸರ್. ಲಕ್ಷ್ಮೀಪತಿಯವರು ಲೇಖಕರಾಗಿ ಬರಹಗಾರರಾಗಿ ಸಂಶೋಧಕರಾಗಿ ಸಂಸ್ಕೃತಿ ಪರಂಪರೆಯನ್ನು ಹುಡುಕುವ ಶೋಧದಲ್ಲಿ ನಿರತರಾಗಿರುತ್ತಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ.

**ಉತ್ತರ**:- ಅವರಲ್ಲಿ ನನಗೆ ಮುಖ್ಯವಾಗಿ ಕಾಣಿಸುವುದು 1) ನಿಸರ್ಗದ ನೆಲೆ, 2) ಸಂಸ್ಕೃತಿಯ ನೆಲೆ. ಕೆಲವರು ಹುಸಿ ಮೌಲ್ಯಗಳ ಸಂಸ್ಕೃತಿ ಆರಾಧಕರಾಗಿರುತ್ತಾರೆ. ಆದರೆ ಲಕ್ಷ್ಮೀಪತಿಯವರು ಸಂಸ್ಕೃತಿಯನ್ನು ನೋಡುವ ದೃಷ್ಟಿ ಕೋನವೇ ಭಿನ್ನವಾಗಿದೆ. ಅವರ ಸಂಸ್ಕೃತಿ ನಿಷ್ಠ ಶೋಧದಲ್ಲಿ ನೆಲಮುಟ್ಟುವ ಪ್ರೀತಿಯನ್ನು ಕಾಣಬಹುದು. ನೆಲ ಮುಟ್ಟುವ ಪ್ರೀತಿ ಅಂದರೆ, ಕೆಳಸ್ತರವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರೊಟ್ಟಿಗೆ ಅನುಸಂಧಾನ ಮಾಡುವುದೇ ನೆಲಮುಟ್ಟುವ ಪ್ರೀತಿ ಇದನ್ನ ನಾವು ಅವರ ಸಂಶೋಧನೆಯಲ್ಲಿ ಗಮನಿಸಬಹುದು.

**ಪ್ರಶ್ನೆ**:- ಲಕ್ಷ್ಮೀಪತಿ ಸರ್ ದಲಿತ ಮತ್ತು ತಳಸಮುದಾಯಗಳ ಬಗ್ಗೆ ಹೆಚ್ಚು ಸಂವೇದನಾಶೀಲರಾಗಿರುವುದನ್ನು ಗಮನಿಸಿದ ಕೆಲವರು ಇವರನ್ನ ದಲಿತರು ಎಂದು ಭಾವಿಸಿದ್ದರು. ಅವರ ಈ ಸಂವೇದನೆಯ ಹಿನ್ನೆಲೆಯಿಂದ ದಲಿತ ಸಾಹಿತಿ ಎನ್ನಬಹುದೆ?

**ಉತ್ತರ**:- ಹೌದ? ಕೆಲವರು ಲಕ್ಷ್ಮೀಪತಿಯವರನ್ನು ದಲಿತರೆಂದು ಕೊಳ್ತಾರೆ.ಈಗ ಪಂಪನನ್ನು ಯಾರಾದ್ರೂ ಸೂತ ಪುತ್ರ ಅಂತಂದ್ರ ಏನನ್ನಬೇಕು? ಯಾಕಂದ್ರೆ ಅವರು ಕರ್ಣನ ನೆನೆಸಿ ಕೊಳ್ಳಿ ಅಂತ ಹೇಳ್ತಾನೆ ಅಲ್ವಾ ಇದರಿಂದ ಪಂಪ ಸೂತ ಪುತ್ರ ಅಂದ್ರೆ ಏನೆನ್ನಬಹುದು. ಅಂಗೆ ಲಕ್ಷ್ಮೀಪತಿ ದಲಿತರಾಗಿರಬಹುದು ಅಂದ್ರೆ ನನ್ನ ಉತ್ತರ ಆದೇನೆ. ನಾವಿರಬೇಕಾದದ್ದು ಹಾಗೆ ದಲಿತರ ಪರ, ಶೋಷಿತರ ಪರ, ದಮನಿತರ ಪರ ಲೇಖಕನಾಗಲಿ ವಿಮರ್ಶಕನಾಗಲಿ ಸ್ಪಂದಿಸಬೇಕು. ಸ್ಪಂದಿಸಿದ ಮಾತ್ರಕೆ ಅವರು ಅದೇ ಆಗಿರಬಹುದು ಅಂದ್ರೆ ಅದು ಜಾತಿ ವಿಕಾರ ಇನ್ನೇನು ಅಲ್ಲ.

ದಲಿತ ಅನ್ನುವುದನ್ನು ನಾವು ಹುಟ್ಟಿನಿಂದ ತಗೋಬೇಕು. ಎಲ್ಲಾ ಜಾತಿಯ ಶೋಷಿತರು, ದಮನಿತರು, ಅವಮಾನಿತರು, ದಲಿತರೇ. ದಲಿತ ಅನ್ನೊಂದು ಜಾತಿಯಾದ್ರೆ ಕೊಳೆತು ನಾರುತ್ತೆ. ಅದ್ರೆ ಅದು ದಲಿತ ಅನ್ನೋದು ವರ್ಗವಾದರೆ! ಹೇಗೆ ಬಾವಿಯ ಕಪ್ಪೆ ನೀರಿಂದ ಮೇಲೆ ಬಂದು ಒಂದು ಬಾನಾಡಿಯಾಗುತ್ತೋ ಹಾಗೆ. ವಿಶಾಲ ಅರ್ಥ ಬರುತ್ತೆ. ಇದಕ್ಕೆ ಕೋಲಾರ ಜಿಲ್ಲೆ ಒಂದು ಉದಾಹರಣೆ. ಯಾಕಂದ್ರೆ ಕೋಲಾರ ಜಿಲ್ಲೆ 'ದಲಿತ ಚಳುವಳಿಯ ಗಂಗೋತ್ರಿ'. ಚಳುವಳಿಯು ಆರಂಭವಾದಾಗ ಬೇರೆ-ಬೇರೆ ಅನೇಕ ಜಾತಿಗಳಿದ್ದವು ಲಕ್ಷ್ಮೀಪತಿಯೂ ಸೇರಿ. ಇದು ದಲಿತ ಚಿಂತನೆ ಮತ್ತು ವ್ಯಾಖ್ಯಾನ ನೀವು ಜಾತಿಗಷ್ಟೆ ಸೀಮಿತ ಮಾಡಿದ್ರೆ? ಅದು ಅಲ್ಲೆ ಕೊಳೆತು ನಾರುತ್ತೆ. ನಾವು ಅಲ್ಲಿಗೆ ಬರಲಿಕ್ಕೆ ಸಾಧ್ಯವಾಗಲ್ಲ. ಒಂದು ರೀತಿಯ ಅಗ್ರಹಾರಗಳ ತರ. ದಲಿತ ಬರೆದದ್ದು ದಲಿತ ಸಾಹಿತ್ಯವಾದರೆ? ಅದು ಸಂಕುಚಿತವಾಗುತ್ತೆ. ಅದು ವಿಶಾಲತೆಯನ್ನು ಹೊಂದಿರಬೇಕು ನಾನು ದಲಿತ ಅನ್ನೋದನ್ನ ಜಂಗಮವಾಗಿಯೇ ನೋಡುತ್ತೇನೆ. ಸ್ಥಾವರವಾಗಿ ನೋಡಲ್ಲ. ನನ್ನನ ಒಪ್ಪದೆ ಇದ್ರು ನನಗೆ ಪರವಾಗಿಲ್ಲ.

**ಪ್ರಶ್ನೆ**:- ಲಕ್ಷ್ಮೀಪತಿ ಸರ್ ರವರ ವೈಚಾರಿಕತೆಯ ಹಿನ್ನೆಲೆಯಿಂದ, ಧಾರ್ಮಿಕ ಆಚರಣೆಗಳ ಬಗೆಗಿನ ಅಭಿಪ್ರಾಯಗಳು ಪರೋಕ್ಷವಾಗಿ ಬ್ರಾಹ್ಮಣ್ಯದ ಮೇಲೆ ಅಥವಾ ಮೇಲ್ವರ್ಗದವರ ಮೇಲಿನ ದಾಳಿ ಅನಿಸಲ್ವಾ?

**ಉತ್ತರ**:- ಇಲ್ಲ.. ಇಲ್ಲ..ಅವರು ಯಾರ ವಿರೋಧಿಯೂ ಅಲ್ಲ. ಒಬ್ಬ ಜವಾಬ್ದಾರಿ ವಿಚಾರವಾದಿ ಅನ್ನೋದು ನನ್ನ ಅಭಿಪ್ರಾಯ. ಈಗ ರಾಮಕೃಷ್ಣ (ಜಿ.ಆರ್) ಅವರು ಬ್ರಾಹ್ಮಣರು ಇವರ ವಿಚಾರವಾಗಿ ಮಾತಾಡೋ ಪ್ರಶ್ನೆಯೇ ಇಲ್ಲ ಅಲ್ವಾ? .ಅವರ ಒಟ್ಟು ದೃಷ್ಟಿಕೋನ ತಳ ಸಮುದಾಯ ಅನುಸಂಧಾನವೇ ಆಗಿರುತ್ತೇ. ಅಂದ್ರೆ ಯಾರು? ಎಲ್ಲಿ? ಹುಟ್ಟಿರುತ್ತಾರೆ ಅನ್ನುವುದು ಪ್ರಶ್ನೆಯಲ್ಲ. ತಳಸಮುದಾಯಗಳೊಂದಿಗೆ ಅನುಸಂಧಾನ ನಡೆಸೋದೇ ಮುಖ್ಯವಾಗುತ್ತೆ. ಲಕ್ಷ್ಮೀಪತಿಯುವರ ವಿಚಾರದಲ್ಲಿಯೂ ಅಷ್ಟೇ.

**ಪ್ರಶ್ನೆ**:- ಧಾರ್ಮಿಕ ಮೂಲಭೂತವಾದ ಎಲ್ಲಾ ರಂಗಗಳಲ್ಲೂ ಸವಾರಿ ಮಾಡುತ್ತಿರುವ ಈ ಸಂದರ್ಭದಲ್ಲಿ ಸಾಹಿತಿಗಳ ಮತ್ತು ಸಾಹಿತ್ಯದ ಜವಾಬ್ದಾರಿ ಏನು?

**ಉತ್ತರ**:- ಧಾರ್ಮಿಕ ಮೂಲ ಭೂತವಾದ ಅನ್ನೋದು ಈ ಹೊತ್ತಿನದಲ್ಲ. ಅದಕ್ಕೆ ದೊಡ್ಡ ಸಂಪ್ರದಾಯವಿದೆ. ಚಾರುವಾಕನ್ನ ಸುಟ್ರು, ಯಾಕೆ ಸುಟ್ರು? ಮಹಾಭಾರತದಲ್ಲಿ ಉಲ್ಲೇಖ ಬರುತ್ತೆ ಚಾರುವಾಕ ಯಾರು? ಚಾರುವಾಕ ಮತ ಅಂದ್ರೆ ಏನು? ನಿಮಗೆ ಗೊತ್ತಾಲ್ವಾ? 'Ancient Indian Materialism' ಅದನ್ನ ನಾವು ಚಾರುವಾಕ ಮತ ಅಂತ ಕಲಿತ್ತೀವಿ. ಅವನ್ನ ಸುಟ್ಟ ಉಲ್ಲೇಖ ಬರುತ್ತೆ. ಯೂರೋಫ್‌ನಲ್ಲೂ ಅದೇ ಅಲ್ವಾ ಚರ್ಚುಗಳು ಮಾಡಿದ್ದೇನು? Inquisition ನ ಹೆಸರಲ್ಲಿ ವಿಚಾರವಾದಿಗಳನ್ನ ವಿಜ್ಞಾನಿಗಳನ್ನೆಲ್ಲಾ ಸುಡೋದಿಕ್ಕೆ ಪ್ರಯತ್ನಿಸಿದ್ರು. ಆಗಾಗಿ ಧಾರ್ಮಿಕ ಮೂಲಭೂತವಾದಿ ಅನ್ನೋದು ಆಗಿಂದ ಈಗಿನವರೆಗೂ ಇದೆ. ಅದರ ಜೊತೆ ಹೋರಾಡಲೇ ಬೇಕಾಗಿದೆ. ಈಗ ಇಂಟರ್ ನ್ಯಾಷನಲ್ ಟೆರರಿಸಂ ಬಂದಿರುವುದು ಸಹ ಧಾರ್ಮಿಕ ಮೂಲಭೂತವಾದಿಯಿಂದಲೇ. ಅದೊಂದು ವಿಷ ವೃಕ್ಷ ಅರ್ಥಆಯಿತಲ್ವಾ. ಪುರೋಹಿತಶಾಹಿಯೇ ಬೇರೆ ಪುರೋಹಿತಶಾಹಿ ಅಂದ್ರೆ? ಬ್ರಾಹ್ಮಣರು ಅಂತ ಅರ್ಥ ಅಲ್ಲ. ಎಲ್ಲಾ ಮತ ಧರ್ಮಗಳಲ್ಲೂ ಪುರೋಹಿತಶಾಹಿ ಇರುತ್ತೇ. ಅದೇ ಬೇರೆ ಕೋಮುವಾದ ಕಾಂಡ.ಅಮೇಲೆ ಅದರ ಶಾಖೋಪ ಶಾಖೆಗಳಾಗಿ ಕೊನೆಗೆಸಿಗುವ ಫಲವೇ ಭಯೋತ್ಪಾದನೆ ಇದನ್ನ ಸಮಗ್ರವಾಗಿ ನೋಡಬೇಕು ನಾವು. ಸುಮ್ನೆ ನಾವು ಇದು ಕೋಮುವಾದ. ಪುರೋಹಿತಶಾಹಿ. ಭಯೋತ್ಪಾದನೆ. ಅಂತ ಬಿಡಿ ಬಿಡಿಯಾಗಿ. ತುಂಡು ತುಂಡಾಗಿ ನೋಡೋದು ಅಲ್ಲ. ಇವೆಲ್ಲಾ ಸೇರಿ ಒಂದು ವಿಷ ವೃಕ್ಷ ಅದು.ಈ ವಿಷವೃಕ್ಷದ ಜೊತೆ ನಾವು ನಿರಂತರ ಹೋರಾಟ ಮಾಡಬೇಕಾಗಿದೆ.

**ಪ್ರಶ್ನೆ:-** ಲಕ್ಷ್ಮೀಪತಿ ಕೋಲಾರ ಅವರ ಸಾಹಿತ್ಯದ ಬಗೆಗೆ ಅಧ್ಯಯನ ಕೈಗೊಂಡಿರುವುದಕ್ಕೆ ನಿಮ್ಮ ಅಭಿಪ್ರಾಯ ತಿಳಿಸಿ.

**ಉತ್ತರ:-**ತುಂಬಾ ಸಂತೋಷ. ನೀವು ಸಹ ಒಬ್ಬ ತಳ ಸಮುದಾಯದೊಂದಿಗೆ ಅನುಸಂಧಾನ ನಡೆಸುತ್ತಿರುವಂತಹ ಒಬ್ಬ ಲೇಖಕನ ಬದುಕು ಮತ್ತು ಬರಹವನ್ನು ಅಧ್ಯಯನ ಮಾಡ್ತಾ ಇದ್ದೀರಿ ಅಂತಂದ್ರೆ, ನೀವು ಸರಿಯಾದ ದಾರಿಯಲ್ಲಿ ಇದ್ದೀರಿ ಅಂತ ಅರ್ಥ ಅದೇ ನನ್ನ ಅಭಿಪ್ರಾಯ.

ಇಷ್ಟು ಹೊತ್ತು ತಮ್ಮ ಅಮೂಲ್ಯವಾದ ಸಮಯವನ್ನು ನಮ್ಮೊಂದಿಗೆ ಹಂಚಿಕೊಂಡು ಮಹತ್ವವಾದ ಮಾಹಿತಿಗಳನ್ನ ಕೊಟ್ಟಿದ್ದೀರಿ. ತುಂಬಾ ಧನ್ಯವಾದಗಳ ಸರ್.

## ಪರಾಮರ್ಶನ ಗ್ರಂಥಗಳು

೧) 'ಕಸಿ ಮಡಗಿದ ಕಣ್ಣು'- ಲಕ್ಷ್ಮೀಪತಿ ಕೋಲಾರ, ಸಿರಿವರ ಪ್ರಕಾಶನ, ಬೆಂಗಳೂರು-೨೦೧೩

೨) 'ನವಿಲು ಕಿನ್ನರಿ' ಕವನ ಸಂಕಲನ- ಲಕ್ಷ್ಮೀಪತಿ ಕೋಲಾರ, ಸುಭದ್ರ ಪ್ರಕಾಶನ, ಬೆಂಗಳೂರು-೭೮-೧೯೮೯

೩) 'ಕಾಲು ದಾರಿ' ವಿಮರ್ಶೆ-ಲಕ್ಷ್ಮೀಪತಿ ಕೋಲಾರ, ಎಂ.ಮೀನಾಕ್ಷಿ ರಮೇಶ್ ಪ್ರಕಾಶನ, ಬೆಂಗಳೂರು-೭೯-೨೦೦೯

೪) 'ನೀಲಿ ತತ್ತಿ' ಕವನ ಸಂಕಲನ- ಲಕ್ಷ್ಮೀಪತಿ ಕೋಲಾರ, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೧೪

೫) 'ಅಲ್ಲಮನ ಬಯಲಾಟ' ಲಕ್ಷ್ಮೀಪತಿ ಕೋಲಾರ, ರಂಗನಿರಂತರ, ಬೆಂಗಳೂರು-೭೬-೨೦೦೮

೬) 'ದಕ್ಷಿಣ ದಂಡಾ ಜೇಪಿಕ' ಸಂಶೋಧನಾ ಕೃತಿ. ಲಕ್ಷ್ಮೀಪತಿ ಕೋಲಾರ, ಪ್ರಕಾಶಕರು, ಸಿ.ಎಚ್.ಭಾಗ್ಯ, ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು-೦೨-೨೦೧೫

೭) 'ನೀರ ಚಿಗುರು' ಕವಿತೆಗಳು, ಲಕ್ಷ್ಮೀಪತಿ ಕೋಲಾರ, ಪ್ರಕಾಶಕರು, 'ಕೋ', ಬೆಂಗಳೂರು-೨೦೧೩

೮) 'ಆದಿಮ ಶಿವ ರಹಸ್ಯ' ಸಂಶೋಧನಾ ಕೃತಿ. ಲಕ್ಷ್ಮೀಪತಿ ಕೋಲಾರ, ಪ್ರಕಾಶಕರು, ಭಾರತ ಸರ್ಕಾರ ನವದೆಹಲಿ.

೯) 'ಪದ ಪಲ್ಲಕ್ಕಿ' ಲಕ್ಷ್ಮೀಪತಿ ಕೋಲಾರ ಅವರ ಸಂಪಾದಕ ಕೃತಿ. ಪ್ರೊ.ಕಮಲಾ ಹಂಪನಾ ಅಭಿನಂದನಾ ಗ್ರಂಥ, ಪ್ರರ್ಕಾಶಕರು: ಸಿ.ವಿ.ಜಿ.ಪಬ್ಲಿಕೇಷನ್ಸ್.

೧೦) 'ನಡೆಮುದೆ ದಾರಿ' ಪ್ರೊ.ವಿ.ಚಂದ್ರಶೇಖರ ನಂಗಲಿ, ಸಿವಿಜಿ ಪಬ್ಲಿಕೇಷನ್ಸ್ ಬೆಂಗಳೂರು.

೧೧ 'ಮಧುರಾಂತಿಕಂ ರಾಜಾರಾಂ ಕಥೆಗಳು' ತೆಲುಗಿನ ಅನುವಾದಿತ ಕೃತಿ. ಲಕ್ಷ್ಮೀಪತಿ ಕೋಲಾರ

೧೧) 'ಸಂಸ್ಕೃತಿ ಶ್ರಮ & ಸೃಜನಶೀಲತೆ', ಬರಗೂರು ರಾಮಚಂದ್ರಪ್ಪ

೧೨) 'ಅಧ್ಯಯನದ ವಿಧಿ ವಿಧಾನಗಳು'-ಸಂಪಾದಿತ ಡಾ॥ಕೆ.ರವೀಂದ್ರನಾಥ, ಪ್ರಸಾರಂಗ ಕೆ.ವಿ.ವಿ ಹಂಪಿ

೧೩) 'ಕನ್ನಡ ಅಧ್ಯಯನ ಸ್ಥಿತಿ-ಗತಿ' ಡಾ॥ ತಾಳ್ತಜೆ ವಸಂತ ಕುಮಾರ

೧೪) 'ಉರಿ ಚಮ್ಮಾಳಿಗೆ' ಡಿ.ಆರ್.ನಾಗರಾಜ್ ಅವರ 'ದಿ ಫ್ಲೇಮಿಂಗ್ ಫೀಟ್' ಕೃತಿಯ ಅನುವಾದ ಅನುವಾದಕರು-ಎಂ.ಎಸ್.ಆಶಾದೇವಿ.

೧೫) 'ಸಾಹಿತ್ಯ ಕಥನ' – ಡಾ॥ ಡಿ.ಆರ್.ನಾಗರಾಜ್.

೧೬) 'ನಮಸ್ಕಾರ' –ಎಚ್.ಎಸ್.ರಾಘವೇಂದ್ರರಾವ್.

೧೭) 'ಅಂತರ್ ಜಾಲದಲ್ಲಿನ ಕೆಲವು ಟಿಪ್ಪಣಿಗಳು' ವಿಕೀಪಿಡಿಯಾ

೧೮) 'ಲಕ್ಷ್ಮೀಪತಿ ಕೋಲಾರ' ಸಾಕ್ಷ್ಯಚಿತ್ರ, ವಾರ್ತಾ ಇಲಾಖೆ.

೧೯)	"ಕನ್ನಡ ನಿಘಂಟು" ಕನ್ನಡ ಸಾಹಿತ್ಯ ಪರಿಷತ್ತು.
೨೦)	'ರಾಜಕೀಯ ಪಾರಿಭಾಷಿಕ ಪದಕೋಶ' ಅನುವಾದ ಎಸ್.ಆರ್. ಭಟ್ ಸೀಮಾರ್ಕೆ, ಪ್ರಕಾಶಕರು, ನವಕರ್ನಾಟಕ ಪ್ರಕಾಶನ.

ದಿನ ಪತ್ರಿಕೆಗಳು
೧ ಪ್ರಜಾವಾಣಿ

ತ್ರೈಮಾಸಿಕ ಪತ್ರಿಕೆ
೧ ಅನಿಕೇತನ
೨ ಲೋಕ ಜಾನಪದ



ಲಕ್ಷ್ಮೀಪತಿಕೋಲಾರ ಅವರ ಛಾಯಚಿತ್ರ



ಲಕ್ಷ್ಮೀಪತಿಕೋಲಾರಅವರು ಮತ್ತು ಶ್ರೀಮತಿ ಚಿತ್ರಾ ಲಕ್ಷ್ಮೀಪತಿಕೋಲಾರ



ಕೇಂದ್ರ ಸಾಹಿತ್ಯಅಕಾಡೆಮಿ ಆಯೋಜಿಸಿದ ಕವಿಗೋಷ್ಠಿ, ೧೧/೦೬/೨೦೧೨



ಭಾರತೀಯ ಸಂಸ್ಕೃತಿ : ಮರುಮೌಲ್ಯಮಾಪನ ಮುಕ್ತ ಸಂವಾದಕಾರ್ಯಕ್ರಮದಲ್ಲಿ ಲಕ್ಷ್ಮೀಪತಿಕೋಲಾರ ಅವರು. ಮೈಸೂರು



'ಮನುಷ್ಯಜಾತಿತಾನೊಂದೇ ವಲಂ' ಶಬ್ದ ಬೆಳಕಿನ ರೂಪಕಕಾರ್ಯಕ್ರಮದಲ್ಲಿ ಭಾಗಿಯಾಗಿರುವ
ಲಕ್ಷ್ಮೀಪತಿಕೋಲಾರ ಅವರು



'ಮನುಷ್ಯಜಾತಿತಾನೊಂದೇ ವಲಂ' ಶಬ್ದ ಬೆಳಕಿನ ರೂಪಕಕಾರ್ಯಕ್ರಮದಲ್ಲಿ ಭಾಗಿಯಾಗಿರುವ
ಲಕ್ಷ್ಮೀಪತಿಕೋಲಾರ ಅವರು



ಪ್ರೊ.ಪಿ.ಚಂದ್ರಶೇಖರ್ ನಂಗಲಿ ಅವರ ಸಂದರ್ಶನ



ಪ್ರೊ.ಪಿ.ಚಂದ್ರಶೇಖರ್ ನಂಗಲಿ ಅವರ ಸಂದರ್ಶನ ನಂತರತೆಗೆದ ಛಾವಚಿತ್ರ.



ಲಕ್ಷ್ಮೀಪತಿಕೋಲಾರಅವರ 'ಪೋಸ್ಟ್ ಬಾಕ್ಸ್ ನಂ-೯' ನಾಟಕದಲ್ಲಿನ ದೃಶ್ಯ



ಲಕ್ಷ್ಮೀಪತಿಕೋಲಾರಅವರ 'ಪೋಸ್ಟ್ ಬಾಕ್ಸ್ ನಂ-೯' ನಾಟಕದಲ್ಲಿನ ಮತ್ತೊಂದು ದೃಶ್ಯ